# “ಸುಮಧ್ವವಿಜಯ ಸಂಗ್ರಹ”

““ಶ್ರೀಸುಮಧ್ವ ವಿಜಯ”ದ ಸಾರವನ್ನು ಇಲ್ಲಿ ವಿವರಿಸಲಾಗಿದೆ. ನನ್ನ ಈ ಕಾರ್ಯಕ್ಕೆ ಮೂಲ ಆಧಾರ – ಡಾ:ವ್ಯಾಸನಕೆರೆ ಪ್ರಭಂಜನಾಚಾರ್ಯರ (ಐತರೇಯ ಪ್ರಕಾಶನ) “ಸುಮಧ್ವವಿಜಯ” ಕನ್ನಡ ಅನುವಾದ.

ನನ್ನ ಗುರುಗಳಾದ ಮಧ್ವಶಾಸ್ತ್ರ ಸಂಪನ್ನರಾದ ವಿದ್ವಾನ್ ಶ್ರೀ ಹೊಳವನಹಳ್ಳಿ ಶ್ರೀನಿವಾಸಾಚಾರ್ಯರು ಮತ್ತು ನನ್ನ ತೀರ್ಥರೂಪು ಮಧ್ವಶಾಸ್ತ್ರ ಸಂಪನ್ನ ಪಂಡಿತರತ್ನಂ ವಿದ್ವಾನ್ ಶ್ರೀ ಎಸ್.ಎನ್.ರಾಮಚಂದ್ರಾಚಾರ್ಯರುಗಳ ಆಶೀರ್ವಾದದಿಂದ ಪ್ರಯತ್ನಿಸಿದ್ದೇನೆ. ಇದು ಮಧ್ವನವಮಿಯ ಪ್ರಯುಕ್ತ ಮಧ್ವರಾಯರ ಅನುಗ್ರಹಕಾಂಕ್ಷಿಯಾಗಿ ಬರೆದಿದ್ದೇನೆಯೇ ಹೊರತು ನನ್ನ ಸ್ವಂತಿಕೆಯೇನೂ ಇಲ್ಲ.

“ನನ್ನ ಈ ವಾಯುದೇವರ ಸೇವೆಯನ್ನು ನನ್ನ ದಿವಂಗತ ಮಾತೋಶ್ರೀ ಭಾರತೀಬಾಯಿಯವರ ಅಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಚಿಂತಲವಾಡಿ ನರಸಿಂಹದೇವರಿಗೆ ಸಮರ್ಪಿಸುತ್ತೇನೆ”

“ನರಹರಿ ಸುಮಧ್ವ”

# "ಸುಮಧ್ವವಿಜಯ ಸಂಗ್ರಹ"

## ೧ ನೇ ಅಧ್ಯಾಯ

**ಕಾಂತಾಯ ಕಲ್ಯಾಣಗುಣೈಕಧಾಮ್ನೇ ನವದ್ಯುನಾಥಪ್ರತಿಮಪ್ರಭಾಯ ।**
**ನಾರಾಯಣಾಯಾಖಿಲಕಾರಣಾಯ ಶ್ರೀಪ್ರಾಣನಾಥಾಯ ನಮಸ್ಕರೋಮಿ ॥**

ಮಂಗಳಾಚರಣ – ಶ್ರೀಮನ್ನಾರಾಯಣನಿಗೆ ವಂದನೆ,

ಶ್ರೀ ವಾಸಿಷ್ಟಕೃಷ್ಣ ಮತ್ತು ಯಾದವಕೃಷ್ಣರಿಗೆ ವಂದನೆ,

ಮಧ್ವಕೀರ್ತಿಯ ಮಹಿಮೆ, ಗುರುವಂದನೆ,

ಉದ್ದೇಶ – ವಾಯುದೇವರ ಅವತಾರವನ್ನು ವರ್ಣಿಸುವುದು

ಸ್ವಾಹಂಕಾರಖಂಡನ.

### ಹನುಮಂತದೇವರ ಲೀಲಾವರ್ಣನ –

ಪರಮಾತ್ಮನ ಅವತಾರಗಳಲ್ಲಿ ಆ ಭಗವಂತನಿಗೆ ಬೆಂಬಲಿಗರಾಗಿ ನಿಂತು ಆ ಸ್ವಾಮಿಯ ಸೇವೆಗೈಯುವವರು ಶ್ರೀ ಮುಖ್ಯಪ್ರಾಣದೇವರು. ಪರಮಾತ್ಮನು ದಶರಥನಲ್ಲಿ ರಾಮನಾಗಿ ಅವತಾರಮಾಡಿದಾಗ, ವಾಯುದೇವರು "ಕೇಸರಿ" ಮತ್ತು " ಅಂಜನಾ" ದೇವಿಯರಲ್ಲಿ ಅವತರಿಸಿದರು. ಪರಮ ಭಾಗವತ ಶಿರೋಮಣಿಯಾದ್ದರಿಂದಲೇ ಅವನನ್ನು "ಹನುಮಂತ" ಎಂದು ಕರೆಯುತ್ತಾರೆ. **"ಹನೂಮಾನ್"** ಎಂದರೆ ಕೆಲವರು ಇಂದ್ರದೇವರ ವಜ್ರಾಯುಧದ ಪೆಟ್ಟಿನಿಂದ ಅವನ "ಹನು" ಒಡೆದದ್ದೇ ಕಾರಣ ಎಂದು ತಪ್ಪಾಗಿ ತಿಳಿದಿರುವುದುಂಟು. ಆದರೆ ನಿಜವಾಗಿ **"ಹನು"** ಎಂದರೆ "ಜ್ಞಾನವಾಚೀ ಹನುಮಾನ್ ಮತಿಶಬ್ದಿತ:" (ಐತರೇಯೋಪನಿಷತ್ ಭಾಷ್ಯ). ಸುಗ್ರೀವಾದಿಗಳು ಶ್ರೀರಾಮನನ್ನು ಒಬ್ಬ ಅಪೂರ್ವ ವ್ಯಕ್ತಿ ಎಂದು ಮಾತ್ರವೇ ಕಂಡಿದ್ದರೆ, ಹನುಮಂತನು ಸಾಕ್ಷಾತ್ **"ರಮಾಪತಿಯಾದ ನಾರಾಯಣ"** ಎಂದು ತಿಳಿದಿದ್ದನು. ಅಂತಹ ಶ್ರೀರಾಮಚಂದ್ರನನ್ನು ನೋಡಿದಾಕ್ಷಣವೇ ಸಾಷ್ಟಾಂಗ ನಮಸ್ಕಾರ ಮಾಡಲು, ರಾಮಚಂದ್ರನು ತನ್ನ ಎರಡೂ ತೋಳುಗಳಿಂದ ಹನುಮಂತನನ್ನು ಹಿಡಿದೆತ್ತಿದ.

ವಾಲಿಯನ್ನು ಸಂಹಾರಮಾಡಿ, ಹನುಮಂತದೇವರನ್ನು ಸೀತಾಕೃತಿಯ ಅನ್ವೇಷಣೆಗೋಸ್ಕರ ದಕ್ಷಿಣದಿಕ್ಕಿಗೆ ಕಳುಹಿಸಿಕೊಟ್ಟನು.

ಗೋಭಿ: ಸಮಾನಂದಿತ ರೂಪಸೀತ: ಸ್ವವಹ್ನಿನಿರ್ದಗ್ಧಪಾಶಿರಾಶಿ: ।
ಅಹೋ ಹನೂಮನ್ನವವಾರಿದೋऽಸೌ ತೀರ್ಣಾಂಬುಧಿವಿಷ್ಣುಪದೇ ನನಾಮ ।

**ಈ ಶ್ಲೋಕದಿಂದ ಸುಂದರಕಾಂಡಕಥಾವನ್ನು ಸಂಗ್ರಹಿಸಿದ್ದಾರೆ.** ಹನುಮಂತದೇವರು ರಾಮನ ಸಂದೇಶದಂತೆ ಸೀತಾ ಅನ್ವೇಷಣಾ ಕಾರ್ಯದಲ್ಲಿ ನಿರತರಾಗಿ ಮಾರ್ಗದಲ್ಲಿ ಬಂದ ರಾಕ್ಷಸರನ್ನೆಲ್ಲ ಸದೆಬಡಿದು, ಲಂಕಾಪುರಕ್ಕಾಗಮಿಸಿ, ದ್ವಾರದಲ್ಲಿದ್ದ ಲಂಕಿಣಿಯನ್ನು ಕೊಂದು, ಸೀತೆಗೆ ಅಂಗುಲೀಯಕವನ್ನು ಕೊಟ್ಟು, ಅಕ್ಷಕುಮಾರನನ್ನು ಮತ್ತು ಸಾವಿರಾರು ದೈತ್ಯರನ್ನೂ ಸಂಹರಿಸಿ, ರಾವಣನೊಂದಿಗೆ ರಾಮನ ಗುಣಗಳನ್ನು ವರ್ಣಿಸಿ, ಸೀತೆಯನ್ನು ಬಿಡದಿದ್ದರೆ ನಿನ್ನ ಸರ್ವನಾಶ ಆಗುತ್ತದೆ ಎಂದು ಎಚ್ಚರಿಸಿ, ರಾವಣನು ಹನುಮನ ಬಾಲಕ್ಕೆ ಹಚ್ಚಿದ ಬೆಂಕಿಯಿಂದ ಲಂಕಾಪುರವನ್ನೇ ದಹಿಸಿ, ಸೀತಾದೇವಿ ಕೊಟ್ಟ ಚೂಡಾಮಣಿಯನ್ನು ತೆಗೆದುಕೊಂಡು ಶ್ರೀರಾಮನಿಗಿತ್ತು, ಲಂಕಾಪಟ್ಟಣಕ್ಕೆ ಸೇತುವೆಯನ್ನು ಕಟ್ಟಿ, ರಾವಣನಿಗೆ ಮುಷ್ಟಿಪ್ರಹಾರ ಮಾಡಿ, ಇತರ ಕಪಿಗಳು, ಹಾಗೂ ಲಕ್ಷ್ಮಣಾದಿಗಳು ಇಂದ್ರಜಿತುವಿನ ಅಸ್ತ್ರದಿಂದ ಮೂರ್ಛೆಗೊಂಡಾಗ ಇಡೀ ಸಂಜೀವನ ಪರ್ವತವನ್ನೇ ತಂದು ಎಲ್ಲರನ್ನೂ ಜಾಗ್ರತೆಗೊಳಿಸಿ, ಶ್ರೀರಾಮಚಂದ್ರನು ರಾವಣಾ-ಕುಂಭಕರ್ಣಾದಿಗಳನ್ನು ಸಂಹಾರ ಮಾಡಿದಮೇಲೆ ಅಯೋಧ್ಯೆಗೆ ಕರೆದೊಯ್ದು ರಾಮಚಂದ್ರನ ಪಟ್ಟಾಭಿಷೇಕ ನೆರವೇರಿಸಿದಾಗ ಶ್ರೀರಾಮನು ಹನುಮಂತನಿಗೆ **“ಸಹಭೋಗಪ್ರದಾನ”(ಬ್ರಹ್ಮಪದವಿ)**ವನ್ನು ನೀಡಿದನು. ಹನುಮಂತದೇವರು ಪರಮಾತ್ಮನನ್ನು ನಮಸ್ಕರಿಸುವ ರೀತಿಯನ್ನು ನಾರಾಯಣಪಂಡಿತಾಚಾರ್ಯರು ಹೀಗೆ ವರ್ಣಿಸಿದ್ದಾರೆ,

**ನಮೋ ನಮೋ ನಾಥ ನಮೋ ನಮಸ್ತೇ ನಮೋ ನಮೋ ರಾಮ ನಮೋ ನಮಸ್ತೇ**
**ಪುನಃ ಪುನಸ್ತೇ ಚರಣಾರವಿಂದಂ ನಮಾಮಿ ನಾಥೇತಿ ನಮನ್ ಸ ರೇಮೇ**

"ಎಲೈ ಸ್ವಾಮಿಯೇ ನಿನ್ನ ಚರಣಕಮಲಗಳಿಗೆ ಮತ್ತೆ ಮತ್ತೆ ವಂದಿಸುತ್ತೇನೆ" ಹೀಗೆ ಶ್ರೀರಾಮನಿಗೆ ಹನುಮಂತನು ನಮಸ್ಕರಿಸಿದನು.

ಶ್ರೀರಾಮದೇವರು ಭೂಲೋಕವನ್ನು ಬಿಟ್ಟು ಪರಂಧಾಮಕ್ಕೆ ತೆರಳುವ ಮುನ್ನ ಉಪಾಸನೆಗೆಂದು ತಮ್ಮನ್ನೇ ಹನುಮಂತನಿಗೆ ಕೊಟ್ಟುಬಿಟ್ಟರು. ಕಿಂಪುರುಷಖಂಡದಲ್ಲಿ ಹನುಮಂತನು ಶ್ರೀರಾಮಸೇವಾನಿರತನಾಗಿ, ಚಿರಂಜೀವಿಯಾಗಿ ನೆಲೆಸಿದ್ದಾನೆ. ಎಲ್ಲಿ ಸೀತಾ-ಶ್ರೀರಾಮಚಂದ್ರರ ಕಥೆ ನಡೆಯುತ್ತದೋ ಅಲ್ಲಿ ಹನುಮಂತನು ಖುದ್ದಾಗಿ ಬಂದು ಆಲಿಸುತ್ತಾನೆ.

## ಭೀಮಾವತಾರ ವರ್ಣನೆ -

ದ್ವಾಪರಯುಗದಲ್ಲಿ ಪಾಂಡುರಾಜನ ಪತ್ನಿ ಕುಂತಿಯಲ್ಲಿ (ವಾಯುದೇವರ ಮಗನಾಗಿ) ಭೀಮಸೇನನಾಗಿ ಅವತಾರ ಮಾಡಿ, ಹುಟ್ಟುತ್ತಲೇ ತಾಯಿಯ ಕೈಯಿಂದ ಜಾರಿದ ಶಿಶುರೂಪದ ಭೀಮಸೇನ ತನ್ನ ಸ್ಪರ್ಶಮಾತ್ರದಿಂದಲೇ ಶತಶ್ರುಂಗಪರ್ವತವನ್ನು ಪುಡಿಗೈದನು. ಭೀಮಸೇನದೇವರು ತಾನು ವನದಲ್ಲಿದ್ದಾಗ, ಸಿಂಹದ ಹಿಂಡುಗಳನ್ನೇ ಸಂಹರಿಸಿ ಹಾಕುತ್ತಿದ್ದರು, ದುರ್ಯೋಧನ ನೀಡಿದ ವಿಷದ ಲಡ್ಡುಗೆಯನ್ನು ತಿಂದು ಜೀರ್ಣಿಸಿಕೊಂಡು, ಅರಗಿನ ಮನೆಯಿಂದ ಪಾಂಡವರನ್ನೆಲ್ಲಾ ರಕ್ಷಿಸಿ, ಹಿಡಿಂಬನನ್ನು ಸಂಹರಿಸಿದನು.

**ಹನುಮಾವತಾರದಲ್ಲಿ ಲಂಕೆಯನ್ನೂ, ಭೀಮಾವತಾರದಲ್ಲಿ ಅರಗಿನಮನೆಯನ್ನೂ, ಮಧ್ವಾವತಾರದಲ್ಲಿ ದುರ್ಮತಗಳನ್ನೂ ಭಸ್ಮಮಾಡಿದರು. ಇದು ವಾಯುದೇವರ ಸ್ವಭಾವ ಎಂಬುದು ವಿಶೇಷ.**

ಭೀಮಸೇನದೇವರು ವೇದವ್ಯಾಸದೇವರಿಗೆ, ಸಕಲಪುಣ್ಯಕರ್ಮಗಳನ್ನೂ ಸಮರ್ಪಿಸಿ, ಮುಂದೆ ಮಾಡುವ ದುರ್ಯೋಧನಾದಿಗಳ ಸಂಹಾರಕಾರ್ಯವನ್ನೂ ಸಂಕಲ್ಪಮಾಡಿದರು. ಭೀಮಸೇನದೇವರು ದ್ರೌಪದಾದೇವಿ(ಭಾರತೀದೇವಿಯರು)ಯನ್ನು ವಿವಾಹವಾಗಿ, ಕೃಷ್ಣನ ಸಂದೇಶದಂತೆ ತನ್ನ ಮಹಾಗದೆಯಿಂದ ಬೃಹದ್ರಥಪುತ್ರ ಜರಾಸಂಧನನ್ನು ಸಂಹಾರ ಮಾಡಿ, ಧರ್ಮರಾಜನಿಂದ ರಾಜಸೂಯ ಯಾಗವನ್ನು ಮಾಡಿಸಿದರು. ದ್ರೌಪದಾದೇವಿಯರ ಅಪೇಕ್ಷೆಯಂತೆ ಸೌಗಂಧಿಕಾಪುಷ್ಪಹರಣ ಸಮಯದಲ್ಲಿ ಮಣಿಮಂತಾದಿ ಬಹುಸಂಖ್ಯೆಯ ರಾಕ್ಷಸರನ್ನೂ, ಸರ್ಪಗಳನ್ನೂ, ಸಂಹರಿಸಿದರು. ವಿರಾಟನಗರದಲ್ಲಿ ಕೀಚಕನನ್ನೂ, ಉಪಕೀಚಕನನ್ನೂ, ಮಹಾಭಾರತ ಯುದ್ಧದಲ್ಲಿ ಅತ್ಯಂತ ಹೆಚ್ಚು ಕೌರವರನ್ನೂ, ದೃತರಾಷ್ಟ್ರನ ನೂರೂಜನ ಮಕ್ಕಳನ್ನೂ ಕೊಂದು, ಅರ್ಜುನನ ಮೊಮ್ಮಗನಾದ ಪರೀಕ್ಷಿತರಾಜನಿಗೆ ರಾಜ್ಯಭಾರವನ್ನು ವಹಿಸಿ, ತನ್ನ ಮೂಲ ರೂಪವನ್ನು ಸೇರಿದರು.

ಹಿಂದೆ ಸೌಗಂಧಿಕಾಪುಷ್ಪಹರಣ ಸಂದರ್ಭದಲ್ಲಿ ಭೀಮಸೇನದೇವರು ಸಂಹರಿಸಿದ ಮಣಿಮಂತನೆಂಬ ದೈತ್ಯನು, ಕಲಿಯುಗದಲ್ಲಿ ಜನಿಸಿ, ರುದ್ರದೇವರನ್ನು ಮೆಚ್ಚಿಸಿ, ವೇದಾಧ್ಯಯನವನ್ನು ಮಾಡಿ, ಸನ್ಯಾಸವನ್ನು ಸ್ವೀಕರಿಸಿ, ಜನರಿಗೆ ಮೋಸ ಮಾಡಲೋಸುಗ, ತಾನು ಬೌದ್ಧಮತವನ್ನು ಇಷ್ಟಪಟ್ಟರೂ ಕೂಡ ಅದನ್ನು ಜಗತ್ತಿಗೆ ತೋರಗೊಡದೆ, ದುಷ್ಟನಾದ ಅವನು ಬೌದ್ಧಮತದ "ಅಸತ್" ಎಂಬುದನ್ನು

“ಸದಸದ್ವಿಲಕ್ಷಣ” ಎಂದೂ, “ಸಂವೃತಿ” ಎಂಬುದನ್ನು “ಮಾಯೆ” ಎಂದೂ ಕರೆದನು. “ಶೂನ್ಯತ್ವ”ವನ್ನು ಸಾಧಿಸಲೆಂದು ಬ್ರಹ್ಮನನ್ನು “ಅಖಂಡ” ಎಂದೂ ಕರೆದನು. ಅದರಿಂದ **“ಪ್ರಚ್ಛನ್ನಬೌದ್ಧ”** ಎಂದೇ ಪ್ರಸಿದ್ದನಾದನು.

**ವಿಶ್ವಂ ಮಿಥ್ಯಾ ವಿಭುರಗುಣವಾನಾತ್ಮನಾಂ ನಾಸ್ತಿ ಭೇದೋ**
**ದೈತ್ಯಾ ಇತ್ಥಂ ವ್ಯದಧತ ಗಿರಾಂ ದಿಕ್ಷು ಭೂಯಃ ಪ್ರಸಿದ್ದಿಮ್ ।**
**ಆನಂದಾರ್ದ್ರೈರ್ಗುರುಗುಣಗಣೈಃಮ್ ಪೂರಿತೋ ವಾಸುದೇವೋ**
**ಮಂದಂ ಮಂದಂ ಮನಸಿ ಚ ಸತಾಂ ಹಂತ ನೂನಂಽತಿರೋ ಭೂತ್ ॥**

ಬ್ರಹ್ಮಸೂತ್ರಕ್ಕೆ ವಿರುದ್ಧವಾಗಿ ಮಾತನಾಡುತ್ತಲೇ, ಅವುಗಳ ಭಾಷ್ಯಕಾರನೆಂದು ತನ್ನನ್ನು ಕರೆದುಕೊಂಡು, ಬ್ರಹ್ಮಸೂತ್ರಕ್ಕೆ ತಪ್ಪು ಅರ್ಥ ಬರುವ ಹಾಗೆ ಭಾಷ್ಯ ಬರೆದು, ಜನರೆಲ್ಲರನ್ನೂ ಮೋಸಗೊಳಿಸಿ, “ಜಗತ್ತು ಮಿಥ್ಯೆ, ಬ್ರಹ್ಮನು ನಿರ್ಗುಣ, ಚೇತನರಲ್ಲಿ ಎಂದೂ ಭೇದವಿಲ್ಲ”. ಅದರಿಂದ ಆನಂದಾದಿಗುಣಗಳಿಂದ ಭರಿತನಾದ ಪರಮಾತ್ಮನು ಸಜ್ಜನರ ಮನಸ್ಸಿನಿಂದ ಮೆಲ್ಲಮೆಲ್ಲನೆ ಸಂಪೂರ್ಣವಾಗಿ ಮರೆಯಾದನು.

# ೨ನೇ ಅಧ್ಯಾಯ

**ವಿಜ್ಞಾನಭಾನುಮತಿ ಕಾಲಬಲೇನ ಲೀನೇ**
**ದುರ್ಭಾಷ್ಯಸಂತಮಸಸಂತತತೊತೋ ಜನೇऽಂಧೇ।**
**ಮಾರ್ಗಾತ್ ಸತಾಂ ಸ್ಖಲತಿ ಖಿನ್ನಹೃದೋ ಮುಕುಂದಂ**
**ದೇವಾಶ್ಚತುರ್ಮುಖಮುಖಾ: ಶರಣಂ ಪ್ರಜಗ್ಮು: ॥**

ಶ್ರೀಮನ್ನಾರಾಯಣನಲ್ಲಿ ಬ್ರಹ್ಮಾದಿದೇವತೆಗಳು ಪ್ರಾರ್ಥನೆ ಮಾಡಿದಾಗ, ಪರಮಾತ್ಮನು ಸರ್ವಜ್ಞರಾದ ವಾಯುದೇವರಿಗೆ ಅವತಾರ ಮಾಡಲು ಆದೇಶವಿತ್ತನು. ಶ್ರೀಅನಂತಾಸನನಿಂದ ಜನತೆಗೆ ಮಧ್ವಾವತಾರದ ಬಗ್ಗೆ ಒಬ್ಬ ಸಾಮನ್ಯ ಚತುರನಲ್ಲದ ವ್ಯಕ್ತಿಯಲ್ಲಿ ಆವೇಶಮಾಡಿ ಮುನ್ಸೂಚನೆ ನೀಡಿದನು. ಮಧ್ಯಗೇಹದಂಪತಿಗಳ ಪೂರ್ವೋತ್ತರವನ್ನು, ಅವರ ಪವಿತ್ರದಾಂಪತ್ಯವನ್ನೂ ವಿವರಿಸಿದ್ದಾರೆ. **“ಯಂ ಭಟ್ಟ ಇತ್ಯಭಿವದಂತಿ ಜನಾ ವಿನೀತಮ್”** ಎಂದು ಭಟ್ಟ ಶಬ್ದದ ಅರ್ಥ – ಭಾರತ–ಪುರಾಣಗಳ ಮಹಾರಹಸ್ಯವನ್ನು ಅರಿತ, ಜ್ಞಾನ, ಭಕ್ತಿ, ವಿನಯಗಳ ತ್ರಿವೇಣೀ ಸಂಗಮವಾದುದರಿಂದಲೇ, ಮಧ್ಯಗೇಹಭಟ್ಟರನ್ನು “ಭಟ್ಟ” ಎಂದು ಕರೆಯುತ್ತಿದ್ದರು.

ಮಧ್ಯಗೇಹದಂಪತಿಗಳು ಸತ್ಪುತ್ರನನ್ನು ಪಡೆಯಲು ಪಯೋವ್ರುತಾದಿ ವ್ರುತವನ್ನು **"ತೀವ್ರೈ: ಪಯೋವ್ರತ ಮುಖ್ಯೈ:"** ಕಠಿಣಗಳಾದ ಕ್ಷೀರವ್ರತ, ಇತ್ಯಾದಿ ಕ್ರಮಗಳಿಂದ 12ವರ್ಷಕಾಲ ಮಾಡಿ, ನಂತರ ಉತ್ತಮ ಗರ್ಭಾಂಕುರವಾಗಿತ್ತು. ಭಗವಂತನ ಸೇವೆಯಿಂದ ಪರಿಶುದ್ಧರಾದ ಆ ಮಧ್ಯಗೇಹಭಟ್ಟರ ಸತಿಯು, ಗರ್ಭಿಣಿಯಾಗಿ ಶುಕ್ಲಪಕ್ಷದ ಚಂದ್ರನಂತೆ ಸುಂದರವಾದ ಶಿಶುವನ್ನು ಹಡೆದರು. ಆಗ ವಾಯುದೇವರು ಒಂದಂಶದಿಂದ ಭೂಮಿಗಿಳಿದು ಉಡುಪಿಯಲ್ಲಿರುವ ಅನಂತಾಸನ ದೇವರನ್ನು ವಂದಿಸಿ ಮಧ್ಯಗೇಹಭಟ್ಟರ ಮನೆಗೆ ಹೊದರು. ಅಲ್ಲಿ ಶಿಶುವಿನ ಶರೀರದಲ್ಲಿರುವ ಜೀವನನ್ನು(ಕುಬೇರಭೃತ್ಯನಾದ ಮಣಿಭದ್ರ) ಹೊರಗೆ ಹೊರಡಿಸಿ ತಾವು ಒಳಗೆ ಹೊಕ್ಕು ಶಿಶುವಿನಂತೆ ಜನಿಸಿದರು. (ಇಲ್ಲಿ ಶ್ರೀಮದಾಚಾರ್ಯರಿಗೂ ಕೂಡ ಗರ್ಭವಾಸಾದಿ ದು:ಖಗಳಿಲ್ಲ). ಆಗ ದೇವತೆಗಳು ನಗಾರಿಗಳನ್ನು ಬಾರಿಸಿದರು. ಆ ಧ್ವನಿಯನ್ನು ಮನುಷ್ಯರೂ ಕುತೂಹಲದಿಂದ ಕೇಳಿದರು. ತಂದೆ ಮಧ್ಯಗೇಹಭಟ್ಟರು ಶ್ರೀಅನಂತಾಸನನ್ನು ಸೇವಿಸಿ ಮನೆಗೆ ಹೋಗುತ್ತ ಹತ್ತಿರದಲ್ಲಿ ಮಗನ ಜನನವನ್ನು ಸೂಚಿಸುವ ನಗಾರಿಯ ಧ್ವನಿಯನ್ನು ಕೇಳಿ ಆನಂದಗೊಂಡರು. ಮನೆಯನ್ನು ಸೇರಿ ಮಗುವಿನ ಚಂದ್ರನಂತಿರುವ ಮುಖವನ್ನು ಕಂಡು ಸಂತೋಷಪಟ್ಟರು. ಅಂತಹ ಸುಪುತ್ರನನ್ನು ಕರುಣಿಸಿದ ಶ್ರೀಮನ್ನಾರಾಯಣನ ದಯೆಯನ್ನು ಹೊಗಳಿದರು.

## ನಾಮಕರಣ –

ಮಗುವಿಗೆ "ವಾಸುದೇವ" ಎಂಬ ಅನ್ವರ್ಥನಾಮವನ್ನು ಮಧ್ಯಗೇಹದಂಪತಿಗಳು ನಾಮಕರಣ ಶಾಸ್ತ್ರ ಮಾಡಿ ಇಟ್ಟರು. ವಾಸುದೇವ ಎಂದರೆ "ವಾ" ಎಂದರೆ "ಗತಿ" ಎಂದರ್ಥ. ಗತಿ ಎಂದರೆ ಜ್ಞಾನ. ಆದ್ದರಿಂದ ವಾರ್ಥಂ–ಎಂದರೆ, ಜ್ಞಾನಾರ್ಥಂ ಎಂದೂ; ಮತ್ತು "ವಾಸುದೇವಸ್ಯ"(ಭಕ್ತಃ) ಆಯಮ್(ವಾಸುದೇವನ ಭಕ್ತನಾದ್ದರಿಂದ ವಾಸುದೇವ) ಎಂದೂ ಈ ಪದಕ್ಕೆ ಅರ್ಥ;)

## ಮಗುವಿನ ವಿಚಿತ್ರಲೀಲೆಗಳು –

೧. ಒಂದುದಿನ ಮಧ್ಯರಾತ್ರಿವೇಳೆ ಘೋರವಾದ ಅರಣ್ಯದಲ್ಲಿ ಅನಂತಾಸನನ್ನು ನೋಡಿಕೊಂಡು ವಾಪಸ್ಸು ಬರುತ್ತಿದ್ದಾಗ, ಒಂದು ಭೂತವು ಪರಿವಾರದವನೊಬ್ಬನನ್ನು ಪೀಡಿಸಿತು. ಅವನು ರಕ್ತವನ್ನೂ ಕಾರಿಕೊಂಡನು. ಆದರೆ ಶಿಶುವಾದ "ವಾಸುದೇವ"ನಿಗೆ ಏನನ್ನೂ ಮಾಡಲಿಲ್ಲ, ಮತ್ತು ಹೇಳಿತು "ಈ ಮಗು ಇಲ್ಲದಿದ್ದಲ್ಲಿ ಎಲ್ಲರನ್ನೂ ಕೊಂದುಬಿಡುತ್ತಿದ್ದೇ".

೨. ಒಂದುದಿನ ತಾಯಿಯು ಮಗುವನ್ನು ತನ್ನ ಮಗಳಿಗೆ ಜವಾಬ್ದಾರಿ ವಹಿಸಿ ಹೊರಗೆ ಹೋಗಿದ್ದಾಗ, ವಾಸುದೇವನು ಜೋರಾಗಿ ಅಳಲು, ತಾನೇನು ಮಾಡಬೇಕೆಂದು ತೋಚದೆ ಅಲ್ಲೇ ಹಸುವಿಗೆಂದು ಇಟ್ಟಿದ್ದ ಹುರಳಿಯನ್ನು ತಿನ್ನಿಸಲು ಮಗು ಅಳುವುದನ್ನು ನಿಲ್ಲಿಸಿ ಆರಾಮವಾಗಿ ಆಟವಾಡಿಕೊಂಡಿತ್ತು. ಕಾಲಕೂಟವಿಷವನ್ನೇ ನುಂಗಿದ್ದ ವಾಯುದೇವರಿಗೆ ಹುರಳಿ ಏನು ಮಾಡೀತು?

೩. ಒಂದು ದಿನ ಮಗು "ವಾಸುದೇವ" ಎತ್ತಿನ ಬಾಲವನ್ನು ಹಿಡಿದುಕೊಂಡು, ತಾನೂ ಕಾಡಿಗೆ ಹೋಯಿತು. ತಂದೆತಾಯಿಗಳೆಲ್ಲ ಮನೆಯೆಲ್ಲಾ ಹುಡುಕಿದರೂ ಸಿಗಲಿಲ್ಲ. ಕಡೆಗೆ ಸಂಜೆ ಹೊತ್ತಿಗೆ ಮಗು ವಾಪಸ್ಸು ಎತ್ತಿನಜೊತೆಗೇ ವಾಪಸ್ಸು ಬಂದಿತು. ಅಷ್ಟುಹೊತ್ತು ಎತ್ತಿನ ಜೊತೆ ನಡೆದುಕೊಂಡು ಕಾಡಿನಲ್ಲೆಲ್ಲಾ ಸುತ್ತಾಡಿ ಬಂದರೂ ವಾಸುದೇವನಲ್ಲಿ ಯಾವುದೇ ನೋವೂ ಕಾಣಲಿಲ್ಲ. ಅಂತಹ ವಾಸುದೇವನ ದರ್ಶನದಿಂದ ಅವನ ತಂದೆತಾಯಿಗಳಿಗೆ ಮಹದಾನಂದವಾಯಿತು.

ಒಮ್ಮೆ ವಾಸುದೇವನು ಆಟಮುಗಿದಾಗ, ತನ್ನ ತಂದೆಯನ್ನು ಊಟಕ್ಕೆ ಕರೆಯಲು, ಮಧ್ಯಗೇಹ ಭಟ್ಟರು “ನಾನು ಈ ಧನಿಕನಿಗೆ ನಾವು ಕೊಂಡಿದ್ದ ಎತ್ತಿನ ಮೌಲ್ಯವನ್ನು ಕೊಡದೆ ಊಟ ಮಾಡುವಂತಿಲ್ಲ” ಎನ್ನಲು, ಕೂಡಲೇ ವಾಸುದೇವನು ನಸುನಗುತ್ತಾ ಅಲ್ಲೇ ಬಿದ್ದಿದ್ದ ಹುಣಿಸೇಬೀಜಗಳನ್ನು ಆ ಧನಿಕನಿಗೆ ಕೊಡಲು, ಆ ಧನಿಕನು ಬಹಳ ಸಂತೋಷದಿಂದ ವಾಪಸ್ಸು ಹೊರಟೇಬಿಟ್ಟನು. ಕಾಲಾಂತರದಲ್ಲಿ ಭಟ್ಟರು ತಮ್ಮ ಹಣವನ್ನು ಹಿಂತಿರುಗಿಸಲು ಹೋದಾಗ “ನಿಮ್ಮ ಮಗ ಅವತ್ತೇ ಎಲ್ಲ ಹಣವನ್ನೂ ಕೊಟ್ಟನು” ಎಂದನು. ಧನಿಕನಿಗೆ ಹುಣಿಸೇಬೀಜಗಳಲ್ಲಿ ಧನದ ಬುದ್ಧಿಯನ್ನು ಹುಟ್ಟಿಸಿ ಉದ್ಧರಿಸಿದನು.

ಇತಿ ವಿಹರತಿ ಮಹ್ಯಾಂ ವಿಷ್ಣುದಾಸೇऽಪಿ ಗೂಢೇ
ಸಮಜನಿ ಸುಜನಾನಾಮ್ ಚಿತ್ತಮಾನಂದಪೂರ್ಣಮ್ ।
ಉದಯತಿ ಘನಮಾಲಾಲೀನಭಾನೌ ಚ ಭಾನೌ
ನನು ಜನನಯಾನಾಬ್ಜೈರ್ಲಭ್ಯತೇऽಲಂ ವಿಕಾಸ: ॥

ಹೀಗೆ ವಾಯುದೇವರು ಭೂಮಿಯ ಮೇಲೆ ಗುಪ್ತವಾಗಿ ವಿಹರಿಸುತ್ತಿರಲು, ಸಜ್ಜನರ ಮನಸ್ಸು ಆನಂದದಿಂದ ತುಂಬಿತು.

# ತೃತೀಯ ಸರ್ಗ

**ಅಥ ಕದಾಚನ ಸುಂದರನಂದನಸ್ಮಿತಮುಖೇಂದುದೃಷಾಂ ದಯಿತೌ ನೃಣಾಮ್ ।**

**ಮಹಮಿತೋ ನಿಜಬಂಧುಮುದೇ ಮುದಾ ಪ್ರಯಯತು: ಸ್ವಜನೈ: ಸಹ ದಂಪತೀ ॥**

ಒಮ್ಮೆ ಭಟ್ಟರು ಪತ್ನೀ ಪುತ್ರರೊಡಗೂಡಿ ನಯಂಪಳ್ಳಿಯ ತಮ್ಮ ಬಂಧುಗಳೊಬ್ಬರ ಮನೆಗೆ ವಿವಾಹ ಮಹೋತ್ಸವಕ್ಕೆ ಹೋಗಿದ್ದರು. ಮದುವೆ ಮನೆಗೆ ಬಂದು ಹೋಗುತ್ತಿರುವ ಬಂಧುಬಳಗದವರ ಗದ್ದಲದಲ್ಲಿ ಸೇರಿಕೊಂಡು ಆಡುತ್ತಿದ್ದ ವಾಸುದೇವನು ಇದೇ ಸಮಯ ಸಾಧಿಸಿ ಯಾರಿಗೂ ತಿಳಿಯದಂತೆ ಹೊರಟೇ ಹೋದನು. ಮಧ್ಯ ಮಾರ್ಗದಲ್ಲಿ ಕೆಲವರು "ಎಲೈ ಬಾಲಕನೇ ಎಲ್ಲಿಗೆ ಒಬ್ಬನೇ ಹೋಗುತ್ತಿರುವೆ? ನಿನ್ನೊಡನೆ ಯಾರೂ ರಕ್ಷಕರಿಲ್ಲವೆ? ಎಂದು ಪ್ರಶ್ನಿಸಿದರೂ ಚತುರನಾದ ಈ ಬಾಲಕನು ಅವರಿಗೆ ಮುದ್ದು ಮೊಗದ ನಗುವನ್ನೇ ಉತ್ತರವಾಗಿ ಕೊಟ್ಟು ತಾನು ಮುಂದುವರೆದನು. ವಾಸುದೇವನು ಮೊಟ್ಟಮೊದಲು ಕೊಡವೂರೆಂದು ಪ್ರಸಿದ್ದವಾದ ಕ್ರೋಡ ಮಹರ್ಷಿ ಪ್ರತಿಷ್ಠಿತವಾದ ಶಂಕರನಾರಾಯಣ ದೇವಸ್ಥಾನಕ್ಕೆ ಹೋಗಿ ದೇವರನ್ನು ವಂದಿಸಿದನು. ಅಲ್ಲಿಂದ ಮುಂದೆ ಹೊರಟು ಬನ್ನಂಜೆ ತಲುಪಿ ನಾರಾಯಣನಿಗೆ ನಮಿಸಿ, ಮುಂದೆ ರಜತಪೀಠಪುರ (ಉಡುಪಿ) ತಲುಪಿ ಅನಂತಾಸನನನ್ನು ಹಾಗೂ ಚಂದ್ರಮೌಳೇಶ್ವರನನ್ನೂ ದರ್ಶನ ಮಾಡಿದರು.

**ಅಕ್ಷರಾಭ್ಯಾಸ** – ಭಟ್ಟರು ಭಾರತೀಪತಿಗಳಾದ"ವಾಸುದೇವ"ನಿಗೆ "ಅಕ್ಷರಾಭ್ಯಾಸ"ವನ್ನು ಮಾಡಿದರು. ಮಾರನೇ ದಿನ ಪುನರಾವೃತ್ತಿಗಾಗಿ ಹಿಂದಿನದಿನ ಬರೆದ ಅಕ್ಷರವನ್ನೇ ಮತ್ತೆ ಬರೆಯಲು ಹೇಳಿದರೆ, ವಾಸುದೇವನು, ತಮ್ಮ ತಂದೆಯನ್ನು ಎಷ್ಟುಸಲ ಅದೇ ಅಕ್ಷರವನ್ನೇ ಬರೆಯುವುದು, ಮುಂದಿನ ಅಕ್ಷರವನ್ನು ಹೇಳಿಕೊಡು ಎಂದು ಕೇಳಿ ಆಶ್ಚರ್ಯಪಡಿಸಿದನು.

**ಪುರಾಣದಲ್ಲಿ** – ಒಂದುದಿನ ಶಿವಭಟ್ಟನೆಂಬ ಪೌರಾಣಿಕನು ಉಪನ್ಯಾಸ ಮಾಡುತ್ತಿದ್ದಾಗ, ವಾಸುದೇವನು, ಆ ಪುರಾಣಿಕನು ಹೇಳಿದ ಅರ್ಥ ಸರಿಯಲ್ಲ ಎಂದು ಹೇಳಿ ಜನಗಳ ಕೋರಿಕೆಯ ಮೇರೆಗೆ ಸರಿಯಾದ ಅರ್ಥವನ್ನು ವಿವರಿಸಿದನು.

**"ಲಿಕುಚ"ಶಬ್ದಾರ್ಥ** – ಒಮ್ಮೆ ಮಧ್ಯಗೇಹ ಭಟ್ಟರು ಉಪನ್ಯಾಸ ಮಾಡುತ್ತಿದ್ದಾಗ, "ಲಿಕುಚ" ಶಬ್ದದ ಅರ್ಥವನ್ನು ಹೇಳದೆ, ಮುಂದಕ್ಕೆ ಹೋಗಲು ವಾಸುದೇವನು ತಂದೆಗೆ ಕೂಡಲೇ ಏತಕ್ಕೆ ಆ ಶಬ್ದದ ಅರ್ಥವನ್ನು ಹೇಳಲಿಲ್ಲ ಎಂದು ಎಲ್ಲರ ಮುಂದೆ ಕೇಳಿದಾಗ, ತಂದೆಗೆ ಆ ಪದದ ಅರ್ಥ ಗೊತ್ತಿರಲಿಲ್ಲ. ಆಗ ವಾಸುದೇವನೇ ಲಿಕುಚ ಶಬ್ದದ ಅರ್ಥ – ಹೆಬ್ಬಲಸು, ತುಳುಭಾಷೆಯಲ್ಲಿ ಪೆಜಕಾಯಿ ಎಂದು ಹೇಳಿ ಎಲ್ಲರನ್ನೂ ಚಕಿತಗೊಳಿಸಿದನು.

**ಬ್ರಹ್ಮೋಪದೇಶ** – ಭಾವೀ ಬ್ರಹ್ಮರಾದ ವಾಯುದೇವರ ಅವತಾರನಾದ ವಾಸುದೇವನಿಗೆ ಐದನೇ ವಯಸ್ಸಿನಲ್ಲಿ ಶುಭಮುಹೂರ್ತದಲ್ಲಿ ಉಪನಯನೋತ್ಸವವನ್ನು ನೆರವೇರಿಸಿದರು.

**ಸರ್ಪರೂಪಿ ಮಣಿಮಂತನ ನಾಶ** – ಒಮ್ಮೆ ಜಗನ್ಮಾತೆಯಾದ ದುರ್ಗೆಯನ್ನು ನೋಡಲು ವಿಮಾನಗಿರಿಗೆ ತೆರಳಿದ್ದಾಗ, ದೈತ್ಯ ಮಣಿಮಂತನು ಸರ್ಪರೂಪದಿಂದ ಬಂದು ವಾಸುದೇವನನ್ನು ಕಚ್ಚಲು, ವಾಸುದೇವನು ತನ್ನ ನಯವಾದ ಅಂಗುಷ್ಟದ ತುದಿಯಿಂದ ಮೆಟ್ಟಿ ಆ ಸರ್ಪವನ್ನು ಗರುಡನ ಕೊಕ್ಕಿಗೆ ಸಿಕ್ಕಿದಹಾಗೆ ಸಂಹರಿಸಿದನು.

**ಗುರುಕುಲವಾಸ** – ಜಗದ್ಗುರುಗಳಾದ ವಾಯುದೇವರ ಅವತಾರನಾದ ವಾಸುದೇವನು ಗುರುಕುಲವಾಸಕ್ಕೆಂದು ತೋಟಂತಿಲ್ಲಾಯರ ಬಳಿಗೆ ತೆರಳಿ ಅಧ್ಯಯನವನ್ನು ಪ್ರಾರಂಭಿಸಿದರು. ಅಲ್ಲಿಗೆ ತನ್ನ ಗೆಳೆಯರೊಂದಿಗೆ ಸಕಲ ಆಟ ಪಾಠಗಳಲ್ಲೂ ತಾನೇ ಮುಂದಿರುತ್ತಿದ್ದನು. ಒಮ್ಮೆ ಅಧ್ಯಯನಕಾಲದಲ್ಲಿ, ವಾಸುದೇವನು ಅನ್ಯಮನಸ್ಕನಾಗಿದ್ದನ್ನು ನೋಡು ಗುರುಗಳು ಕೋಪದಿಂದ ಅವನನ್ನು ನಿಂದಿಸಿ "ಏತಕ್ಕೆ ಉದಾಸೀನನಾಗಿರುವೆ" ಎನ್ನಲು ಗುರುಗಳು ಹೇಳಿದ ಪಾಠವಲ್ಲದೆ ಇನ್ನೂ ಹೇಳಿಕೊಡದ ಮುಂದಿನ ಭಾಗವನ್ನೂ ಹೇಳಿ ಗುರುಗಳನ್ನು, ಜಗತ್ತನ್ನೂ, ದೇವಾದಿದೇವತೆಗಳನ್ನೂ ಅವಾಕ್ಕಾಗಿಸಿದನು.

- ಗುರುಕುಲದಲ್ಲಿದ್ದಾಗ ವಾಸುದೇವನು ಜಲವಿಹಾರದಲ್ಲೂ, ದ್ವಂದ್ವಯುದ್ಧದಲ್ಲೂ, ಸಕಲಕ್ರೀಡೆಗಳಲ್ಲೂ, ಎಲ್ಲ ಸಹಪಾಠಿಗಳನ್ನೂ ಮೀರಿಸುತ್ತಿದ್ದರು.

- ಒಮ್ಮೆ ನಿರ್ಜನವಾದ ಕಾಡಿನಲ್ಲಿ ತನ್ನ ಪ್ರೀತಿಯ ಸ್ನೇಹಿತನಾದ ಗುರುಪುತ್ರ ವಾಸುದೇವನಿಗೆ ಉಂಟಾದ, ಹುಟ್ಟಿದಂದಿನಿಂದಲೂ ಇದ್ದು, ಆಗ ಕಾಣಿಸಿಕೊಂಡ ಸಹಿಸಲಸಾಧ್ಯವಾದ ತಲೆನೋವನ್ನು, ವಾಸುದೇವ ತನ್ನ ಮುಖದಿಂದ ಗಾಳಿಯನ್ನು ಅವನ ಕಿವಿಯಲ್ಲಿ ಊದುವ ಮಾತ್ರದಿಂದಲೇ ಪೂರ್ಣವಾಗಿ ಪರಿಹರಿಸಿದನು. "ಪ್ರಿಯ ವಯಸ್ಯ ಶಿರೋ: ಗುರುವೇದನಾಮ ಅಶಮಯತ್". ಈಗಲೂ ಕೆಲವು ಸಂಪ್ರದಾಯಸ್ಥರು ಈ ಮಂತ್ರವನ್ನು ಹೇಳಿಕೊಂಡು ತಮ್ಮ ತಲೆಶೂಲೆಯನ್ನು ಕಡಿಮೆಮಾಡಿಕೊಂಡ ಉದಾಹರಣೆಗಳು ಇವೆ.

- ಒಮ್ಮೆ ಏಕಾಂತದಲ್ಲಿ ಐತರೇಯೋಪನಿಷತ್ತಿನ ಪಾಠದ ನೆಪದಲ್ಲಿ ವಾಸುದೇವ ಗುರುಗಳಿಗೆ ಅದರ ಅಪೂರ್ವಾರ್ಥವನ್ನು ತಿಳಿಸುವ ಮೂಲಕ ಮೋಕ್ಷಕ್ಕೆ ಬೀಜವಾದ ಯೋಗ್ಯಹರಿಭಕ್ತಿಯನ್ನೇ ಗುರುದಕ್ಷಿಣೆಯಾಗಿ ನೀಡಿದ.

ಅಯಿ ಸ್ವಾಮಿನ್ ದುಷ್ಟಾನ್ ದಮಯ ದಮಯ ವ್ಯಕ್ತಮಚಿರಾ–
ದ್ಗುಣಾನ್ ಗೂಢಾನ್ ವಿಷ್ಣೋಃ ಕಥಯ ಕಥಯ ಸ್ವಾನ್ ಪ್ರಮದಯನ್ ।
ತದಾSSನಂದಂ ತನ್ವನ್ನಿತಿ ಸುಮನಸಾಂ ಸೋऽನುಸರತಾ–
ಮನುಜ್ಞಾಮಾದತ್ತ ತ್ರಿಭುವನಗುರುಬ್ರಾಹ್ಮಣಗುರೋಃ ॥

ವಾಸುದೇವನು ಗುರುಕುಲವಾಸವನ್ನು ಜ್ಞಾನಸಂದೇಶರೂಪವಾದ ಅತ್ಯಂತ ಯೋಗ್ಯ ಗುರುದಕ್ಷಿಣೆಯನ್ನಿತ್ತು ಪೂರೈಸಿ ಮನೆಗೆ ಹಿಂತಿರುಗಿದನು.

# ಚತುರ್ಥ ಸರ್ಗ

ಅಥೈಷ ಸಲ್ಲೋಕದಯಾಸುಧಾರ್ದ್ರಯಾ ಸದಾಗಮಸ್ತೇನನಿರಾಸಕಾಮಯಾ ।
ರಮಾವರಾವಾಸಭುವಾ ವಿಶಾರದೋ ವಿಶಾಲಯಾಽಚಿಂತಯದಾತ್ಮನೋ ಧಿಯಾ ॥

## ವಾಸುದೇವನ ಸನ್ಯಾಸ ನಿಶ್ಚಯ –

"ವಿಷಯ ಸಂಗವನ್ನು ಪೂರ್ಣವಾಗಿ ತೊರೆದಾಗಲೇ, ವಿಷ್ಣುವಿನ ಗುಣಗಳಲ್ಲಿ ಆದರ ಹುಟ್ಟುವುದು; ಲೋಕದಲ್ಲಿ ಜನರು ಮಹಾತ್ಮರ ಮಾತಿಗೇನೆ ಬೆಲೆ ಕೊಡತಕ್ಕವರು. ನನ್ನಂತಹ ಸಾಮಾನ್ಯನಾದ ತರುಣನ ಮಾತಿಗೆ ಬೆಲೆಕೊಡುವರಾರು? ಆದ್ದರಿಂದ ಕಾರ್ಯಸಾಧಿಸಲು (ಅವತಾರಕಾರ್ಯ) ಪರಮಹಂಸಾಶ್ರಮವನ್ನು ಸ್ವೀಕರಿಸುವುದೇ ಸೂಕ್ತವೆಂದು ತೀರ್ಮಾನಿಸಿ, ಸೂಕ್ತ ಗುರುಗಳನ್ನು ಅನ್ವೇಷಿಸಿದಾಗ ಅವನಿಗೆ ಕಂಡದ್ದು ಸಾರ್ಥಕನಾಮದ ಅಚ್ಯುತಪ್ರೇಕ್ಷಾಚಾರ್ಯರು. (ಅಚ್ಯುತಪ್ರೇಕ್ಷರು ಹಿಂದಿನ ಜನ್ಮದಲ್ಲಿ ಒಬ್ಬ ಯತಿಯಾಗಿದ್ದು ಮಧುಕರವೃತ್ತಿಯಿಂದ ಜೀವಿಸುತ್ತಾ ಪಾಂಡವರ ಮನೆಯಲ್ಲಿ ಕೆಲವು ವರ್ಷಗಳ ಕಾಲ ದ್ರೌಪದಾದೇವಿಯ ಅಮೃತಹಸ್ತದಿಂದ ಸಿದ್ದವಾದ ಅನ್ನವನ್ನು ಸೇವಿಸಿ ನಿರ್ಮಲಗೊಂಡಿದ್ದರು).

ಅಚ್ಯುತಪ್ರೇಕ್ಷರ ಹಾಗೂ ಅವರ ಗುರುಗಳಿಗೂ ಕೂಡ, "ಅಧ್ವೈತ ತತ್ವ" ವನ್ನು ಅನುಸರಿಸಿದ್ದರೂ ಅದರಲ್ಲಿ ನಂಬಿಕೆ ಇರಲಿಲ್ಲ. ಅವರ ಮನಸ್ಸಿಗೆ ಹಿಡಿಸಿರಲಿಲ್ಲ. ಅಂತಹ ಅಚ್ಯುತಪ್ರೇಕ್ಷರ ಬಳಿ ಬಂದು ತಾನು ಸನ್ಯಾಸವನ್ನು ಅಪೇಕ್ಷಿಸಿದನು. ಮತ್ತು ಸನ್ಯಾಸದ ನಿಶ್ಚಯವನ್ನು ತಂದೆತಾಯಿಗಳಿಗೆ ಹೇಳಲು, ಇಬ್ಬರೂ ಒಪ್ಪದೇ, ಅವರೇ ವಾಸುದೇವನಿಗೆ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ "ಮಗು ! ನೀನು ವೃದ್ಧರಾದ ನಮ್ಮನ್ನು ತ್ಯಜಿಸಿ ಸಂನ್ಯಾಸ ಸ್ವೀಕರಿಸಬೇಡ" ಎಂದು ಪ್ರದಕ್ಷಿಣೆ ನಮಸ್ಕಾರ ಮಾಡಿ ಕೇಳಿಕೊಂಡರು.. ಆಗ ವಾಸುದೇವನು "ಚಿಕ್ಕವರಿಗೆ ದೊಡ್ಡವರು ಹೀಗೆ ನಮಸ್ಕರಿಸುವುದು ತರವಲ್ಲ, ನೀವಿಬ್ಬರೂ ನನಗೀಗ ನಮಸ್ಕರಿಸಿರುವುದರಿಂದ ನಿಮ್ಮ ಅನುಮತಿ ದೊರೆತಂತಾಯಿತು" ಎಂದನು. ಮಧ್ಯಗೇಹ ದಂಪತಿಗಳು ಪರಿಪರಿಯಲ್ಲಿ ವಿನಂತಿಸಿಕೊಂಡರೂ, ವಾದಮಾಡಿದರೂ, ಬೆದರಿಕೆ ಹಾಕಿದರೂ ವಿಚಲಿತನಾಗಲಿಲ್ಲ ವಾಸುದೇವನ ಮನಸ್ಸು. ನಂತರ ಒಬ್ಬ ತಮ್ಮನ ಅವತಾರವಾದ ನಂತರ ಸನ್ಯಾಸಾಶ್ರಮ ಪಡೆದರು ಎಂಟನೇ ವಯಸ್ಸಿನಲ್ಲಿ.

## "ಪೂರ್ಣಪ್ರಜ್ಞ"ನಾದ ವಾಸುದೇವ –

ಅಚ್ಯುತಪ್ರೇಕ್ಷಾಚಾರ್ಯರು ವಾಸುದೇವನಿಗೆ ಸನ್ಯಾಸಾಶ್ರಮನಾಮವಾಗಿ "ಪೂರ್ಣಪ್ರಜ್ಞ" ಎಂಬ ಬಳಿತ್ಥಾಸೂಕ್ತದ ಪದವನ್ನು (ದಶಪ್ರಮತಿ – ದಶ – ಪೂರ್ಣ, ಪ್ರಮತಿ – ಪ್ರಜ್ಞೆ) ಬಳಸಿ ಸೂಕ್ತವಾಗಿಯೇ ಇಟ್ಟರು. ತಮ್ಮ ಶಿಷ್ಯನನ್ನು ನೋಡಿ ಬಹಳ ಸಂತೋಷಪಟ್ಟರು ಗುರುಗಳು.

**ಗಂಗಾಸ್ನಾನದ ಬಯಕೆ – ಅನಂತ (ಮಧ್ವಸರೋವರ)** – ಗಂಗಾಸ್ನಾನದ ಬಯಕೆಯನ್ನು ತಮ್ಮ ಅನುಮತಿಗಾಗಿ ಶ್ರೀ ಪೂರ್ಣಪ್ರಜ್ಞರು ತಮ್ಮ ಗುರುಗಳಲ್ಲಿ ಕೇಳಿದಾಗ, ಶಿಷ್ಯವಿರಹವನ್ನು ತಡೆಯಲಾರದೆ ಸ್ವಾಮಿಯಾದ ಭಗವಂತನನ್ನೇ ಶರಣುಹೊಕ್ಕರು ಅಚ್ಯುತಪ್ರೇಕ್ಷರು. ಆಗ ಅನಂತಾಸನನು ಒಬ್ಬ ನರನಲ್ಲಿ ಪ್ರವೇಶಿಸಿ, “ಇಂದಿನಿಂದ ಮೂರನೇ ದಿನದಂದು, ದೇವನದಿಯಾದ ಗಂಗೆ ನಿಮಗಾಗಿ ಇಲ್ಲಿಯ ಸರೋವರಕ್ಕೆ ಆಗಮಿಸುವಳು” ಎಂದನು. ಅದೇರೀತಿ ಬಂದ ಗಂಗೆ ಅಂದಿನಿಂದ ಪ್ರತಿಹನ್ನೆರಡು ವರ್ಷಗಳಿಗೊಮ್ಮೆ ಸದಾ ಬರುತ್ತಿರುವಳು. ಇಂದಿಗೂ ಸಹ ಬರುತ್ತಿದ್ದಾಳೆ. ಮುಂಚೆ ಅನಂತಸರೋವರವೆಂದು ಪ್ರಖ್ಯಾತವಾಗಿದ್ದ ಆ ತೀರ್ಥವು ಅಂದಿನಿಂದ **“ಶ್ರೀಮಧ್ವಸರೋವರ”** ಎಂದು ಪ್ರಖ್ಯಾತವಾಯಿತು.

**ಕುಸಿಯತೊಡಗಿದ ಮಾಯಾವಾದ (ಅಧ್ವೈತ)** – ಪೂರ್ಣಪ್ರಜ್ಞರು ಸನ್ಯಾಸ ಆಶ್ರಮ ಸ್ವೀಕರಿಸಿ 40ದಿನದೊಳಗೇ ವಾಸುದೇವಪಂಡಿತ ಮೊದಲಾದವರನ್ನು ವಾಗ್ಯುದ್ಧದಲ್ಲಿ ಸೋಲಿಸಿದರು. ಅಚ್ಯುತಪ್ರೇಕ್ಷಾಚಾರ್ಯರು ಪೂರ್ಣಪ್ರಜ್ಞರಿಗೆ ಮೊದಲು **“ಇಷ್ಟಸಿದ್ದಿ”** ಎಂಬ ಗ್ರಂಥದ ಪಾಠ ಮಾಡಲು, ಆಚಾರ್ಯರು ಅದರ ಮೊದಲ ಪದ್ಯದಲ್ಲಿಯೇ 32 ದೋಷಗಳಿವೆ ಎಂದು ಹೇಳಿದಾಗ “ನಿಮಗೆ ಪಾಠ ಹೇಳುವ ಸಾಮರ್ಥ್ಯ ನನಗಿಲ್ಲ” ಎಂದು ಮಾಯಾವಾದದಲ್ಲಿ ಪರಿಣಿತರಾಗಿದ್ದ ಅಚ್ಯುತಪ್ರೇಕ್ಷರು ನುಡಿದಾಗ, ತಾವೇ ಪಾಠ ಪ್ರವಚನ ಮಾಡಲು ಆರಂಭಿಸಿದರು

**ಶ್ರೀಮದಾಚಾರ್ಯರ ಕೌಶಲ್ಯ** – ಒಮ್ಮೆ ಅಚ್ಯುತಪ್ರೇಕ್ಷರ ಬಳಿ ಭಾಗವತಪುರಾಣವನ್ನು ಶ್ರವಣ ಮಾಡುತ್ತಿದ್ದ ಐದಾರು ಜನ ವಿಪ್ರರು, ತಮ್ಮ ಲಿಖಿತ ಪ್ರತಿಗಳಲ್ಲಿನ ಪಾಠಗಳು ಬಗೆಬಗೆಯಾಗಿರುವುದನ್ನು ಓದಲು, ಅದರಲ್ಲಿ ಒಂದನ್ನು ಮಾತ್ರ ಆಚಾರ್ಯರು “ಇದೇ ವೇದವ್ಯಾಸರಿಗೆ ಅಭಿಮತವಾದ ಮೂಲ ಪಾಠ” ಎಂದರು. ಅದಕ್ಕೆ ಕಾರಣವನ್ನೂ ಒದಗಿಸಿ, ಗುರುಗಳ ಇಚ್ಛೆಯಂತೆ ಭಾಗವತದ ಪಂಚಮ ಸ್ಕಂಧವನ್ನು ಅನುವಾದಮಾಡಿದರು.

ಇತಿ ಬಹುವಿಧವಿಶ್ವಾಶ್ಚರ್ಯಚಿತ್ತಪ್ರವೃತ್ತೇ–
ರ್ಜಗತಿ ವಿತತಿಮಾಯನ್ನೂತನಾऽಪ್ಯಸ್ಯ ಕೀರ್ತಿ: ।
ಕ್ಷಪಿತತತತಮಸ್ಕಾ ಭಾಸ್ಕರೀವ ಪ್ರಭಾऽಲಂ
ಸುಜನಕುಮುದವೃಂದಾನಂದದಾ ಚಂದ್ರಿಕೇವ ॥

ಶ್ರೀಮದಾಚಾರ್ಯರ ಕೀರ್ತಿಯು ನೂತನವಾಗಿದ್ದರೂ, ಸೂರ್ಯಪ್ರಭೆಯಂತೆ ಸುಜನರೆಂಬ ಕನ್ನೈದಿಲೆಯ ಸಮೂಹಕ್ಕೆ ಆನಂದವನ್ನು ನೀಡುವ ಬೆಳದಿಂಗಳಂತೆ ಜಗತ್ತಿನಲ್ಲಿ ಹಬ್ಬಿತು.

## ಪಂಚಮಸರ್ಗ

**ವೇದಾಂತವಿದ್ಯಾನಿಜರಾಜ್ಯಪಾಲನೇ ಸಂಕಲ್ಪ್ಯಮಾನೋ ಗುರುಣಾ ಗರೀಯಸಿ ।**
**ಅದಭ್ರಚೇತಾ ಅಭಿಷಿಚ್ಯತೇ ಪುರಾ ಸ ವಾರಿಭಿರ್ವಾರಿಜಪೂರಿತೈರಥ ॥**

**ವೇದಾಂತ ಸಾಮ್ರಾಜ್ಯದಲ್ಲಿ ಅಭಿಷೇಕ – ವೇದಾಂತಸಾಮ್ರಾಜ್ಯವನ್ನು ಅಲಂಕರಿಸಲು ಅರ್ಹರು ಯಾರೆಂದರೆ “ಯಾರು ಸ್ವಮತ ಸ್ಥಾಪನ, ಪರಮತ ನಿರಾಕರಣಸಾಮರ್ಥ್ಯವನ್ನು ಹೊಂದಿರುವವರೋ ಅವರು”, ಶ್ರೀಮದಾಚಾರ್ಯರಿಗಿಂತ ಬೇರೆ ವ್ಯಕ್ತಿ ಬೇಕೇ ಈ ಪೀಠಕ್ಕೆ? ಆದ್ದರಿಂದ ಪೂರ್ಣಪ್ರಜ್ಞರನ್ನೇ ಆರಿಸಿದರು.**

***“ಪೂರ್ಣಪ್ರಜ್ಞ”ರು – “ಆನಂದತೀರ್ಥ”ರಾದರು*** – ವೇದಾಂತವಿದ್ಯೆಯೆಂಬ ಸಾಮ್ರಾಜ್ಯವನ್ನು ಪೂರ್ಣಪ್ರಜ್ಞರೊಬ್ಬರೇ ಅತ್ಯಂತ ಪ್ರಶಸ್ತರೆಂದು ಭಾವಿಸಿ, ಅಚ್ಯುತಪ್ರೇಕ್ಷರಿಗೆ “ಆನಂದತೀರ್ಥ”ರೆಂದು ಮರುನಾಮಕರಣ ಮಾಡಿ ಪಟ್ಟಾಭಿಷೇಕ ಮಾಡಿದರು. ಶ್ರೀಮದಾಚಾರ್ಯರ ಆಶ್ರಮನಾಮ ಪೂರ್ಣಪ್ರಜ್ಞರಾದರೆ, “ಆನಂದತೀರ್ಥ” ಎಂಬುದು ಪೀಠನಾಮ.

**ವಾದಿನಿಗ್ರಹಮಾಡಿ “ಅನುಮಾನತೀರ್ಥ”ರಾದರು –** ಒಮ್ಮೆ ತರ್ಕಶಾಸ್ತ್ರದಲ್ಲಿ ವಿಶೇಷ ನಿಪುಣರೂ, ದುರಹಂಕಾರಿಗಳೂ ಆಗಿದ್ದ ಒಬ್ಬ ಸನ್ಯಾಸಿಯು ಶ್ರೀಮದಾನಂದತೀರ್ಥರನ್ನು ವಾದದಲ್ಲಿ ಗೆಲ್ಲಬೇಕೆಂದು ಬಂದಾಗ, ‘ತತ್ತ್ವ’ ಮತ್ತು ‘ಅತತ್ತ್ವ’ ಎರಡೂ ವಿಷಯಗಳಲ್ಲಿ ಪ್ರತ್ಯನುಮಾನಗಳನ್ನು ಪ್ರಯೋಗಿಸಲು ಸಾಧ್ಯವೆಂದು ತೋರಿಸುತ್ತಾ. ತರ್ಕವು ಸ್ವತಂತ್ರ ಪ್ರಮಾಣವೇ ಅಲ್ಲ ಎಂಬುದಾಗಿ ಸಮರ್ಥಿಸುತ್ತಾ ಎಲ್ಲಾ ಪ್ರತಿವಾದಿಗಳನ್ನೂ ಗೆದ್ದು “ಅನುಮಾನತೀರ್ಥ”ರೆಂದು ಪ್ರಖ್ಯಾತರಾದರು.

♣ ಒಮ್ಮೆ ವಾದಿಸಿಂಹ ಮತ್ತು ಬುದ್ಧಿಸಾಗರ ಎಂಬ ಇಬ್ಬರು ಬೌದ್ಧ ಪಂಡಿತರು ಅಚ್ಯುತಪ್ರೇಕ್ಷಕರ ಬಳಿಗೆ ವಾದಕ್ಕೆ ಬಂದಾಗ, ವಾದಿಸಿಂಹನು ಒಂದು ವಿಷಯವನ್ನು ೧೮ ರೀತಿಯಿಂದ ವಿಕಲ್ಪಿಸಿ, ತನ್ನ ವಾದವನ್ನು ಮುಂದಿಟ್ಟಾಗ, ಶ್ರೀಮದಾಚಾರ್ಯರು ಅವನ ವಿಕಲ್ಪಗಳನ್ನೆಲ್ಲ ಖಂಡಿಸಿ, ಅವನನ್ನೂ,

ಬುದ್ಧಿಸಾಗರನನ್ನೂ ಪರಾಭವಗೊಳಿಸಿದರು. ವಾದಿಸಿಂಹ-ಬುದ್ಧಿಸಾಗರರು ಸೋಲನ್ನು ಒಪ್ಪದೆ "ನಾಳೆಯೂ ವಾದ ಮುಂದುವರಿಯಲಿ" ಎಂದು ಹೇಳಿ ಪಲಾಯನಗೈದರು.

## ಬ್ರಹ್ಮಸೂತ್ರ ವ್ಯಾಖ್ಯಾನ –

♣ ಒಮ್ಮೆ ಶ್ರೀಮದಾಚಾರ್ಯರು ಶಂಕರಾಚಾರ್ಯರಿಂದ ರಚಿತವಾದ ಭಾಷ್ಯವನ್ನು ವಿವರಿಸುತ್ತಾ, ವಿಚಾರಮಾಡಿ ನೋಡಿದರೆ, ಬ್ರಹ್ಮಸೂತ್ರಕ್ಕೂ ಶಂಕರಭಾಷ್ಯಕ್ಕೂ ಹೊಂದಾಣಿಕೆಯೇ ಕಂಡುಬರುವುದಿಲ್ಲವೆಂದು ಹೇಳಿದರು. ಬ್ರಹ್ಮಸೂತ್ರದಲ್ಲಿ ಪರಮಾತ್ಮನ ಅನಂತಗುಣಪೂರ್ಣತ್ವ, ದೋಷದೂರತ್ವ, ಜಗತ್ಸತ್ಯತ್ವ, ಜೀವೇಶಭೇದಾದಿ ಪ್ರಮೇಯಗಳು ತುಂಬಿವೆ. ಆದರೆ ಶಂಕರಭಾಷ್ಯದಲ್ಲಿ ಬ್ರಹ್ಮನ ನಿರ್ಗುಣತ್ವ, ಜಗತ್ ಮಿತ್ಯತ್ವ, ಹೇಳುತ್ತದೆ. ಆದ್ದರಿಂದ ಇದು ಹೇಗೆ ತಾಳೆಯಾಗುತ್ತದೆ ಎಂದು ಎತ್ತಿ ತೋರಿಸಿದರು. ಆಗ ಅಲ್ಲಿದ್ದ ಜನರೆಲ್ಲರೂ ನೀವೇ ಒಳ್ಳೆ ಭಾಷ್ಯವನ್ನು ಬರೆಯಿರಿ ಎಂದು ಕೋರಿಕೊಂಡರು.

## ಭಿಕ್ಷೆಯ ನಂತರ ಬಾಳೆಹಣ್ಣು ತಿಂದ ಆಚಾರ್ಯರು –

ಒಮ್ಮೆ ಒಬ್ಬ ಗೃಹಸ್ಥನು ಭಿಕ್ಷೆಯನಂತರ ಆಚಾರ್ಯರನ್ನು ಪರೀಕ್ಷಿಸಲು ಇನ್ನೂರಕ್ಕೂ ಹೆಚ್ಚು ದೊಡ್ಡ ದೊಡ್ಡ ಬಾಳೆಹಣ್ಣುಗಳನ್ನು ತಿನ್ನಲು ನೀಡಿದನು. ಅಷ್ಟೂ ಹಣ್ಣುಗಳನ್ನು ತಿಂದು ಸ್ವಲ್ಪವೂ ವಿಚಲಿತರಾಗದ ಶ್ರೀಮದಾಚಾರ್ಯರನ್ನು ಕಂಡು ಅಚ್ಯುತಪ್ರೇಕ್ಷರು ಇದು ನಿಮಗೆ ಹೇಗೆ ಸಾಧ್ಯವಾಯಿತು? ಎನ್ನಲು ಅಚಾರ್ಯರು "ನನ್ನ ಹೊಟ್ಟೆಯಲ್ಲಿ ಹೆಬ್ಬೆಟ್ಟಿನ ಗಾತ್ರದ ಪ್ರಪಂಚವನ್ನೇ ಸುಡಬಲ್ಲ ಅಗ್ನಿಯಿದೆ. ಅದರಿಂದಲೇ ನನ್ನ ಈ ಭೋಜನ ಸಾಧ್ಯವಾಯಿತು ಎಂದರು.

## ♣ ವಾದಿನಿಗ್ರಹ –

ಒಮ್ಮೆ ಕುದುಪುಸ್ತೂರು ಎಂಬ ವಂಶದಲ್ಲಿ ಹುಟ್ಟಿದ ಮಣಿಮಂತನು ಆಚಾರ್ಯರನ್ನು ಕಂಡಾಗ " ಬ್ರಹ್ಮಸೂತ್ರಕ್ಕೆ ಭಾಷ್ಯೆ ಬರೆಯದವರು, ಅವುಗಳ ಅರ್ಥವನ್ನು ಪ್ರವಚನ ಮಾಡಬಾರದು" ಎಂದನು. ಆಗ ಆಚಾರ್ಯರು ಭಾಷ್ಯವನ್ನು ವಿಮರ್ಶಿಸಲು ಭಾಷ್ಯೆ ಬರೆದವರೇ ಆಗಬೇಕೆಂದು ರಾಜಶಾಸನವೇನಿಲ್ಲ, ನಿನ್ನ ಆಕ್ಷೇಪಕ್ಕೆ ಅರ್ಥವೇ ಇಲ್ಲ ಎಂದರು. ಆಗ ಅಲ್ಲಿದ್ದ ಜನರೆಲ್ಲರೂ ಶ್ರೀಮದಾಚಾರ್ಯರ ಸೌಂದರ್ಯವನ್ನು ವರ್ಣಿಸಿ **32** ಗುಣಪೂರಿತರು ಎಂದರು. ಕುದುಪುಸ್ತೂರಿನ ಕಡೆಯವರು ಅವನ ಅತಿದೊಡ್ಡದಾದ ಸೊಂಟದ ಕೆಳಭಾಗವನ್ನು ವರ್ಣಿಸಿದರು. ಶ್ರೀಮದಾಚಾರ್ಯರು ದಪ್ಪದಾದ ಸೊಂಟದ ಕೆಳಭಾಗ ಒಂದು ಅವಲಕ್ಷಣ ಎಂದರು. ಮತ್ತು ಅವನನ್ನು ಸೋಲಿಸಿದರು.

### ತೀರ್ಥಯಾತ್ರೆ –

- ಆಚಾರ್ಯರು ತಮ್ಮ ತೀರ್ಥಯಾತ್ರೆಯನ್ನು ಮುಂದುವರೆಸುತ್ತಾ, ವಿಷ್ಣುಮಂಗಲದಲ್ಲಿ ಶ್ರೀಮಹಾವಿಷ್ಣುವನ್ನೂ, ತಿರುವನಂತಪುರದಲ್ಲಿ ಶೇಷಶಾಯಿಯಾದ ಅನಂತಪದ್ಮನಾಭನನ್ನೂ, ಕನ್ಯಾಕುಮಾರಿ ತಲುಪಿ, ಕನ್ಯಾತೀರ್ಥದಲ್ಲಿ ಮಿಂದು, ರಾಮೇಶ್ವರ ತಲುಪಿ, ಅಲ್ಲೇ ಚಾತುರ್ಮಾಸ್ಯ ಆಚರಿಸಿ, ಶ್ರೀರಾಮಪ್ರತಿಷ್ಟೆಯ ಲಿಂಗದಲ್ಲಿ ಸನ್ನಿಹಿತನಾದ ಶ್ರೀರಾಮಚಂದ್ರನನ್ನೂ, ಅಲ್ಲಿಂದ ಮುಂದೆ ಶ್ರೀರಂಗಕ್ಕೆ ಹೋಗಿ ಶ್ರೀರಂಗನಾಥನನ್ನೂ ಸೇವಿಸಿದರು, ದರ್ಶಿಸಿದರು.

- **ಶ್ರೀಮುಷ್ಣಂನಲ್ಲಿ ದಂಡತೀರ್ಥ ನಿರ್ಮಾಣ** – ಆಚಾರ್ಯರು ಶ್ರೀಮುಷ್ಣಕ್ಕೆ ಬಂದಾಗ, ಅಲ್ಲಿ ಒಬ್ಬ ತುಂಬು ಗರ್ಭಿಣಿಯು ಬಹು ಪ್ರಯಾಸದಿಂದ ನೀರನ್ನು ತರುತ್ತಿದ್ದನ್ನು ಗಮನಿಸಿ, ಅಲ್ಲೇ ತಮ್ಮ ದಂಡದಿಂದ ಒಂದು ತೀರ್ಥವನ್ನು ನಿರ್ಮಿಸಿ, ನೀರಿನ ಸಮಸ್ಯೆಯನ್ನು ಪರಿಹರಿಸಿದರು. ಇಂದಿಗೂ ಕೂಡ ಶ್ರೀಮುಷ್ಣಂನಲ್ಲಿ ದಂಡತೀರ್ಥವನ್ನು ನೋಡಬಹುದು.

### ಶ್ರೀಮದಾಚಾರ್ಯರ ಅಪೂರ್ವ ದೇಹಕಾಂತಿ –

*ಸುಸ್ಮಿತೇಂದುಮರವಿಂದಲೋಚನಂ ಸ್ವರ್ಣವರ್ಣಮತಿಭದ್ರಭಾಷಣಮ್ ।*
*ವೀತಭೂಷಮಪಿ ವಿಶ್ವಭೂಷಣಂ ತಂ ದಿದೃಕ್ಷುರಲಮಾಪತಜ್ಜನ: ॥*

ಮಂದಹಾಸ ಬೀರುವ ಚಂದ್ರನಂತಹ ಮುಖದ, ಕಮಲದಂತೆ ವಿಶಾಲವಾದ ಕಣ್ಣುಗಳ, ಹೊಂಬಣ್ಣದ ಶರೀರಕಾಂತಿಯ, ತುಂಬಾ ಮಂಗಲಕರವಾದ ಮಾತುಗಳ, ಯಾವುದೇ ಅಲಂಕಾರವನ್ನು ಧರಿಸದೆಯೇ ಜಗತ್ತಿಗೆ ಅಲಂಕಾರಪ್ರಾಯರಾದ ಶ್ರೀಮದಾಚಾರ್ಯರನ್ನು ಕಾಣುವ ತವಕದಿಂದ ಜನರೆಲ್ಲ ಅಲ್ಲಿಗೇ ಧಾವಿಸಿದರು.

**ವಿದ್ಯೋರುದ್ಯುತಿಧೀರತಾರಕತಿರಸ್ಕಾರೇ ಪತಂಗಾಯಿತೋ**
**ದುರ್ವಾದೀಭಕುತರ್ಕಕುಂಭದಲನೇ ಸಿಂಹಪ್ರಬರ್ಹಾಯಿತ: ।**
**ಲೋಲಾಲೋಕಕಲೋಕದೃಕ್ಕುಮುದಿನೀ ಸಂಹ್ಲಾದನೇಽಬ್ಜಾಯಿತ:**
**ಸಂಸನಂಡಲಮಂಡನಾಯಿತವಪು: ಸ್ವಾನಂದತೀರ್ಥೋ ಬಭೌ ॥**

**ಆ ಸಭಾಮಂಡಲಕ್ಕೆ ಅಲಂಕಾರಪ್ರಾಯರಾದ ಶ್ರೀಮಧ್ವಾಚಾರ್ಯರು, ವಿದ್ಯೆಯೆಂಬ ಶ್ರೇಷ್ಠಕಾಂತಿಯನ್ನು ಹೊಂದಿದ್ದ ಪಂಡಿತರೆಂಬ ನಕ್ಷತ್ರಗಳನ್ನು ಮಂಕಾಗಿಸುವಲ್ಲಿ ಸೂರ್ಯನಂತೆ,**

ದುರ್ವಾದಿಗಳು ಎಂಬ ಆನೆಗಳ ಕುತರ್ಕಗಳೆಂಬ ಕುಂಭಸ್ಥಳಗಳನ್ನು ಸೀಳು ಹಾಕುವ ಕಾರ್ಯದಲ್ಲಿ ಶ್ರೇಷ್ಠವಾದ ಸಿಂಹದಂತೆ, ಚಂಚಲನೋಟಗಳಿಂದ ಕೂಡಿದ್ದ ಜನಗಳ ಕಣ್ಣುಗಳೆಂಬ ಕನ್ನೈದಿಲೆಗಳನ್ನು ಅರಳಿಸುವ ಕಾರ್ಯದಲ್ಲಿ ಚಂದ್ರನಂತೆ, ವರ್ತಿಸುತ್ತ ವಿಶೇಷವಾಗಿ ಕಂಗೊಳಿಸಿದರು.

# ಷಷ್ಠ ಸರ್ಗ

## ಐತರೇಯಶ್ರುತಿಯ ಅರ್ಥಕಥನ ಪ್ರಸಂಗ –

**ಐತರೇಯಮಥ ಕಿಂಚನ ಸೂಕ್ತಂ ಸೂಚಯನ್ ಸದಸಿ ತತ್ರ ಗರಿಷ್ಠಃ ।**
**ಶ್ರೋತುಮಿಚ್ಛತಿ ಸಭಾ ಭಗವದ್ಭ್ಯಃ ಸೂಕ್ತಭಾವಮಿತಿ ತಾವದುವಾಚ ॥**

ಐತರೇಯ ಶ್ರುತಿಯು ಋಗ್ವೇದದ ಶ್ರುತಿ; ತನ್ನಲ್ಲಿನ ಗಹನವಾದ ಆಧ್ಯಾತ್ಮಿಕಾರ್ಥಗಳಿಂದಾಗಿ ಶ್ರುತಿರಾಜ ಎನ್ನಿಸಿರುವುದು ಇದರ ಹಿರಿಮೆ. ಆಚಾರ್ಯರು ಐತರೇಯ ಶ್ರುತಿಯ ಮತ್ತೊಂದು ಅರ್ಥವನ್ನು ಹೇಳಿದರು. ಅವರ ವೇದೋಚ್ಚಾರಣೆ ಮತ್ತು ಅರ್ಥವಿವರಣೆಗಳನ್ನು ಕೇಳಿದ ಅಲ್ಲಿಯ ವಿದ್ವಾಂಸರಿಗೆ ಅದು ಅವರ ಜೀವಮಾನದಲ್ಲಿ ಕಂಡ ಅಚ್ಚರಿ ಎನ್ನಿಸಿತು.

## ವಿಷ್ಣುಸಹಸ್ರನಾಮದ ಶತಾರ್ಥಕಥನ –

ಆಚಾರ್ಯರು ಉಪನ್ಯಾಸ ಮಾಡುತ್ತಾ ವೇದಗಳಿಗೆ ಮೂರು ಅರ್ಥಗಳುಂಟು, ಮಹಾಭಾರತಕ್ಕೆ ಹತ್ತು ಅರ್ಥಗಳುಂಟು, ವಿಷ್ಣುಸಹಸ್ರನಾಮಕ್ಕೆ ನೂರು ಅರ್ಥಗಳುಂಟು ಎಂದು ತಿಳಿಯಿರಿ ಎಂದರು. ಆಗ ಆಚಾರ್ಯರನ್ನು ಪರೀಕ್ಷೆಮಾಡಲೋಸುಗ ಬ್ರಾಹ್ಮಣರೆಲ್ಲರೂ ನಗುಮುಖದಿಂದ "ಹಾಗಿದ್ದಲ್ಲಿ ವಿಷ್ಣುಸಹಸ್ರನಾಮಕ್ಕೆ ನೂರು ಅರ್ಥಗಳನ್ನು ಹೇಳಿರಿ, ನೋಡೋಣ" ಎಂದರು.

ಆಗ ಆಚಾರ್ಯರು ವಿಷ್ಣುಸಹಸ್ರನಾಮಕ್ಕೆ ನೂರರ್ಥಗಳುಂಟು, ನಿಮಗೆ ವಿವರಿಸುವೆ, ಆದರೆ ಅವನ್ನೆಲ್ಲಾ ನೀವೆಲ್ಲ ಸರಿಯಾಗಿ ಅನುವಾದ ಮಾಡಿ ಒಪ್ಪಿಸಬೇಕು ಎಂದು ನಿಬಂಧನೆ ಹಾಕಿದಾಗ,

ಅವರೆಲ್ಲರೂ ಅದಕ್ಕೆ ಒಪ್ಪಿದರು. ಪ್ರಾಯ: ಇವರು ನೂರರ್ಥಗಳನ್ನು ಹೇಳಲಾರರು. ಆದ್ದರಿಂದ ಅವನ್ನು ಅನುವಾದ ಮಾಡುವ ಪ್ರಸಂಗವೂ ಬರುವುದಿಲ್ಲ ಎಂದು ಆ ಬ್ರಾಹ್ಮಣರೆಲ್ಲ ಭಾವಿಸಿದರು.

ವ್ಯಾಕರಣಶಾಸ್ತ್ರದಲ್ಲಿ ವಿಹಿತವಾದ ನಿಯಮಗಳಿಗೆ ಅನುಗುಣವಾಗಿ ಪ್ರತ್ಯಯ ಮತ್ತು ಪ್ರಕೃತಿಗಳ ಸಂಗಮದ ರೀತಿಯನ್ನೂ ನಿರೂಪಿಸುತ್ತ, ನೂರಾರು ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿರುವ “ವಿಶ್ವ” ಎಂಬ ಮೊದಲ ನಾಮದ ನೂರು ಅರ್ಥಗಳನ್ನು ಹೇಳತೊಡಗಿದರು. ಅದನ್ನು ಪೂರೈಸುವ ಮುನ್ನವೇ, ಆವರೆಗೆ ಅವರು ತಿಳಿಸಿದ ಅರ್ಥಗಳನ್ನೂ ಸಹ, ಗ್ರಹಿಸಲು ಅಸಮರ್ಥರಾದ ಆ ಪಂಡಿತರೆಲ್ಲರೂ ಖಿನ್ನಮನಸ್ಕರಾದರು.

ಆಚಾರ್ಯರ ಅಪೂರ್ವ ಪ್ರತಿಭೆ ಗಮನಿಸಿ, ಎಲ್ಲ ಪಂಡಿತರೂ ಶರಣಾಗತರಾದರು.

## ಅಪಾಲ ಶಬ್ದಾರ್ಥ – ಪೂರ್ಣಪ್ರಜ್ಞರ ತ್ರಿಕಾಲಜ್ಞತ್ವ

- ಋಗ್ವೇದದ ಅರ್ಥವನ್ನು ಹೇಳುವ ಸಂದರ್ಭದಲ್ಲಿ “ಅಪಾಲ” ಶಬ್ದಕ್ಕೆ ಆಚಾರ್ಯರು “ಅತಿತರುಣಿ (ನವಜವ್ವನೆ)” ಎಂದರು. ಆಗ ಅಲ್ಲಿನ ಪಂಡಿತರೆಲ್ಲರೂ ಅಪಾಲ ಶಬ್ದಕ್ಕ ಕುಷ್ಟರೋಗದವಳು ಎಂದು ವಾದಿಸಿದರು. ಆಗ ಆಚಾರ್ಯರು ಹೇಳುತ್ತಾರೆ “ ಇನ್ನು ಕೆಲವೇ ದಿನಗಳಲ್ಲಿ ಇಲ್ಲಿಗೆ ಒಬ್ಬ ವಿದ್ವಾಂಸನು ಬರುವನು, ನೀವು ಅವನನ್ನೇ ಕೇಳಿ ಖಾತ್ರಿಗೊಳ್ಳಿರಿ” ಎಂದು ಹೊರಟರು. ಅದಕ್ಕೆ ತಕ್ಕಂತೆ ಸ್ವಲ್ಪ ದಿನದಲ್ಲೇ ಒಬ್ಬ ವಿದ್ವಾಂಸನು ಅಲ್ಲಿಗೆ ಬಂದಾಗ ಅವನನ್ನು ಕೇಳಿದಾಗ, ಆಚಾರ್ಯರು ಹೇಳಿದ ಅರ್ಥವೇ ಸರಿ ಎಂದು ಹೇಳುತಾರೆ. ಇದರಿಂದ ಆಚಾರ್ಯರು ತ್ರಿಕಾಲದರ್ಶಿಗಾಗಿದ್ದರು ಎಂದೂ ಸಾಬೀತಾಗುತ್ತದೆ.

- ದ್ವಾಪರಯುಗದಲ್ಲಿ ಭೀಮಸೇನನು ರಾಜಸಭೆಯಲ್ಲಿ ಸತಿಯಾದ ದ್ರೌಪದಿಯ ಮಾನಭಂಗ ಮಾಡಲು ಉದ್ಯುಕ್ತರಾದ ದುಃಶಾಸನಾದಿ ದುಷ್ಟ ಕೌರವರನ್ನು ವಧೆ ಮಾಡುವೆನೆಂದು ಬಹಿರಂಗವಾಗಿ ಪ್ರತಿಜ್ಞೆಯನ್ನು ಮಾಡಿ, ಹೇಗೆ ಅಕ್ಷರಶಃ ಪಾಲಿಸಿದನೋ ಆ ಭೀಮಸೇನನೇ ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ಅವತರಿಸಿ ಅಪೌರುಷೇಯವಾಗಿರುವ ವೇದಸಮೂಹಕ್ಕೆ ದುರ್ವಾದಿಗಳು ಅಲ್ಪನಾದ ಜೀವನಿಗೂ ಈಶ್ವರನಿಗೆ ಭೇದವಿಲ್ಲೆಂದೂ, ಜಗತ್ತು ಸುಳ್ಳೆಂದು, ಸರ್ವೇಶ್ವರನಾದ, ಸರ್ವಶಕ್ತನಾದ ಭಗವಂತನು ನಿರ್ಗುಣನೆಂದು ಮುಂತಾಗಿ ಮನಬಂದಂತೆ ಅರ್ಥಮಾಡಿ ಶ್ರುತಿ ನಿಂದನೆಯನ್ನು ಮಾಡುತ್ತಿರುವದನ್ನು ಸಹಿಸಲಾಗದೆ ಕೊರಗುತ್ತಿರುವ ವೇದಮಾತೆಯ ಅಳಲನ್ನು

ಪರಿಹರಿಸಲು ಮಾಯಾವಾದವನ್ನು ಬುಡಸಮೇತ ಕಿತ್ತೊಗೆದು ಶ್ರೀ ಹರಿಗೆ ಸಮ್ಮತವಾದ ಸಚ್ಛಾಸ್ತ್ರಗಳನ್ನು ರಚಿಸಿ ಕಂಗೆಟ್ಟ ಸಜ್ಜನರನ್ನು ಉದ್ಧಾರಮಾಡುವೆನೆಂದು ಪ್ರತಿಜ್ಞೆ ಮಾಡಿದರು.

## ಗೀತಾಭಾಷ್ಯದ ರಚನೆ –

- ತಮ್ಮ ಪ್ರಥಮ ಬದರೀಕಾಶ್ರಮಕ್ಕೆ ತೆರಳಬಯಸಿದ ಶ್ರೀಮನ್ಮಧ್ವಾಚಾರ್ಯರು ಶ್ರೀ ಭಗವದ್ಗೀತೆಗೆ ಭಾಷ್ಯವೊಂದನ್ನು ರಚಿಸಿ, ಅದನ್ನು ಜ್ಯೇಷ್ಟಯತಿಗಳಿಗೂ, ಗುರುಗಳಾದ ಅಚ್ಯುತಪ್ರೇಕ್ಷರಿಗೂ ನೀಡಿದರು.

## ಪೂರ್ಣಪ್ರಜ್ಞರ ಬದರೀಕಾಶ್ರಮ ಪ್ರಯಾಣ, ಭೇಟಿ –

- ವಾಸುದೇವನ ಪದಗಳಲ್ಲಿ ಸಂತತ ಸಂಪರ್ಕಹೊಂದಿರುವ, ಸ್ವಸಾಮರ್ಥ್ಯದಿಂದಲೇ ರುದ್ರದೇವರನ್ನು ಬಹಳವಾಗಿ ಮೆಟ್ಟಿನಿಂತಿರುವ, ಪಾಪನಾಶಕವಾದ ಕೀರ್ತಿಯನ್ನು ಹೊಂದಿರುವ, ಶ್ರೀಮಧ್ವಾಚಾರ್ಯರು, ಗಂಗಾನದಿಯ ಪ್ರವಾಹವನ್ನು ಸಹ ಸಂಪೂರ್ಣವಾಗಿ ದಾಟಿದರು. ಶ್ರಿಮದಾಚಾರ್ಯರು ಮನುಷ್ಯರು ಸಂದರ್ಶಿಸಬಹುದಾದ “ವಿಶಾಲಬದರಿ”ಗೆ ತಲುಪಿದರು. ತಾವು ರಚಿಸಿದ್ದ ಗೀತಾಭಾಷ್ಯವನ್ನು ಗೀತಾಚಾರ್ಯನಾದ ಬದರೀ ನಾರಾಯಣನಿಗೆ ನೀಡಿದರು. ಗೀತಾಭಾಷ್ಯಗ್ರಂಥವನ್ನು ಶಿಷ್ಯರ ಕೈಲಿ ಓದಿಸುತ್ತಾ ಶ್ರೀಮದಾಚಾರ್ಯರು ಭಗವಂತನ ಗೀತೆಗೆ, **“ಶಕ್ತಿತ:** (ಯಥಾಶಕ್ತಿ) ಅರ್ಥ ಹೇಳುವೆನು” ಎಂದಾಗ, ಜಗಜ್ಜನಕನಾದ ನಾರಾಯಣನು “ಶಕ್ತಿತ:” ಬದಲು **“ಲೇಶತ:”** ಎಂದು ಬರೆಯಿರಿ ಎಂದು ಅಪ್ಪಣೆ ಮಾಡಿದ.

- ಚಳಿಗೆ ಅಂಜಿ ಜನ ಯಾವ ನೀರನ್ನು ಮುಟ್ಟುತ್ತಲೂ ಇರಲಿಲ್ಲವೋ ಅಂತಹ ಶೀತಲಗಂಗೆ ಎನ್ನಿಸಿದ ಅಲಕನಂದೆಯ ಅತ್ಯಂತ ತಣ್ಣನೆಯ ನೀರಿನಲ್ಲಿ ಶ್ರೀಮಧ್ವಾಚಾರ್ಯರು, ಪ್ರತಿನಿತ್ಯವೂ ಅರುಣೋದಯಕಾಲದಲ್ಲಿ ಅವಗಾಹನ ಸ್ನಾನ ಮಾಡುತ್ತಿದ್ದರು.

- “ಅನಂತಮಠ” ಎಂಬ ಬದರೀನಾರಾಯಣ ದೇವಸ್ಥಾನದಲ್ಲಿ ನೆಲೆಸಿ, ಕಾಷ್ಠಮೌನವ್ರತವನ್ನೂ, ಪೂರ್ಣ ಉಪವಾಸವನ್ನೂ ಆಚರಿಸಿದರು.
- ಶ್ರೀ ಬಾದರಾಯಣರಿಂದ ಆಚಾರ್ಯರಿಗೆ ಉತ್ತರ ಬದರಿಗೆ ಆಹ್ವಾನ
- ಕಾಷ್ಟಮೌನವ್ರತವನ್ನು ಮಾಡುತ್ತಿದ್ದುದರಿಂದ ತಮ್ಮ ಶಿಷ್ಯರಿಗೆ ತಾವು ಉತ್ತರಬದರಿಗೆ ಹೋಗುತ್ತಿರುವ ವಿಷಯ ತಿಳಿಸಲೋಸುಗ ತಮ್ಮ ಸಂದೇಶವನ್ನು ಈರೀತಿಯಾಗಿ ಹೇಳಿ ಬರೆದಿಟ್ಟು ಹೊರಟರು –

**ನೇದೃಶಂ ಸ್ಥಲಮಲಂ ಶಮಲಘ್ನಂ ನಾಸ್ಯ ತೀರ್ಥಸಲಿಲಸ್ಯ ಸಮಂ ವಾ: ।**
**ನಾಸ್ತಿ ವಿಷ್ಣುಸದೃಶಂ ನನು ದೈವಂ ನಾಸ್ಮದುಕ್ತಿಸದೃಶಂ ಹಿತರೂಪಮ್ ॥**

" ಪಾಪ ಪರಿಹರಿಸುವ ಈ ಬದರೀಕಾಶ್ರಮದಂತಹ ಸ್ಥಳ ಬೇರೊಂದಿಲ್ಲ; ಈ ಗಂಗೆಯಂತಹ ಪುಣ್ಯತೀರ್ಥ ಇನ್ನೊಂದಿಲ್ಲ; ಮಹಾವಿಷ್ಣುವಿನಂತಹ ದೇವತೆ ಇನ್ನೊಬ್ಬನಿಲ್ಲ; ನಮ್ಮ ಉಪದೇಶದಂತಹ ಹಿತಕರಶಾಸ್ತ್ರ ಇನ್ನೊಂದಿಲ್ಲ". ಈ ರೀತಿಯಾಗಿ ಬರಿದಿಟ್ಟು ಆಚಾರ್ಯರು ಉತ್ತರಬದರಿಗೆ ಹೊರಟರು.

ಐತರೇಯ ಶ್ರುತಿಯ ಹಿರಿದಾದ ಅರ್ಥವನ್ನು ಶ್ರೀಪೂರ್ಣಪ್ರಜ್ಞರಿಂದ ಸಾಕ್ಷಾತ್ತಾಗಿ ೩ ಬಾರಿ ಶ್ರವಣ ಮಾಡಿದ್ದ ಶ್ರೀ ಸತ್ಯತೀರ್ಥರೆಂಬ ಯತಿಗಳು, ಗುರುಗಳ ಅಗಲುವಿಕೆಯನ್ನು ಸಹಿಸಲಾರದೆ, ಅವರನ್ನು ಹಿಂಬಾಲಿಸಿದರು. ಬಂಡೆಕಲ್ಲುಗಳ ಮೇಲೆ ವೇಗವಾಗಿ ಅನಾಯಾಸವಾಗಿ ಹೆಜ್ಜೆಯಿರಿಸುತ್ತಾ ದುರ್ಗಮವಾದ ದಾರಿಯಲ್ಲಿ ಸಾಗುತ್ತಿದ್ದ ಶ್ರೀಮದ್ವಾಚಾರ್ಯರನ್ನು ಎಷ್ಟು ವೇಗದಿಂದ ಹಿಂಬಾಲಿಸಿದರೂ, ಶ್ರೀ ಸತ್ಯತೀರ್ಥರಿಗೆ ಸಾಧ್ಯವಾಗಲೇ ಇಲ್ಲ.

- ಶ್ರೀಮದಾಚಾರ್ಯರು ಒಮ್ಮೆ ತಿರುಗಿ ನೋಡಲಾಗಿ ಸತ್ಯತೀರ್ಥರನ್ನು ಹಿಂತಿರುಗಿ ಹೋಗು ಎನ್ನಲು ಅವರು ಕ್ಷಣಮಾತ್ರದಲ್ಲೇ "ಅನಂತಮಠ"ಕ್ಕೆ ತಲುಪಿದರು.

- ಆಶ್ರಮಕ್ಕೆ ಹಿಂತಿರುಗುದ ಸತ್ಯತೀರ್ಥರು ತಮ್ಮ ಸಂಗಡಿಗರೆಲ್ಲರಿಗೂ ಆಚಾರ್ಯರ ಪ್ರಯಾಣ ವೈಖರಿಯನ್ನು ಈರೀತಿ ತಿಳಿಸಿದರು.

**ವಾನರೇಂದ್ರ ಇವ ವಾಯುಜವೋ ಸೌ ಭೀಮಸೇನ ಇವ ದಾನವಭೀಮ: ।**
**ಉಲ್ಲಲಾಸ ಗಿರಿಪುಂಗವಶೃಂಗೇ ಸ ವ್ರಜನ್ ವೃಜಿನನಾಶನನಾಮಾ ॥**

**ವಾಯುವೇಗದಿಂದ ಸಮುದ್ರದಾಟಿದ ಹನುಮಂತನಂತೆ;**
**ಭಯಂಕರರೆನ್ನಿಸಿದ ಭೀಮಸೇನನಂತೆ;**
**ಪರ್ವತಶಿಖರವೇರುತ್ತಿರುವ ಶ್ರೀಮಧ್ವಾಚಾರ್ಯರನ್ನು ಕಂಡೆ ಎಂದರು.**

ಪಾದೋಪಾಂತನಮನ್ಮಹಾಮುನಿಗಣಂ ಹೇಮಪ್ರದೀಪ್ತಾಂಬರಂ
ಶ್ರೀಮದ್ರತ್ನಕಲಾಪಮಗ್ರ್ಯಕಟಕೈರ್ವಿಭ್ರಾಜಿತಂ ಹಾಟಕೈ ।
ದೃಷ್ಟ್ವಾ ತಂ ಧರಣೀಧರಂ ಸುವನಮಾಲೋಲ್ಲಾಸಿನಂ ಸುಂದರಂ
ಸ್ವಾನಂದಾಕೃತಿಮಸ್ಮರನ್ಮುರರಿಪುಂ ಸ್ವಾನಂದತೀರ್ಥಸ್ತದಾ ॥

ಶ್ರೀಮದಾಚಾರ್ಯರು ದೇವತೆಗಳ ಸಮೂಹದಲ್ಲಿ ನೆಲೆಸಿರುವ, ಸರ್ವೋತ್ತಮನಾದ, ಮರಕತಮಣಿಗಳಿಂದ ತುಂಬಿದ, ರಮಣೀಯನಾದ, ಲಕ್ಷ್ಮೀಸಹಿತನಾದ ವನಮಾಲೆಯಿಂದ ಕಂಗೊಳಿಸುವ, ಮನೋಹರನಾದ, ಆನಂದಾದಿಗುಣಗಳನ್ನೇ ಶರೀರವನ್ನಾಗಿ ಹೊಂದಿರುವ ಶ್ರೀನಾರಾಯಣನನ್ನು ಸ್ಮರಿಸಿಕೊಂಡರು.

## ಸಪ್ತಮ ಸರ್ಗ

**ಅಥ ಹೈಮವತೇ ತಟಾಂತರೇ ಬದರೀಷಂಡವಿಶೇಷಮಂಡಿತಮ್**
**ಪರಮಾಶ್ರಮಮಾಶ್ರಯಂ ಶ್ರಿಯ: ಸಕಲಜ್ಞ: ಸ ದದರ್ಶ ವಿಶ್ರುತಮ್ ॥**

### ವೇದವ್ಯಾಸಾಶ್ರಮದ ವರ್ಣನೆ –

**ಶ್ರೀಮದಾಚಾರ್ಯರು** ಹಿಮಾಲಯವನ್ನು ದಾಟಿ ಶ್ರೀವೇದವ್ಯಾಸದೇವರ ಉತ್ತಮವಾದ ಆಶ್ರಮವನ್ನು ಕಂಡರು. ಅಲ್ಲಿ ಚಳಿ, ಮಳೆ, ಬಿಸಿಲುಗಳನ್ನು ಸಹಿಸಿಕೊಳ್ಳುವ, ಮಹಾಯಾಗಗಳನ್ನು ಮಾಡಿಸಿ ಪ್ರಸಿದ್ಧರಾದ ದ್ವಿಜರಿಗೆ ಆಶ್ರಯರಾದ, ವಿಷ್ಣುಪದವನ್ನು ಸದಾ ಧ್ಯಾನಿಸುವ, ಅನೇಕ ವೇದಶಾಖೆಗಳಲ್ಲಿ ಕೋವಿದರಾದ ಋಷಿಗಳು ಅಲ್ಲಿ ಶೋಭಿಸುತ್ತಿದ್ದರು. ಪಕ್ಷಿಗಳಿಗೆ ಆಶ್ರಯವಾದ, ಗಗನಚುಂಬಿಗಳಾದ, ಅನೇಕ ತೆರನಾದ ಅಪೂರ್ವ ವೃಕ್ಷಗಳೂ ಅಲ್ಲಿ ಕಂಗೊಳಿಸುತ್ತಿದ್ದವು. ಆ ಆಶ್ರಮದಲ್ಲಿ ಸವಿಯಾದ ಮಾತನಾಡುವ ಶುಕ ಮೊದಲಾದ ಮಂಗಲಕರವಾದ ದ್ವಿಜ(ಪಕ್ಷಿ)ರಿಂದಲೂ, ಮಹಾಲಕ್ಷ್ಮಿಗೆ ಪ್ರಿಯತಮನಾದ ಶ್ರೀ ಹರಿಯಲ್ಲಿ ಮನಸ್ಸನ್ನು ನೆಲೆಗೊಳಿಸಿದ ತಮಗೆ ಅತ್ಯಂತ ಪ್ರಿಯವಾದ ಕಮಲಪುಷ್ಪಗಳಲ್ಲಿ ಮನಸ್ಸು ನೆಟ್ಟಿದ್ದ ಪರಮಹಂಸ (ರಾಜಹಂಸಪಕ್ಷಿ)ರಿಂದಲೂ ಆ ಆಶ್ರಮವು ಕೂಡಿದ್ದಿತು. ಆ ಆಶ್ರಮವು ವೈಕುಂಠದಂತಿತ್ತು,

ವ್ಯಾಸಶಿಷ್ಯರ ಮಧ್ವದರ್ಶನ, ಅಲ್ಲಿದ್ದ ಮುನಿಗಳ ವರ್ಣನೆ

**ಬದರೀವೃಕ್ಷ ವರ್ಣನೆ** – ಬದರೀ ಕ್ಷೇತ್ರವು ಪಕ್ಷಿರಾಜ ಗರುಡನಂತೆ ಶೋಭಿಸುತ್ತಿತ್ತು. ಅಮೃತರೂಪವಾದ ಮಹಾಫಲವನ್ನು ನೀಡುವ, ಹರಿಭಕ್ತಿರಹಿತರಿಗೆ ಎಂದೂ ಎಟುಕದ, ತನ್ನ ಅರ್ಥನಿರ್ಣಯಕ್ಕೆ ಪುರಾಣ ಮತ್ತು ಮಹಾಭಾರತವನ್ನು ಆಶ್ರಯಿಸಿದ, ಐತರೇಯ, ಶಾಕಲ ಮೊದಲಾದ ಉತ್ತಮ ಶಾಖೆಗಳನ್ನೂ ಹೊಂದಿದ ವೇದವೇ ಮೂರ್ತಿವೆತ್ತಂತೆ ನಿಂತಿರುವ ಬದರೀವೃಕ್ಷವನ್ನು ಆಚಾರ್ಯರು ಕಂಡರು.

- ವೇದವ್ಯಾಸವರ್ಣನ – ಮುನಿವೃಂದದ ಮಧ್ಯದಲ್ಲಿ, ಮೂರುಲೋಕಗಳ ಸಮುದಾಯಕ್ಕೂ ಭೂಷಣಪ್ರಾಯನಾದ, ಸತ್ಯವತೀಸುತನಾದ ಶ್ರೀವೇದವ್ಯಾಸರೂಪೀ ಶ್ರೀಹರಿಯನ್ನು ಶ್ರೀಮಧ್ವಾಚಾರ್ಯರು ಕಂಡರು.

## ವ್ಯಾಸಾವತಾರ

ವೇದವ್ಯಾಸರನ್ನು ಪರಾಶರಮುನಿಯಿಂದ ಸತ್ಯವತೀದೇವಿಯು ಪುತ್ರತ್ವೇನ ಪಡೆದಳು.

ವೇದವ್ಯಾಸರ ಮನಸ್ಸಿನಿಂದ ಶ್ರುತಿಗಳು ಅಭಿವ್ಯಕ್ತವಾದವು.

- ಮಹಾಭಾರತವೆಂಬ ಪಾರಿಜಾತವೃಕ್ಷದೊಂದಿಗೆ ಪುರಾಣಗಳೆಂಬ ಚಂದ್ರನು ಅವತರಿಸಿದ ಮೇಲೆ, ಅತ್ಯಂತ ಶ್ರೇಷ್ಟವಾದ ಬ್ರಹ್ಮಸೂತ್ರವೆಂಬ ಅಮೃತವು ಸಹ ಉದಿಸಿತು.
- ಉತ್ತಮ ಕೃಷ್ಣಾಜಿನದ ಮೇಲೆ ಯೋಗಪೀಠದಲ್ಲಿ ಕುಳಿತಿರುವ, ಅರಳಿದ ನೀಲಕಮಲದಂತೆ ಮನೋಹರ ಕಾಂತಿಯ, ಶ್ರೀವೇದವ್ಯಾಸದೇವರ ಶರೀರವಾಗಿತ್ತು.
- ವೇದವ್ಯಾಸರ ಶರೀರ ಸ್ವರೂಪಭೂತವಾದ, ಮಂಗಳಕರವಾದ, ಅನಂತ ಸದ್ಗುಣಗಳಿಂದ ಚೆನ್ನಾಗಿ ತುಂಬಿರುವ, ಸಮಸ್ತದೋಷರಹಿತವಾದ, ಜ್ಞಾನಾನಂದಮಯವೂ ಆಗಿತ್ತು.
- ವೇದವ್ಯಾಸರ ಪಾದಗಳು, ಪದಧೂಳಿ, ನಖಗಳು, ಜಂಘಾ, ಯೋಗಪಟ್ಟಿಕಾ, ಕೃಷ್ಣಾಜಿನ, ಉದರ, ವಕ್ಷಸ್ಥಳ, ಕೌಸ್ತುಭ, ಹಸ್ತಗಳು, ಜ್ಞಾನಮುದ್ರೆ, ಅಭಯಮುದ್ರೆ, ಕಂಠ, ಮುಖ, ದಂತಪಂಕ್ತಿ, ವೇದವ್ಯಾಸರ ಅಪೂರ್ವವಾಣಿ, ಅವರ ನೋಟ, ಕರ್ಣಗಳು, ಭ್ರೂವಿಲಾಸ, ತಿಲಕ, ಜಟೆ, ಹೀಗೆ ಎಲ್ಲವನ್ನೂ ಚೆನ್ನಾಗಿ ನಾರಾಯಣಪಂಡಿತಾಚಾರ್ಯರು ವರ್ಣಿಸಿದ್ದಾರೆ.

ವೇದವ್ಯಾಸದೇವರ ಸಮಾಗಮವಾಗಿ ಶ್ರೀಮದಾಚಾರ್ಯರು ವ್ಯಾಸರ ಪಾದಕಮಲಗಳಲ್ಲಿ ಭಕ್ತಿಯಿಂದ ಸಾಷ್ಟಾಂಗಪ್ರಣಾಮದ ಸಮರ್ಪಣೆ ಮಾಡಿದರು. ಶ್ರೀವೇದವ್ಯಾಸರು ಶ್ರೀಮದಾಚಾರ್ಯರಿಗೆ

ಗಾಢಾಲಿಂಗನವನ್ನು ನೀಡಿದರು. ಇವರಿಬ್ಬರ ಆಲಿಂಗನ ಹೇಗಿತ್ತೆಂದರೆ – ಹಿಂದೆ ದ್ವಾಪರಯುಗದಲ್ಲಿ ಕೃಷ್ಣಭೀಮಸೇನರಾಗಿ ಅವತರಿಸಿದ್ದಾಗ ಪರಸ್ಪರ ಆಲಿಂಗಿಸಿಕೊಂಡಾಗ ಹೇಗೋ ಹಾಗೆ ಕಾಣುತ್ತಿದ್ದರು.

**ಸಜ್ಞಾನಾಯಾನಂದವಿಜ್ಞಾನಮೂರ್ತೀ ಪ್ರಾಪ್ತೌ ಪ್ರೀಥ್ವೀಮಾಶ್ರಮೇ ತತ್ರ ತಾವತ್ ।**
**ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮದೇವೌ ವೇದವ್ಯಾಸಾನಂದತೀರ್ಥಾಭಿಧಾನೌ ॥**

ಸಜ್ಜನರಿಗೆ ತತ್ತ್ವಜ್ಞಾನವನ್ನು ಕರುಣಿಸಲೆಂದೇ ಭೂಮಿಗೆ ಅವತರಿಸಿ ಬಂದ ವಿಶೇಷಜ್ಞಾನಮೂರ್ತಿಗಳಾದ ವೇದವ್ಯಾಸ, ಆನಂದತೀರ್ಥ ಎಂಬ ಹೆಸರಿನ, ಶ್ರೀಹರಿವಾಯುಗಳು ಎಂಬ ಆ ದೇವತೆಗಳು ಆ ವ್ಯಾಸಾಶ್ರಮದಲ್ಲಿ ಬಹುವಾಗಿ ಕಂಗೊಳಿಸಿದರು.

# ಅಷ್ಟಮ ಸರ್ಗ

**ಪ್ರತಿಭಾಪ್ರಭಾಪ್ರಮುಖಸದ್ಗುಣೈರ್ನಿಜೈರತಿವಿಸ್ಮಯಂ ನಿಯಮಿನಾಂ ಮನೋ ನಯನ್ ।**
**ಪುರುಧೀ: ಕದಾಚಿದಥ ವೇದನಾಯಕಂ ವಿಜನೇ ಶನೈರುಪಸಸಾದ ತಂ ವನೇ ॥**

- ಏಕಾಂತದಲ್ಲಿ ಶ್ರೀವೇದವ್ಯಾಸರ ಸಮೀಪಕ್ಕೆ ಶ್ರೀಮಧ್ವರ ಆಗಮನ
- ಶ್ರೀವೇದವ್ಯಾಸರ ಶಿಷ್ಯತ್ವ ಸ್ವೀಕರಿಸಿದ ಆಚಾರ್ಯರ ಜ್ಞಾನಸಂಪತ್ತು ಮತ್ತಷ್ಟು ತುಂಬಿಕೊಂಡಿತು.
- ಆಚಾರ್ಯ ಮಧ್ವರಿಂದ ವೇದವ್ಯಾಸರ ಮುಖಾಂತರ ಮಹಾಭಾರತಾದಿ ಇತಿಹಾಸಗಳ, ಭಾಗವತಾದಿ ಸುಂದರ ಪುರಾಣಗಳ, ಬ್ರಹ್ಮಸೂತ್ರ ಮೊದಲಾದ ಸೂತ್ರಗಳನ್ನು ಶ್ರವಣ ಮಾಡಿದರು.

- ನಂತರ ಬದರೀಕಾಶ್ರಮದ ಮತ್ತೊಂದು ಸ್ಥಳದಲ್ಲಿ ವಿರಾಜಮಾನರಾಗಿದ್ದ "ನಾರಾಯಣ" ಎಂಬ ಭಗವಂತನ ಇನ್ನೊಂದು ರೂಪವನ್ನು ಕಂಡು ನಮಸ್ಕರಿಸಲೆಂದು ತೆರಳಿದರು.
- ಪೂರ್ಣಪ್ರಜ್ಞರಿಂದ ನಾರಾಯಣನು ಸಾಕ್ಷಾತ್ ರಮಾಪತಿ ಎಂಬ ಚಿಂತನೆ, ನಾರಾಯಣನ ಸೃಷ್ಟಿಕಾರ್ಯದ ವೈಭವ, ಬ್ರಹ್ಮರುದ್ರಾದಿ ಸರ್ವಜಗತ್ಕರ್ತುತ್ವದ ಹಿರಿಮೆ, ಹೀಗೇ ದಶಾವತಾರ ಚಿಂತನೆ ಮಾಡಿದರು.

## ಪರಮಾತ್ಮನ ಅನಂತಾವತಾರ ಚಿಂತನೆ –

- **ಮತ್ಸ್ಯರೂಪ**ದಿಂದ ಹಯಗ್ರೀವ ರಾಕ್ಷಸನನ್ನೂ ಮತ್ತು ಶ್ರೀ **ಹಯಗ್ರೀವರೂಪ**ದಿಂದ "ಮಧು" ನಾಮಕ ದೈತ್ಯನನ್ನೂ ಸಂಹರಿಸಿ ಅಪಹರಣವಾದ ವೇದಗಳನ್ನು ಬ್ರಹ್ಮದೇವರಿಗಿತ್ತನು.

- **ಕೂರ್ಮಾವತಾರ** – ಸಮುದ್ರಮಥನ ಕಾಲದಲ್ಲಿ ಮಂದರಪರ್ವತವು ಸಮುದ್ರದ ನೀರಿನಲ್ಲಿ ಮುಳುಗಿದಾಗ ಅದನ್ನು ಮೇಲಕ್ಕೆತ್ತಿದ ರೂಪ.

- **ವರಾಹಾವತಾರ** – ದೇವಶತ್ರುವಾದ ಹಿರಣ್ಯಾಕ್ಷನು ವರಬಲದಿಂದ ಭೂದೇವಿಯನ್ನೇ ನೀರಿನಲ್ಲಿ ಮುಳುಗಿಸಲು, ವರಾಹರೂಪದಿಂದ ಭೂಮಿಯನ್ನು ಮೇಲಕ್ಕೆತ್ತಿದನು.
- **(ಕೂರ್ಮರೂಪದಿಂದ ಮಂದರ ಪರ್ವತವನ್ನೂ, ವರಾಹರೂಪದಿಂದ ಭೂಮಿಯನ್ನೂ ಕ್ರಮವಾಗಿ ಕ್ಷೀರಸಮುದ್ರ ಮತ್ತು ಪ್ರಳಯೋದಕಗಳಿಂದ ಉದ್ಧರಿಸಿ ಪಾಲಿಸಿದನು.)**

- **ನರಸಿಂಹಾವತಾರ** – ಭಕ್ತಜನರ ಭಯವನ್ನು ಪರಿಹರಿಸುವ ಈ ನಾರಾಯಣನು, ನರಸಿಂಹನಾಗಿ, ತನ್ನ ನಖಚಕ್ರದ ತೇಜಸ್ಸಿನಿಂದಲೇ, ಬಲಶಾಲಿಯಾದ ಹಿರಣ್ಯಕಶಿಪುವನ್ನು ಬ್ರಹ್ಮನವರವು ಸ್ವಲ್ಪವೂ ವ್ಯರ್ಥವಾಗದಂತೆ ಮಾಡಿ, ಪ್ರಹ್ಲಾದನನ್ನು ಸಂರಕ್ಷಿಸಿದ ರೂಪ.

- **ತಾಪಸಾವತಾರ–**

  ಪುರುಷೋತ್ತಮನೂ, ಭಕ್ತಜನ ಭಯಪರಿಹಾರಕನೂ ಆದ ಈ ನಾರಾಯಣನು ಕೋಪ ಉದಿಸಲು, **"ತಾಪಸ"** ರೂಪದಿಂದ ತನ್ನ ತೀಕ್ಷಣವಾದ ಚಕ್ರದಿಂದ ತುಂಬಾ ಬಲಶಾಲಿಯಾಗಿದ್ದ ಮೊಸಳೆಯನ್ನು ಸರೋವರದಿಂದ ಮೇಲಕ್ಕೆಳೆದು ಗಜೇಂದ್ರನನ್ನು ಸಂರಕ್ಷಿಸಿದ ರೂಪವೇ ತಾಪಸಾವತಾರ.

- **ವಾಮನಾವತಾರ** – ದೈತ್ಯ ಚಕ್ರವರ್ಥಿ ಬಲಿಯಿಂದ ಮೂರಡಿ ಭೂಮಿಯನ್ನು ಯಾಚಿಸಿ, ಇಂದ್ರಶತ್ರುವನ್ನು "ಸುತಲ" ಲೋಕಕ್ಕೆ ತಳ್ಳಿ ತನ್ನ ಭಕ್ತನಾದ ಇಂದ್ರದೇವರಿಗೆ ಸ್ವರ್ಗಲೋಕವನ್ನು ಮರಳಿ ನೀಡಿದ ರೂಪವೇ ವಾಮನರೂಪ.

- **ಬುದ್ಧಾವತಾರ** – "ಗೌತಮಬುದ್ದ"ನೆಂದು ಪ್ರಸಿದ್ದನಾದ ಬುದ್ಧ ಭಗವದವತಾರಿಯಲ್ಲ. ಅವನು ತ್ರಿಪುರಾಸುರರಲ್ಲಿ ಮೊದಲಿಗನಾದ ದೈತ್ಯ. ಬುದ್ಧರೂಪದಿಂದ ಬಲಿಷ್ಟರಾದ ದೈತ್ಯರನ್ನು ವಂಚಿಸಿ, ನಾಶಪಡಿಸಿ, ದೇವತೆಗಳಿಗೆ ಮೋಕ್ಷದಾಯಕವಾದ ನಿರ್ಮಲ ಜ್ಞಾನವಿತ್ತವನೇ ಬುದ್ಧರೂಪಿ ಪರಮಾತ್ಮ.

- **ಪರಶುರಾಮಾವತಾರ** – ತನ್ನ ಶ್ರೇಷ್ಟವಾದ ಕೊಡಲಿಯ ಅಸದೃಶವಾದ ಕಾಂತಿಯಿಂದ ದುಷ್ಟ ಕ್ಷತ್ರಿಯರನ್ನೆಲ್ಲ ಸದೆಬಡಿದು, ಪರಶುರಾಮ ರೂಪಿಯಾದ ನಾರಾಯಣನನ್ನು ಮತ್ತೊಬ್ಬ ಸೂರ್ಯನೆಂದೇ ಜ್ಞಾನಿಗಳು ಕರೆಯುವರು.

- **ವೇದವ್ಯಾಸಾವತಾರ;**
  ಉತ್ತಮವೂ, ಮಂಗಲಕರವೂ, ಅನುಪಮವೂ, ಆದ ತಮ್ಮ (ಬ್ರಹ್ಮಸೂತ್ರ, ಭಾರತ ಮೊದಲಾದ) ಮಾತುಗಳಿಂದ ದೇವತೆಗಳು ಮತ್ತು ಮನುಷ್ಯರ ಅಜ್ಞಾನವನ್ನು ಮತ್ತೆ ಮತ್ತೆ ಪರಿಹರಿಸಿದ, ಜಗತ್ತಿಗೆ ಹಿತಕಾರಕರಾದ, ಶ್ರೇಷ್ಠಮುನಿಗಳ ವಂಶದಲ್ಲಿ ಅವತರಿಸಿದ, ಈ ವೇದವ್ಯಾಸದೇವರನ್ನು ಮತ್ತೊಬ್ಬ ಸೂರ್ಯನೆಂದೇ ಜ್ಞಾನಿಗಳು ಕರೆಯುವರು.

- **ರಾಮಾವತಾರ** – ಕರುಣಾಳುವಾದ ಭಗವಂತನು ದ್ವಿಜವರ್ಯರು, ದೇವತೆಗಳಿಗೆ ಆನಂದವನ್ನುಂಟು ಮಾಡುವವನಾಗಿ ಶತ್ರುನಾಶಕನಾದ ದಶರಥರಾಜನ ಮಗನಾಗಿ ಸೂರ್ಯವಂಶದಲ್ಲಿ ಅವತರಿಸಿ, ದುಷ್ಟನಾದ ರಾವಣಾದಿಗಳನ್ನು ಸಂಹರಿಸಿ, ವಾಯುದೇವರ ಅವತಾರರಾರರಾದ ಹನುಮಂತನಿಂದ ಈಗಲೂ ನಿತ್ಯ ಸೇವಿತನಾಗಿ ಒಂದು ರೂಪದಿಂದ ಕಿಂಪುರುಷಖಂಡದಲ್ಲಿರುವನು.
- – ತಾಟಕಾಸಂಹಾರ, ಸುಬಾಹು ನಿಗ್ರಹ, ಮಿಥಿಲಾಪ್ರವೇಶ, ಶಿವಧನಸ್ಸಿನ ಭಂಗ, ಸೀತಾಸ್ವಯಂವರ, ತಾಯಿಯಾದ ಕೈಕೇಯಿಯ ಅಪೇಕ್ಷೆಯಂತೆ ವನಗಮನ,

ಖರದೂಷಣಾದಿನಿಗ್ರಹ, ಅಯೋಧ್ಯಾಗಮನ, ಸೀತಾಕೃತಿಯ ಅಪಹರಣ, ಸುಗ್ರೀವನಿಗೆ ರಾಜ್ಯ ಪ್ರಾಪ್ತಿ, ವಾಲಿಸಂಹಾರ, ರಾವಣಾದಿಗಳ ಸಂಹಾರ, ಪರಂಧಾಮ ಪ್ರವೇಶ.

- **ಕೃಷ್ಣಾವತಾರ** –ಯಾರ ರಥವು ಹತ್ತು ದಿಕ್ಕುಗಳನ್ನು ಜಯಿಸಿ ಶತ್ರುಗಳನ್ನು ನಾಶಪಡಿಸಿ ಉತ್ತಮ ಸಂಪತ್ತುಗಳ ವ್ಯಾಪ್ತಿಗೆ ಕಾರಣವಾಯಿತೋ, ಅಂತಹ ಕರುಣಾಳುವಾದ ಭಗವಂತನು ಹಿಂದೆ ದ್ವಾಪರ ಯುಗದ ಕೊನೆಯಲ್ಲಿ ಚಂದ್ರನವಂಶದಲ್ಲಿ ಅವತರಿಸಿ ವಸುದೇವ–ದೇವಕಿಯರಿಗೆ ಸಂತೋಷವನ್ನೂ, ದುಷ್ಟ ಕಂಸ, ಜರಾಸಂಧರಿಗೆ ದು:ಖವನ್ನೂ ನೀಡಿದನು.

- ಪೂತನಾಸಂಹಾರ, ಅಸುರರಾದ ಕೇಶಿ, ಅರಿಷ್ಟಾದಿಗಳ ನಿಗ್ರಹ, ವೃಂದಾವನದಲ್ಲಿ ಸಕಲಗೋಕುಲಕ್ಕೆ ಪ್ರಿಯನಾದ ಶ್ರೀಕೃಷ್ಣ ಕಾಮತಾಪದಿಂದ ಕೂಡಿದ, ಸಲ್ಲಾಪ, ಮಥುರಾಪ್ರವೇಶ, ರುಕ್ಮಿಣೀಕಲ್ಯಾಣ, ನಂದನವನಗಮನ, ನರಾಕಾಸುರಸಂಹಾರ, ದ್ವಾರಕಾಗಮನ, ಪಾಂಡವರ ರಾಜ್ಯಲಕ್ಷ್ಮಿಯ ಅಪಹರಣ, ಯುಧಿಷ್ಟಿರನಿಗೆ ರಾಜ್ಯಪ್ರಾಪ್ತಿ, ಸಂಪೂರ್ಣ ಕೌರವಸಂಹಾರ, ಇತ್ಯಾದಿ ವರ್ಣನೆ, ಶ್ರೀಕೃಷ್ಣಪರಂಧಾಮ ಪ್ರವೇಶ

- **ಮಹಿದಾಸರೂಪ ವರ್ಣನೆ** – ಶ್ರೀಮನ್ನಾರಾಯಣನು ವಿಷ್ಣುಕೀರ್ತನದಿಂದ ಶುದ್ಧಾಂತಕರಣನಾಗಿದ್ದ ಒಬ್ಬ ಪ್ರಸಿದ್ದ ಬ್ರಾಹ್ಮಣನಿಂದ ಇತರಾದೇವಿಯಲ್ಲಿ ಮಹಿದಾಸ ಪೂಜ್ಯ ಚರಣನಾಗಿ ಅವತರಿಸಿದ. ಐತರೇಯಶ್ರುತಿ ಮೊದಲಾದ ಸಚಾಸ್ತ್ರಗಳನ್ನು ನೆಲೆಗೊಳಿಸಿದ ಅವತಾರವೇ **ಮಹಿದಾಸಾವತಾರ**.

- **ಕಲ್ಕಿರೂಪ** – ವಿಷ್ಣುಯಶಸ್ ಎಂಬ ಶುದ್ಧಮನಸ್ಸಿನ ಬ್ರಾಹ್ಮಣನಿಂದ **“ಕಲ್ಕಿ”** ನಾಮಕನಾಗಿ ಅವತರಿಸಿದನು.

- ಯಜ್ಞರೂಪ ವರ್ಣನೆ – ನಾರಾಯಣನು ಪಾಪದ ಕೊಳಕಿಲ್ಲದ, ಉತ್ತಮ ತಪಸ್ವಿಯಾದ “ರುಚಿ” ಪ್ರಜಾಪತಿಯಿಂದ, ಸ್ವಾಯಂಭುವಮನುವಿನ ಪುತ್ರಿಯಾದ “ಅಕೂತಿ”ಯಲ್ಲಿ ಪುತ್ರನಾಗಿ “ಯಜ್ಞ”ನೆನಿಸಿದ. ಕಾಲಾಂತರದಲ್ಲಿ ದೇವೇಂದ್ರಪದದಲ್ಲಿದ್ದು, ತನ್ನಲ್ಲಿ ಬಹುಭಕ್ತಿಭರಿತರಾದ ದೇವತೆಗಳನ್ನು ಹುಟ್ಟಿಸಿದ. – **ಯಜ್ಞರೂಪ**

- **ಕಪಿಲರೂಪ** – ಕರ್ದಮಪ್ರಜಾಪತಿಯಿಂದ ಸ್ವಾಯಂಭುವಮನುಪುತ್ರಿಯಾದ ದೇವಹುತಿಯ ಪುತ್ರ ಕಪಿಲನಾಗಿ ಅವತರಿಸಿ – ಸಾಂಖ್ಯಸಿದ್ಧಾಂತದ ಉಪದೇಶ ಮಾಡಿದ.

- **ಧನ್ವಂತರೀರೂಪ ವರ್ಣನೆ** – ಸಮುದ್ರಮಥನ ಕಾಲದಲ್ಲಿ ನವಯೌವ್ವನೋಪೇತರಾಗಿ ಧನ್ವಂತರೀರೂಪದಿಂದ ಬಂದು ಅಮೃತವ ತಂದ ರೂಪ.

  **ಮೋಹಿನೀರೂಪ** – ಆ ಅಮೃತವನ್ನು, ದೈತ್ಯರು ವಶಪಡಿಸಿಕೊಳ್ಳಲು, ಉತ್ತಮಸ್ತ್ರೀರೂಪದಿಂದ ಅಸುರರು ಕಿತ್ತುಕೊಂಡಿದ್ದ ಅಮೃತವನ್ನು ದೇವಸಮೂಹಕ್ಕೆ ಉಣಬಡಿಸಿದರೂಪ.

- **ದತ್ತಾತ್ರೇಯರೂಪ,** – ಅತ್ರಿ–ಅನುಸೂಯಾ ದಂಪದಿಗಳಲ್ಲಿ “ದತ್ತ”ನಾಗಿ ಅವತರಿಸಿದನು.

- **ಕುಮಾರರೂಪ** – ಮುನಿಶ್ರೇಷ್ಟರಿಂದ ಧ್ಯಾನಿಸಲ್ಪಟ್ಟಾವನಾಗಿ, ಸಜ್ಜನರಿಗೆ ಮುಕ್ತಿಪದವನ್ನು ಕರುಣಿಸುವ ಮನ:ಶುದ್ಧಿಯನ್ನು ಒದಗಿಸುವ “ಕುಮಾರ” ರೂಪವನ್ನು ತಾಳಿದ.

- **ಋಷಭರೂಪ, ಹಂಸರೂಪ** – ಋಷಬರೂಪವು ಅವಧೂತಚರ್ಯೆಯನ್ನು ಶಿಕ್ಷಣ ಮಾಡಿದ ರೂಪ. ಹಂಸರೂಪದಿಂದ ಸನಕಾದಿ ಉತ್ತಮ ಅಧಿಕಾರಿಗಳಿಗೆ ತತ್ತ್ವಜ್ಞಾನವನ್ನು ಉಪದೇಶಿಸಿದನು.

- **ನಾರಾಯಣರೂಪ, ಹರಿರೂಪ, ಕೃಷ್ಣರೂಪ** – “ನರ”ನೆಂಬ ಶೇಷದೇವರ ಸಹೋದರನಾಗಿ, ಯಮಧರ್ಮನಾಗಿ ಪ್ರಾದುರ್ಭವಿಸಿರುವನು – ನಾರಾಯಣಾವತಾರ.
  ಅನಂತರ ಆ ರೂಪಕ್ಕೆ ಸಹೋದರನಾಗಿ “ಹರಿ” ಎಂಬ ಹೆಸರಿನಿಂದ – ಹರಿಅವತಾರ
  ಇವನೇ ಸ್ವತ: ಸಜ್ಜನರ ಸಂತೋಷಕ್ಕೆಂದು “ಕೃಷ್ಣ” ಎಂಬ ಹೆಸರಿನಿಂದ “ಕೃಷ್ಣಾವತಾರ”
- ಪರಮಾತ್ಮನ ದಶ–ಶತ–ಸಹಸ್ರ–ಅನಂತರೂಪಗಳ ಹಿರಿಮೆ.

- ***ಪರಮಾತ್ಮನೇ ಸತತಮೇಕರೂಪಿಣೇ ದಶರೂಪಿಣೇ ಶತಸಹಸ್ರರೂಪಿಣೇ ।***

*ಅವಿಕಾರಿಣೇ ಸ್ಫುತಮನಂತರೂಪಿಣೇ ಸುಖಚಿತ್ಸಮಸ್ತತನವೇ ನಮೋ ನಮ: ॥*

- ಶ್ರೀಮನ್ನಾರಾಯಣನಿಂದ ಬ್ರಹ್ಮಸೂತ್ರಕ್ಕೆ ಭಾಷ್ಯೆ ರಚನೆಗೆ ಆದೇಶ.
- ನಾರಾಯಣನ ಬಳಿಯೇ ಇರಲು ಶ್ರೀಮದಾಚಾರ್ಯರ ಪ್ರಾರ್ಥನೆ.
- ನಾರಾಯಣನ ಆದೇಶ – ಭೂಲೋಕಕ್ಕೆ ಹೋಗಿ ಪರಮಾತ್ಮನ ಗುಣಗಳನ್ನು ಮತ್ತೆ ಅರಳಿಸಲೆಂದು.
- ಭಾಷ್ಯರಚನೆಗೆ ಆಚಾರ್ಯರ ಸಮ್ಮತಿ.

ಮತಮಿತ್ಯವೇತ್ಯ ಮಹಿತಂ ಮಹತೋರಭಿಧಾಯ ಬಾಢಮಿತಿ ಧೀರಮತಿ: ।
ಆನಯೋರ್ನಿಯೋಗಮಧಿರೋಪಿತವಾನ್ ಸ್ವಶಿರಸ್ಯನನ್ಯಸುವಹಂ ಪ್ರಣಮನ್ ॥

ಶ್ರೀವ್ಯಾಸ–ನಾರಾಯಣರು ಆಚಾರ್ಯ ಮಧ್ವರಿಗೆ ಬ್ರಹ್ಮಸೂತ್ರಕ್ಕೆ ಭಾಷ್ಯ ರಚಿಸಲು ಆದೇಶ ನೀಡಿದ್ದನ್ನು ಸಮ್ಮಿತಿಸಿ, ಅವರ ಆದೇಶವನ್ನು ತಮ್ಮ ಶಿರಸ್ಸಿನಲ್ಲಿ ಧರಿಸಿಕೊಂಡರು.

# ನವಮ ಸರ್ಗ

**ಚೋದಯಂತಮಥ ಗಂತುಮಾದರಾತ್ ತತ್ರ ಧರ್ಮಜಮಜಂ ಪ್ರಣಮ್ಯ ಸ:।**
**ಸೌಖ್ಯತೀರ್ಥಕವಿಲೋಕನಾಯಕೋ ವೇದನಾಯಕಪುರ:ಸರೋ ಯಯೌ ॥**

- ♣ ನಾರಾಯಣಾಶ್ರಮದಿಂದ ವ್ಯಾಸಾಶ್ರಮಕ್ಕೆ ಪುನರಾಗಮನ
- ♣ ವ್ಯಾಸಾಶ್ರಮದಲ್ಲಿ ಮತ್ತೊಮ್ಮೆ ಅಪೂರ್ವ ಶ್ರವಣ
- ♣ ವ್ಯಾಸಾಶ್ರಮದಿಂದ ವಿಶಾಲಬದರಿಗೆ ಪ್ರಯಾಣ
- ♣ ಹಿಮವತ್ಪರ್ವತದಿಂದ ಇಳಿಯತೊಡಗಿದ ಶ್ರೀಮದಾಚಾರ್ಯರು ಮತ್ತು ಶಿಷ್ಯರ ಸಂತಸ.
- ♣ ಅಗ್ನಿಶರ್ಮಾದಿ ಐದಾರು ಜನ ಬ್ರಾಹ್ಮಣರು ಒಂದೇ ಸಲಕ್ಕೆ ಪ್ರತ್ಯೇಕವಾಗಿ ಭಿಕ್ಷೆಗೆಂದು ತಂದಿರಿಸಿದ ಅನ್ನವನ್ನೆಲ್ಲ ಶ್ರೀಮಧ್ವಾಚಾರ್ಯರೊಬ್ಬರೇ ಭೋಜನ ಮಾಡಿದರು.

- ♣ **ಬ್ರಹ್ಮಸೂತ್ರದ ಭಾಷ್ಯದ ವರ್ಣನೆ** – ಶ್ರೀವೇದವ್ಯಾಸದೇವರ ಮನಸ್ಸಿಗೆ ಅತ್ಯಂತ ಪ್ರಿಯವಾದ ಶ್ರೀಮನ್ನಾರಾಯಣನನ್ನು ಅನಂತಗುಣಪೂರ್ಣ, ಸಕಲದೋಷದೂರ, ಮೋಕ್ಷವನ್ನು ಕರುಣಿಸುವ, ಅಪಶಬ್ದಾದಿ ಸಕಲ ದೋಷರಹಿತವಾದ, ವ್ಯರ್ಥವಚನರಹಿತವಾದ, ಆ ಮುಂಚಿನ ಇಪ್ಪತ್ತೊಂದು ಕುಭಾಷ್ಯಗಳನ್ನು ಖಂಡಿಸುವ, ಬ್ರಹ್ಮಸೂತ್ರಭಾಷ್ಯವನ್ನು ರಚಿಸಿದರು.
- ♣ ಸತ್ಯತೀರ್ಥರಿಂದ ಶ್ರೀಮದಾಚಾರ್ಯರ ಭಾಷ್ಯದ ಲೇಖನ.
- ♣ ಗೋದಾವರಿ ನದಿ ತೀರದಲ್ಲಿ ವಿದ್ವತ್ಸಭೆಗೆ ಆಗಮನ.
- ♣ ಆ ವಿದ್ವತ್ಸಭೆಯಲ್ಲಿ ವಿದ್ವತ್ಸಂಭಾವನೆಯನ್ನು ಪಡೆಯಲೆಂದು ಬಂದು ಸೇರಿದ್ದ ಋಗಾದಿಗಳ 18 ಶಾಖೆಗಳಲ್ಲಿ ನಿಷ್ಣಾತರಾದ ಪಂಡಿತರು ತಮ್ಮನ್ನು ಪರೀಕ್ಷಿಸಲೆಂದು ಕೇಳಿದ ಸಕಲಶ್ರುತಿಗಳನ್ನು ವಿವರಿಸಿದರು ಮತ್ತು ಷಡ್ದರ್ಶನಗಳನ್ನು ಖಂಡಿಸಿದರು.
- ♣ ಆ ವಿದ್ವಾಂಸರುಗಳು ಶ್ರೀಮಧ್ವಾಚಾರ್ಯರನ್ನು ಪ್ರತ್ಯೇಕ ಪ್ರತ್ಯೇಕವಾಗಿ ತಾವು ತಿಳಿದಿದ್ದ ಋಗಾದಿ ವೇದಶಾಖೆಗಳಲ್ಲೂ, ಶಾಸ್ತ್ರಗಳಲ್ಲೂ ಪರೀಕ್ಷಿಸಿ, ಪರಾಜಿತರಾದರು ಮತ್ತು ಜ್ಞಾನಿವರೇಣ್ಯರಾದ ಶ್ರೀಮದಾಚಾರ್ಯರೇ **ಸರ್ವಜ್ಞರು,** ಅವರಿಗೆ ಸಮರಾದವರಾರೂ ಇಲ್ಲ ಎಂದು ಕೊಂಡಾಡಿದರು.

## ಶೋಭನಭಟ್ಟರು ಸುಖತೀರ್ಥರಿಗೆ ಶರಣಾದರು –

ವೇದಶಾಸ್ತ್ರಗಳಲ್ಲಿ ಶ್ರೀಮನ್ಮಧ್ವಾಚಾರ್ಯರನ್ನು ಬಗೆಬಗೆಯಾಗಿ ಪರೀಕ್ಷಿಸಿ ಪರಾಭವಗೊಂಡ ಶೋಭನಭಟ್ಟರು ಅವರನ್ನು **ಸರ್ವಜ್ಞ**ರೆಂದು ನಿಶ್ಚಯಿಸಿಕೊಂಡು ಆದರದಿಂದ ನಮಸ್ಕರಿಸಿ ಶರಣಾದರು.

ಆ ಕಾಲದಲ್ಲಿ ಪ್ರಚಲಿತವಾಗಿದ್ದ ಎಲ್ಲಾ ಮತಗಳನ್ನೂ ಖಂಡಿಸುತ್ತಲಿದ್ದ, ತರ್ಕಕೋವಿದರಾದ, ವೇದಭಾರತಪುರಾಣಗಳಲ್ಲಿ ನಿಷ್ಣಾತರಾದ, ಶೋಭನಭಟ್ಟರು ಬ್ರಹ್ಮಸೂತ್ರಭಾಷ್ಯವನ್ನು ಶ್ರೀಮದಾಚಾರ್ಯರಿಂದ ಶ್ರವಣ ಮಾಡಿದರು.

## ಶೋಭನಭಟ್ಟರಿಂದ ಮಧ್ವಶಾಸ್ತ್ರ ಪ್ರಚಾರ –

**ಬಲಮುರಿಶಂಖದಂತಹ ಮಧ್ವಶಾಸ್ತ್ರ** – ಸುಣ್ಣಾ ಮಾಡುವವನಿಗೆ ಅಮೂಲ್ಯವಾದ ಬಲಮುರಿಶಂಖ ದೊರೆತಾಗ ಅರಿಯದ ಅವನು ಅದನ್ನು ಪುಡಿಮಾಡಲು ಪ್ರಯತ್ನಿಸಿ ಅದು ಬಿಸಾಡುತ್ತಾನೆ. ಎಡಮುರಿಶಂಖವು ಲಕ್ಷ್ಮೀಸನ್ನಿಧಾನವಾದರೆ ಬಲಮುರಿಶಂಖವು ನಾರಾಯಣನ ಪ್ರತೀಕ.

- ಯಾವನು ತಾನಾಗಿ ಲಭಿಸಿದ, ಪುಣ್ಯಹೀನರಿಗೆ ದೊರೆಯದ ಬಲಮುರಿಶಂಖದಂತಹ ಶ್ರೀಮದಾಚಾರ್ಯರ ಶಾಸ್ತ್ರವನ್ನು ಪರಿತ್ಯಜಿಸುವನೋ ಅಂತಹ ದುರ್ಜನನು ಬಲಮುರಿಶಂಖವನ್ನು ತೊರೆದವನಂತೆಯೇ ಸರಿ. ಅವನಿಗೆ ಸದೃಶವಾದ ನೀಚಬುದ್ದಿಯವನು ದೊರೆಯುವುದೇ ಎಲ್ಲ. ಬಲಮುರಿಶಂಖವನ್ನು ತ್ಯಜಿಸುವುದಕ್ಕಿಂತಲೂ ಶ್ರೀ ಮಧ್ವಶಾಸ್ತ್ರವನ್ನು ತೊರೆಯುವುದು ಹೆಚ್ಚು ಮೂರ್ಖತನ.
- ಸುಣ್ಣಮಾರಿದವನು ಬಿಸಾಡಿದ ಬಲಮುರಿಶಂಖದ ಗುಣವಿಶೇಷಗಳನ್ನು ಬಲ್ಲ ಮತ್ತೊಬ್ಬನು ಅದನ್ನು ತೆಗೆದುಕೊಂಡು ಬೇರೊಬ್ಬನಿಗೆ ಮಾರಿ ಅಪಾರವಾದ ಧನವನ್ನು ಗಳಿಸಿದ.
- ಶ್ರೀಮಧ್ವಶಾಸ್ತ್ರವನ್ನು ಅಧ್ಯಯನ ಮಾಡಿ ಜ್ಞಾನಭಕ್ತ್ಯಾದಿ ಉನ್ನತಿಯನ್ನು ಹೊಂದುವವನು ಸಹ ಮಂದಬುದ್ದಿಯಿಂದಾಗಿ ಅದರ ಮುಖ್ಯಪ್ರಯೋಜನವಾದ ಪೂರ್ಣಜ್ಞಾನವನ್ನು ಪಡೆಯದೆ ಹೋದಲ್ಲಿ ಆ ಬಲಮುರಿಶಂಖವನ್ನು ಮಾರಿ ಹಣವನ್ನು ಮಾತ್ರ ಗಳಿಸಿಕೊಂಡ ಅಂತಹ ಮನುಷ್ಯನೇ ಸಾಟಿ ಎನ್ನಿಸುವನು.
- ಬಲಮುರಿಶಂಖವನ್ನು ಕೊಂಡ ರಾಜನೊಬ್ಬನು ಅದನ್ನು ಭಕ್ತಿಯಿಂದ ನಿತ್ಯ ಪೂಜಿಸಿ ಊಹೆಗೂ ನಿಲುಕದ ಐಶ್ವರ್ಯವನ್ನು ಗಳಿಸಿ ಕೃತಾರ್ಥನಾದ. ಬಲಮುರಿಶಂಖದಂತಹ ಮಧ್ವಶಾಸ್ತ್ರ ದೊರೆಯುವುದು ರಾಜರಂತಹ ಉತ್ತಮಾಧಿಕಾರಿಗಳಿಗೆ ಮಾತ್ರ – "ಸುಧಾ ವಾ ಪಠನೀಯಾ ವಸುಧಾ ವಾ ಪಾಲನೀಯಾ"

- ಈ ರೀತಿಯಾಗಿ ಬಲಮುರಿಶಂಖದ ಉದಾಹರಣೆಯೊಂದಿಗೆ ಮಧ್ವಶಾಸ್ತ್ರದ ಪ್ರಾಮುಖ್ಯತೆಯನ್ನು ವರ್ಣಿಸುತ್ತಿದ್ದರು.

- ಶ್ರೀಮದಾಚಾರ್ಯರು ಗೋದಾವರೀತೀರದಿಂದ ಮರಳಿ ಉಡುಪಿಗೆ ಆಗಮಿಸುವ ಮಾರ್ಗದಲ್ಲಿ ತಮ್ಮ ತತ್ತ್ವವಾದ ದರ್ಶನವನ್ನು ಸಜ್ಜನರಿಗೆ ಉಪದೇಶಿಸಿದರು.

- ಮರಳಿ ಬಂದ ಆಚಾರ್ಯರನ್ನು ಕಂಡು ಅಪಾರ ಆನಂದವನ್ನು ಅನುಭವಿಸಿದ ಅಚ್ಯುತಪ್ರೇಕ್ಷರು ಮತ್ತು ಜ್ಯೇಷ್ಟಯತಿಗಳಿಗೆ ಶ್ರೀಮದಾಚಾರ್ಯರು ತಮ್ಮ ಭಾಷ್ಯವನ್ನು ಶ್ರವಣ ಮಾಡಿಸಿದರು, ಉಪದೇಶಿಸಿದರು ಮತ್ತು ಅಚ್ಯುತಪ್ರೇಕ್ಷರು ತಮ್ಮ ಮನಸ್ಸಿನಲ್ಲಿದ್ದ ಕಲಿಮಲವನ್ನು ತಮ್ಮ ಸಮರ್ಥವಾದ ಸಿದ್ಧಾಂತಯುಕ್ತಿಗಳಿಂದ ಖಂಡಿಸುತ್ತಾ, ಸಂತೃಪ್ತಿ ಪಡೆದು ಪರಿಶುದ್ಧರಾದರು.

- ಮೊದಲಿಗೆ ಕುತ್ಸಿತವಾದ ಮಾಯಾವಾದಮತದಲ್ಲಿ ಅಪಾರನಿಷ್ಠೆ ಹೊಂದಿದ್ದ ಅಚ್ಯುತಪ್ರೇಕ್ಷರು ಮಧ್ವಶಾಸ್ತ್ರವನ್ನು ಶ್ರವಣ ಮಾಡುತ್ತ, ಬಾಯಾರಿದವನು ತಿಳಿಯದೆ ಉಪ್ಪುನೀರನ್ನು ಕುಡಿದು, ಅನಂತರ ಸಿಹಿನೀರನ್ನು ಕುಡಿದು ಆನಂದಿಸುವಂತೆ, ಬಹಳವಾಗಿ ಆನಂದಿಸಿದರು.

## ಶ್ರೀಕೃಷ್ಣಪ್ರತಿಮೆಯ ಪ್ರಾಪ್ತಿ –

ಒಮ್ಮೆ ಸರ್ವಜ್ಞರಾದ ಶ್ರೀಮದಾಚಾರ್ಯರು ಭಕ್ತವರ್ಗದ ಕಲ್ಯಾಣಕಾಗಿ ಶ್ರೀಕೃಷ್ಣಪ್ರತಿಷ್ಠೆಯನ್ನು ಮಾಡಬಯಸಿದವರಾಗಿ ದ್ವಾದಶಸ್ತೋತ್ರದ ರಚನೆಗೆ ಆರಂಭಿಸಿ ಒಡಭಾಂಡೇಶ್ವರದ ಬಳಿಯ ಸಮುದ್ರಕ್ಕೆ ತೆರಳಿದರು. ಅಲ್ಲಿ ಸ್ನಾನ ಮಾಡಿ ಜಪಾದಿಗಳಲ್ಲಿ ನಿರತರಾಗಿದ್ದಾಗ ದ್ವಾರಕೆಯಿಂದ ಬರುತ್ತಿದ್ದ ನಾವೆಯೊಂದು ತೀರವನ್ನು ತಲುಪಲಾರದೆ ಸಮುದ್ರದಲ್ಲೇ ನಿಂತುಬಿಡಲು, ಅದರಲ್ಲಿನ ನೌಕಾಧಿಪತಿಯು ಪ್ರಾರ್ಥಿಸಿಕೊಳ್ಳಲು, ಶ್ರೀಮದಾಚಾರ್ಯರು ತಮ್ಮ ಶಾಟಿಯನ್ನು ಬೀಸಿ, ಅದನ್ನು ತೀರಕ್ಕೆ ಸುರಕ್ಷಿತ ತಲುಪಿಸಿದರಂತೆ. ಅದರಿಂದ ಸಂತುಷ್ಟನಾದ ಹಡಗಿನ ಯಜಮಾನನು 'ಏನನ್ನಾದರೂ ನಮ್ಮಿಂದ ಸ್ವೀಕರಿಸಲೇಬೇಕು' ಎನ್ನಲು, ನಾವೆಯಲ್ಲಿದ್ದ ಗೋಪೀಚಂದನಗಡ್ಡೆಯನ್ನು ಸ್ವೀಕರಿಸಿದರೆಂದೂ, ಅದರೊಳಗಿದ್ದ ಶ್ರೀಕೃಷ್ಣಪ್ರತಿಮೆಯನ್ನು ಮಧ್ವಸರೋವರದಲ್ಲಿ ತೊಳೆದು ಅಭಿಷೇಕಿಸಿ, ಪ್ರತಿಷ್ಠಾಪಿಸಿದರೆಂದೂ ಅನೇಕ ಗ್ರಂಥಗಳಲ್ಲಿ ಉಲ್ಲೇಖ ಉಂಟು.

- ಮೂಲತ: ಸಾಲಗ್ರಾಮ ಶಿಲಾಮೂರ್ತಿಯಾದ ಶ್ರೀಕೃಷ್ಣವಿಗ್ರಹವು ದೇವಕೀದೇವಿಯ ಪ್ರಾರ್ಥನೆಯಂತೆ ಪ್ರಕಟವಾದ ಬಾಲರೂಪವೆಂದೂ ಅದು ರುಕ್ಮಿಣೀದೇವಿಯ ಅಪೇಕ್ಷೆಯಂತೆ ಸ್ವತ: ಶ್ರೀಕೃಷ್ಣನಿಂದ ವಿಶ್ವಕರ್ಮನಿಂದ ಮಾಡಿಸಲ್ಪಟ್ಟಿತೆಂದೂ ಪುರಾಣಾದಿ ವಚನವಿದೆ.

- ತಮ್ಮ ಅತ್ಯಂತಪವಿತ್ರ ಸ್ಪರ್ಶದಿಂದಾಗಿ, ಭಗವಂತನಾದ ಶ್ರೀ ಹರಿಯ ವಿಶೇಷ ಸನ್ನಿಧಾನ ಮೂಡಿದ, ಅದರಿಂದಾಗಿ ಬಹಳವಾಗಿ ಪ್ರಯತ್ನಿಸಿದ ೩೦ ಜನರಿಂದಲೂ ಎತ್ತಲಾಗದ, ಆ ಪ್ರತಿಮೆಯನ್ನು ಶ್ರೀಮದಾಚಾರ್ಯರು ಅನಾಯಾಸವಾಗಿ ಎತ್ತಿಕೊಂಡು ಮಠಕ್ಕೆ ಒಯ್ದರು.
- ಸುಂದರನಾದ, ವಂಧ್ಯನಾದ ನಂದನಂದನನಾದ ಶ್ರೀಕೃಷ್ಣನನ್ನು ಪ್ರತಿಷ್ಠೆಗೆ ವಿಹಿತವಾದ ನಿರ್ಮಲವಾದ ವಿಧಿವಿಧಾನದೊಂದಿಗೆ ಆ ಪ್ರತಿಮೆಯಲ್ಲಿ ಸನ್ನಿಹಿತನನ್ನಾಗಿ ಮಾಡಿದರು.
- ಶ್ರೀಕೃಷ್ಣಪ್ರತಿಷ್ಠೆಯ ಕಾಲದಲ್ಲಿ ನಡೆದ ಯಜ್ಞವೊಂದಕ್ಕೆ, ಗುರುಪುತ್ರ ವಾಸುದೇವನ ಯಜ್ಞಕ್ಕೆ ಅಡ್ಡಿ ಮಾಡತೊಡಗಿದ್ದ ಜರಾಘಟಿತಗೋತ್ರ ಎಂಬ ದುಷ್ಟನನ್ನು ಪರಾಭವಗೊಳಿಸಿದರು.
- ಗುರುಪುತ್ರನಿಂದ ಯಜ್ಞಕ್ಕೆ ಮಧ್ವಾನುಜರ ಹೋತೃತ್ವ. ಅಲ್ಲಿ ಯಜ್ಞಕ್ಕೆ ವಿಘ್ನವನ್ನುಂಟು ಮಾಡುವ ರಾಕ್ಷಸರನ್ನು ನಿರಾಸೆಗೊಳಿಸಿ, ದೇವತೆಗಳಿಗೆ ಹವಿರ್ಭಾಗವನ್ನು ತಲುಪಿಸಿದರು.

ಶ್ರೀವೇದವ್ಯಾಸದೇವರು, ತಮ್ಮ ಅಪ್ಪಣೆಯನ್ನು ನೆರವೇರಿಸಿದ ಶ್ರೀಮದಾಚಾರ್ಯರಿಗೆ ನೀಡಲು ಅನುರೂಪವಾದ ಬೇರಾವ ವಸ್ತುವನ್ನೂ ಕಾಣದೆ, ತಾವು ಹಿಂದೆ ಅವರ ಹನುಮದ್ರೂಪಕ್ಕೆ ಕೊಟ್ಟಿದ್ದ, ಇತರರಿಗೆ ಎಂದೂ ನೀಡದ “ಸಹಭೋಗ”ವೆಂಬ ಚತುರ್ಮುಖ ಬ್ರಹ್ಮಪದವಿಯನ್ನೇ ಮತ್ತೆ ಕರುಣಿಸಿದರು.

ಪ್ರಣಮ್ಯ ಗುರುಮಾದರಾದಥ ನಿಯೋಗತೋ ಯೋಗ್ಯತ:  
ಸ ತಸ್ಯ ಜಗತಾಂ ಹಿತಂ ವಿದಧತೋ ಗತ: ಸಾನುಗ: ।  
ಮಹಿಷ್ಠಹೃದಯೋ ಮಹಾಮಹಿಮಸಿಂಧುರಾನಂದತೋ  
ನಿಜೈರಭಿಗತೋಽನಮದ್ರಜತಪೀಠವಾಸಂ ಹರಿಮ್ ॥

ಹೀಗೆ ತಮ್ಮ ದ್ವಿತೀಯ ಬದರೀಯಾತ್ರೆಯನ್ನು ಪೂರೈಸಿ ಉಡುಪಿಗೆ ಮರಳಿದ ಶ್ರೀಮದಾಚಾರ್ಯರು ಅಲ್ಲಿಯ ಅನಂತೇಶ್ವರನಿಗೆ ನಮಸ್ಕರಿಸಿದರು.

# ದಶಮಸರ್ಗ

ಸಪದಿ ಸಮಸ್ಕುರುತ ಭೃಶಂ ಮಾಧವಗುಣಸಾಧಕೋ ಥ ಮಧ್ವರವಿ:।
ಭೃಗುಕುಲತಿಲಕಸ್ಥಾನಂ ತಾಪಕರ: ಪಾಪಪಾಂಥಾನಾಮ್ ।
ಶ್ರೀಮಧ್ವಾಚಾರ್ಯರು ಪರಶುರಾಮಕ್ಷೇತ್ರವಾದ ಉಡುಪಿಗೆ ಬಂದರು

ಲೋಕಾಶ್ಚರ್ಯಕರವಾದ ಅದ್ಭುತವಾದ ಶ್ರೀಮದಾಚಾರ್ಯರ ಚರಿತ್ರೆಯನ್ನು ನಾವು ದೇವತೆಗಳ ಆಯುಷ್ಯದಿಂದಲೂ ವಿವರಿಸಲಾರೆವು.

**ಈಶ್ವರದೇವನ ಪ್ರಸಂಗ** – ಒಂದು ಸಾರಿ ಶ್ರೀಮದಾಚಾರ್ಯರು ಪ್ರಯಾಣಿಸುತ್ತಿದ್ದಾಗ, ಈಶ್ವರದೇವ ಎಂಬ ರಾಜನು ತನ್ನ ಗ್ರಾಮದಲ್ಲಿ ಕೆರೆಯೊಂದನ್ನು ತೋಡಿಸುವ ಯೋಜನೆಯೊಂದನ್ನು ಹಾಕಿಕೊಂಡು, ಆ ಗ್ರಾಮಕ್ಕೆ ಬರುವ ಎಲ್ಲ ಜನರಿಂದಲೂ ರಾಜಾಜ್ಞೆ ನೀಡಿ ತೋಡಿಸುತ್ತಿದ್ದ. ಶ್ರೀಮದಾಚಾರ್ಯರಿಗೂ ತೋಡುವ ಆಜ್ಞೆ ಮಾಡಿದ. ಆಗ ಆಚಾರ್ಯರು ರಾಜನನ್ನು ಕುರಿತು "ನಾವು ಸನ್ಯಾಸಿಗಳು, ನಮಗೆ ಹೇಗೆ ತೋಡಬೇಕೆಂದು ತಿಳಿಯದು, ನೀನೇ ತೋರಿಸಿಕೊಡು" ಎಂದಾಗ, ಆ ರಾಜನೇ ಸ್ವತ: ತೋಡಿ ತೋರಿಸಲು ಆರಂಭಿಸುತ್ತಾನೆ, ಶ್ರೀಪೂರ್ಣಪ್ರಜ್ಞರ ಮಹಾತ್ಮ್ಯದಿಂದಾಗಿ ಮೈಮರೆತು, ಆ ಕಾರ್ಯವನ್ನು ನಿಲ್ಲಿಸಲೇ ಇಲ್ಲ.

- **ನಾರಾಯಣಪಂಡಿತರ ಏಕಾಕ್ಷರಯಮಕಾಲಂಕರದ ಶ್ಲೋಕ** –

  ನಾನೇನೇನಾನೇನಾನೇನೋನೂನೇನ ನನು ನುನ್ನಾ: ।
  ನಾನಾನಾ ನೋ ನೂನಂ ನಾನೇನಾನೂನನಾಽನುನ್ನ: ॥

ದೋಷರಹಿತರಾದ, ಸರ್ವಜೀವೋತ್ತಮರಾದ, ಸಕಲಪ್ರಾಣಪ್ರೇರಕರಾದ ಶ್ರೀ ಮಧ್ವಾಚಾರ್ಯರಿಂದಲೂ ಪ್ರೇರಿಸಲ್ಪಡದ ಚೇತನರೇ ಇಲ್ಲ; ಇತರ ಚೇತನರಿಗೆ ಒಡೆಯರಾದ ಬ್ರಹ್ಮಾದಿಗಳಲ್ಲೂ ನೆಲೆಸಿರುವ ಲಕ್ಷ್ಮೀಪತಿಯಾದ ನಾರಾಯಣನೊಬ್ಬನೇ ಇವರಿಂದ ಎಂದೂ ಪ್ರೇರೇಪಿಸಲ್ಪಡದೆ ಇರುವವನು

**ಶಿಷ್ಯರನ್ನು ಗಂಗಾನದಿ ದಾಟಿಸಿದ್ದು** –

ವೈಷ್ಣವಾಗ್ರೇಸರರಾದ, ಸರ್ವಸಮರ್ಥರಾದ, ಶ್ರೀಮದಾಚಾರ್ಯರು ಶತ್ರುಭಯದಿಂದಾಗಿ ನಾವೆಗಳು ಸಂಪೂರ್ಣವಾಗಿ ಇಲ್ಲವಾಗಿದ್ದ ಗಂಗಾನದಿಯ ತೀರವನ್ನು ತಲುಪಿ, ತಮ್ಮ ಶಿಷ್ಯರನ್ನು, ಒಬ್ಬರನ್ನೊಬ್ಬರು ಸಾಲಾಗಿ ನಿಲ್ಲಿಸಿ ಮುಂದಿನ ಶಿಷ್ಯನಿಗೆ ತಾವೇ ಆಶ್ರಯರಾಗಿ ಆ ಗಂಗಾನದಿಯನ್ನು ಲೀಲಾಜಾಲವಾಗಿ ದಾಟಿಸಿದರು. ತುರುಷ್ಕ ಭಟರು ಕೂಗಿಕೊಳ್ಳುತ್ತಾ ತಮ್ಮ ಮೇಲೆ ನುಗ್ಗತೊಡಗಿದಾಗ ಅವರ ಜೊತೆ ತುರುಷ್ಕ ಭಾಷೆಯಲ್ಲೇ ಮಾತನಾಡಿ “ನಿಮ್ಮ ರಾಜನನ್ನು ಕಾಣಲೆಂದೇ ನಾವು ಹೊರಟಿರುವೆವು, ನಮ್ಮಿಂದ ನಿಮಗೆ ಯಾವುದೇ ಭಯವಿಲ್ಲ” ಎಂದಾಗ ಮಂತ್ರಮುಗ್ಧರಾದ ತುರುಷ್ಕಭಟರ ಮುಂದೆ ಶ್ರೀಮದಾಚಾರ್ಯರು ನರಿಗಳ ಗುಂಪಿನಲ್ಲಿ ಸಿಂಹವು ಹೇಗೋ ಹಾಗೆ ಕಂಗೊಳಿಸಿದರು. ಆಗ ತುರುಷ್ಕ ರಾಜ ಕೇಳುತ್ತಾನೆ? “ಸ್ವಾಮಿ, ನಾವೆಗಳಿಲ್ಲದೆ ಈ ಗಂಗಾನದಿಯನ್ನು ನೀವು ಹೇಗೆ ದಾಟಿದಿರಿ? ಮುಂದೆ ಏನನ್ನು ಮಾಡಬಯಸಿರುವಿರಿ?” ಎಂದನು. ಆಚಾರ್ಯರು ಹೇಳುತ್ತಾರೆ “ಜಗತ್ತನ್ನೇ ಬೆಳಗುವ, ಪ್ರಕಾಶಸ್ವರೂಪನಾದ ಸೂರ್ಯ ನಾರಾಯಣನ ಪರಮಾನುಗ್ರಹದಿಂದ ಎಲ್ಲವನ್ನೂ ಮಾಡುವೆವು. ನಾವೀಗ ಉತ್ತರ ದಿಕ್ಕಿಗೆ ಹೊರಟಿರುವೆವು” ಎಂದರು. ತುರುಷ್ಕರಾಜನ ಬಳಿ ಹರಿಸರ್ವೋತ್ತಮತ್ವ ರೂಪವಾದ ತಾತ್ತ್ವಿಕ ಹಿನ್ನೆಲೆಯ ಮಾತನ್ನೇ ತಿಳಿಸಿದ್ದು ಒಂದು ಆಶ್ಚರ್ಯವಾದರೆ, ಅದನ್ನೆಲ್ಲ ಅವನ ಭಾಷೆಯಲ್ಲೇ ಮನೋಜ್ಞವಾಗಿ ತಿಳಿಸಿದ್ದು ಮತ್ತೊಂದು ಆಶ್ಚರ್ಯವಾಯಿತು.

**ಅಂಗಾರ-ಅಕ್ಷತೆ** – ಶ್ರೀಮಧ್ವಾಚಾರ್ಯರನ್ನು ಆ ತುರುಷ್ಕರಾಜನು (ಅವರ ಹಣೆಯಲ್ಲಿದ್ದ ಅಕ್ಷತೆ-ಅಂಗಾರವನ್ನು ನೋಡಿ) “ನಿಮ್ಮ ಹಣೆಯಲ್ಲಿರುವುದೇನು? ಎಂದು ಕೇಳಲು, ಅವರು **“ನೀವು ಕೈಯಲ್ಲಿ ಗದೆಯನ್ನು ಹಿಡಿದರೆ, ನಾವು ಅದನ್ನು ಹಣೆಯಲ್ಲಿ ಧರಿಸಿರುವೆವು”** ಎಂದು ಉತ್ತರಿಸಿದರು ಎಂಬ ವಿಶೇಷಾಂಶವು ಇತ್ಯಾದ್ಯಂ ಎಂಬಲ್ಲಿನ ಆದ್ಯಶಬ್ದದ ಅರ್ಥ ಎಂಬುದಾಗಿ ಭಾವಪ್ರಕಾಶಿಕೆಯ ಒಂದು ಪ್ರಾಚೀನ ಪ್ರತಿಯಲ್ಲಿದೆ – ಕಿಂ ಲಲಾಟೇ ಇತಿ ಪೃಷ್ಟೋ ರಾಜ್ಞಾಮ್ ಕರೇಣ ಗದಾಂ ಭವಂಟೋ ಬಿಭ್ರಂತಿ ವಯಂ ಲಲಾಟೇ ಇತ್ಯೂಚೇ ಇತ್ಯಾದ್ಯಶಬ್ದಾರ್ಥ: (ಭಾ.ಪ್ರ) ಇದು ಅಂಗಾರ ಅಕ್ಷತೆಗಳ ಧಾರಣೆಗೆ ಒಂದು ಅಪೂರ್ವ ಆಧಾರವಾಗಿದೆ ಎಂಬುದನ್ನು ಗಮನಿಸಬೇಕು. (೧೭ನೇ ಶ್ಲೋಕ)

ಆಚಾರ್ಯರ ವ್ಯಕ್ತಿತ್ವಕ್ಕೆ ಮಾರುಹೋದ ತುರುಷ್ಕ ರಾಜ ತನ್ನ ಅರ್ಧರಾಜ್ಯವನ್ನೇ ಸಮರ್ಪಿಸಿದನು.

**ಚೋರವೃಂದದಿಂದ ಶಿಷ್ಯರನ್ನು ಕಾಪಾಡಿದರು** –

- ತಮ್ಮ ಮೇಲೆ ನುಗ್ಗಿದ ಚೋರರ ಗುಂಪೊಂದನ್ನು ನೋಡಿ, ತಮ್ಮವರನ್ನೆಲ್ಲ ಒಂದೆಡೆ ನಿಲ್ಲಿಸಿ, ಕೈಯಲ್ಲಿ ಗಂಟಿನಂತೆ ಹಿಡಿದ ವಸ್ತ್ರದಲ್ಲಿ ಧನಬುದ್ಧಿಯನ್ನು ಹಿಟ್ಟಿಸಿ, ಆ ಕಳ್ಳರ ಮಧ್ಯೆ ಓಡಾಡುತ್ತಾ ಮೋಹ ಕವಿಸಿ, ಪರಸ್ಪರ ಹೊಡೆದಾಡಿಕೊಳ್ಳುವಂತೆ ಮಾಡಿದರು.
- ಮತ್ತೊಮ್ಮೆ ಕೊಲ್ಲಬೇಕೆಂದು ಬಂದ ಶಿಷ್ಯರನ್ನು ತಮ್ಮ ಶಿಷ್ಯರಲ್ಲಿ ಒಬ್ಬರಾದ ಉಪೇಂದ್ರತೀರ್ಥರ ಮೂಲಕ ಅವರ ಕೊಡಲಿಯನ್ನೇ ಸೆಳೆಸಿ, ಆ ಗುಂಪಿನಲ್ಲಿದ್ದವರನ್ನು ಹೊಡೆದು ಓಡಿಸಿದರು.

- ಮತ್ತೊಮ್ಮೆ ಕಳ್ಳರು ಬಂದಾಗ ಅವರುಗಳಿಗೆ ಆಚಾರ್ಯರು ಮತ್ತು ಅವರ ಶಿಷ್ಯರು ಶಿಲಾಪ್ರತಿಮೆಗಳಂತೆ ಗೋಚರಿಸಿ, ಅವರೇ ನಮಸ್ಕರಿಸಿ ಹೊರಟುಹೋದರು.
- ಸತ್ಯತೀರ್ಥರನ್ನು ಕೊಲ್ಲಬೇಕೆಂದು ಬಂದ ವ್ಯಾಘ್ರರೂಪದ ಒಬ್ಬ ದೈತ್ಯನನ್ನು ತಮ್ಮ ಹಸ್ತದ ಲಘುಪ್ರಹಾರದಿಂದಲೇ ನಾಶಪಡಿಸಿದರು.
- ನಾರಾಯಣಾಶ್ರಮದಲ್ಲಿ ವ್ಯಾಸಮುಷ್ಟಿಗಳನ್ನು ಸ್ವೀಕರಿಸಿದ ಪ್ರಸಂಗ –
- ಶ್ರೀಮದಾಚಾರ್ಯರು ಶ್ರೀವೇದವ್ಯಾಸದೇವರಿಂದ, ದೋಷಿಗಳಿಗೆ ಅಹಿತನಾದ ನಾರಾಯಣನು ಲಕ್ಷ್ಮೀಸಮೇತನಾಗಿ ಸದಾ ಸನ್ನಿಹಿತವಾಗಿರುವ ಪವಿತ್ರ ಶಿಲಾರೂಪದ ಪ್ರತಿಮೆಗಳನ್ನು ಪಡೆದುಕೊಂಡರು.
- ಶ್ರೀಮದಾಚಾರ್ಯರ ಪ್ರಥಮ ಬದರೀಯಾತ್ರೆಯ ಸಮಯದಲ್ಲಿ ಬ್ರಹ್ಮಸೂತ್ರಗಳಿಗೆ ಭಾಷ್ಯ ರಚಿಸಲು ಆದೇಶ ನೀಡಿದ್ದ ಶ್ರೀವ್ಯಾಸ–ನಾರಾಯಣರು ಈ ಬಾರಿ ಅವರು ಮಹಾಭಾರತಕ್ಕೆ ತಾತ್ಪರ್ಯನಿರ್ಣಯವನ್ನು ಬರೆಯಲು ಆದೇಶಿಸಿದರು.
- ಮತ್ತೆ ಪವಿತ್ರವಾದ ಸಕಲ ತೀರ್ಥಗಳಲ್ಲೂ, ಕ್ಷೇತ್ರಗಳಲ್ಲೂ, ಭಗವಂತನಾದ ಶ್ರೀಹರಿಯನ್ನು ಭಕ್ತಿಯಿಂದ ವಂದಿಸುತ್ತ, ತಮ್ಮ ಅನುಚರರೊಂದಿಗೆ ಉನ್ನತವಾದ ತರಂಗಗಳಿಂದ ಕೂಡಿದ ಗಂಗಾನದಿಯನ್ನು ಪುನ: ತಲುಪಿದರು.
- ಶ್ರೀಮದಾಚಾರ್ಯರು ದಾಟಲು ನಾವೆಗಳಿಲ್ಲದ ಗಂಗಾನದಿಯನ್ನು, ದಾಟಿ ಹೋದಾಗ ಇಡೀ ಶಿಷ್ಯರ ಗುಂಪೇ ಆತಂಕಕ್ಕೊಳಗಾಗಿತ್ತು. ಆಚಾರ್ಯರು ಜಲಸ್ತಂಭನರೂಪಯೋಗ ಪ್ರಕಟಿಸಿದರು. ನಂತರ ತಮ್ಮ ಶಿಷ್ಯರನ್ನೂ ಸಹ ತಮ್ಮ ತೇಜಸ್ಸಿಗೆ ಬೆರಗಾದ ರಾಜ ಕಳುಹಿಸಿದ ನಾವೆ ನಡೆಸಬಹುದಾಗಿದ್ದ ನಾವಿಕರು ತಂದ ದೋಣಿಗಳ ಮೂಲಕ ದಾಟಿಸಿದರು.
- ಅಲ್ಲಿಂದ ಹೊರಟು ಹಸ್ತಿನಾಪುರದಲ್ಲಿ ತಲುಪಿ, ಅಲ್ಲಿ ಗಂಗಾನದಿಗೆ ದೂರದಲ್ಲಿನ ಏಕಾಂತಸ್ಥಳದ ಮಠವೊಂದರಲ್ಲಿ, ನಾಲ್ಕು ತಿಂಗಳು ಚಾತುರ್ಮಾಸ್ಯ ಆಚರಿಸಿದರು.

- **ವಾರಣಾಸಿಯಲ್ಲಿ ತೋರಿದ ವಿಚಿತ್ರ ಮಹಿಮೆಗಳು** –
  ಕಾಶಿಗ ತೆರಳಿದಾಗ, ವಿಹಾರದ ಸಮಯದಲ್ಲಿ ಗರ್ವಪಡತೊಡಗಿದ್ದ, ಬಲಶಾಲಿಗಳಾದ ತಮ್ಮ ಶಿಷ್ಯರನ್ನು ಕಂಡು "ನೀವೆಲ್ಲ ವೀರರೆಂದು ಬೀಗುತ್ತಿದ್ದೀರಿ. ನೀವೆಲ್ಲ ಈಗ ಒಟ್ಟಾಗಿ ನನ್ನ ಮೇಲೆ ನಿಮ್ಮ ಪೂರ್ಣ ಶಕ್ತಿ ತೊಡಗಿಸಿ ನುಗ್ಗಿ ಬನ್ನಿರಿ" ಎಂದಾಗ, ಎಲ್ಲರನ್ನೂ ಒಂದೇ ಬಾರಿ ಕೆಳಕ್ಕೆ ಬೀಳಿಸಿ, ಸಾಮರ್ಥ್ಯವಿರುವವನು ಬಿಡಿಸಿಕೊಳ್ಳಬಹುದು ಎಂದು ನಕ್ಕರು ಅವರೆಲ್ಲರೂ ಎಷ್ಟು ಪ್ರಯತ್ನಪಟ್ಟರೂ, ಶ್ರೀಮದಾಚಾರ್ಯರ ಒಂದು ಬೆರಳನ್ನೂ ಅಲ್ಲಾಡಿಸಲು ಸಾಧ್ಯವಾಗಲಿಲ್ಲ.

- ನೈಪುಣ್ಯದಿಂದ ಸಮಸ್ತ ಸಿದ್ಧಾಂತಗಳನ್ನೂ ಖಂಡಿಸುತ್ತಿದ್ದ ಇಂದ್ರಪುರಿಯ ಎಂಬ ಒಬ್ಬ ಸನ್ಯಾಸಿಯನ್ನು, "ಜ್ಞಾನಪೂರ್ವಕ ಕರ್ಮವೇ ಮೋಕ್ಷಕ್ಕೆ ಸಾಧನ" ಎಂದು ಸಾಧಿಸಿ ತೋರಿಸಿ ಪರಾಭವಗೊಳಿಸಿದರು.

- **ಶ್ರೀಮದಾಚಾರ್ಯರ ಪ್ರವಚನಗಳ ಸಾರಸಂಗ್ರಹ** –
- ***ವಿಷ್ಣುವು ಸ್ವತಂತ್ರನು. ಜಗತ್ತಿನಲ್ಲಿ ಸದಾ ನೆಲೆಸಿರುವವನು, ಸದಾ ಕ್ರೀಡಿಸುವವನು, ದುಷ್ಟರನ್ನು ನಾಶಪಡಿಸುವವನು, ಮೋಕ್ಷಯೋಗ್ಯರನ್ನು ದೋಷರಹಿತರನ್ನಾಗಿ ಮಾಡುವವನು, ಸತ್ವಾದಿ ಪ್ರಾಕೃತ ಗುಣರಹಿತನೂ, ಜ್ಞಾನಾನಂದಾದಿ ಅನಂತ ಗುಣಪೂರ್ಣನು ಆಗಿರುವವನು.***

- **ಕುರುಕ್ಷೇತ್ರದಲ್ಲಿ ಆಚಾರ್ಯರು** – ಕುರುಕ್ಷೇತ್ರದಲ್ಲಿ ತಾವು ಭೀಮಸೇನನಾಗಿದ್ದಾಗ ಧರಿಸಿದ ಆಯುಧಗಳನ್ನು ಸತ್ಯತೀರ್ಥಾದಿ ಶಿಷ್ಯರಿಗೆ ತೋರಿಸಿದರು.
- ಶ್ರೀಮದಾಚಾರ್ಯರು "ಹೃಷೀಕೇಶ" ಕ್ಷೇತ್ರಕ್ಕೆ ಬಂದಾಗ ಶ್ರೀರುದ್ರದೇವರು ವಿಪ್ರವೇಷದಲ್ಲಿ ಆಗಮಿಸಿ, ನಮಸ್ಕರಿಸಿ, ಭಿಕ್ಷೆಯನ್ನು ಸ್ವೀಕರಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿಸಿಕೊಂಡರು.

## ಆಚಾರ್ಯರ ವಿಚಿತ್ರ ಮಹಿಮೆಗಳು

- ಅನಂತರ ಇಷುಪಾತವೆಂಬ ಕ್ಷೇತ್ರಕ್ಕೆ ಬಂದು ಅಲ್ಲಿ ರಮಾಪತಿಯಾದ ಶ್ರೀಪರಶುರಾಮದೇವರನ್ನು ಭಕ್ತಿಯಿಂದ ಸ್ಮರಣೆ ಮಾಡಿದರು. ತಿನ್ನಲು ತಮಗೆ ನೀಡಿದ ಉತ್ತಮವಾದ "ರಾಜಕೇಲಿ" ಎಂಬ ದೊಡ್ಡಗಾತ್ರದ ಬಾಳೆಹಣ್ಣುಗಳನ್ನು ಸಾವಿರ ಸಂಖ್ಯೆಯಲ್ಲಿ ತಿಂದರು.
- ಶ್ರೀಮದಾಚಾರ್ಯರು "ಗೋವಾ" ಪ್ರದೇಶಕ್ಕೆ ಬಂದು, ಅಲ್ಲಿ "ಶಂಕರ" ಎಂಬ ಹೆಸರಿನ ಬ್ರಾಹ್ಮಣನೊಬ್ಬನು ಸಮರ್ಪಿಸಿದ ದೊಡ್ಡ ಗಾತ್ರದ ನಾಲ್ಕು ಸಾವಿರ ಹೆಬ್ಬಾಳೆ ಹಣ್ಣುಗಳನ್ನು ತಿಂದು, **30** ಕೊಡ ಹಾಲನ್ನು ಕುಡಿದು, ತಮ್ಮನ್ನು ತಡೆದ ರಾಜ ಹಾಗೂ ಅವನ ಭಟರಿಗೆ ಕಾಣದಂತೆ ಅದೃಶ್ಯರಾಗಿ ತೆರಳಿದರು.

- "ಪಶುಪೆ" ಎಂಬಲ್ಲಿ ಸಭೆಯೊಂದರಲ್ಲಿ ಜನರ ಗುಂಪು ಪ್ರಾರ್ಥಿಸಿಕೊಂಡಾಗ, ಶ್ರೀಮದಾಚಾರ್ಯರು, ಮೈಮರೆಸುವ ತಮ್ಮ ಅನುಪಮವಾದ ಗಾನ ಸಂಪತ್ತಿನಿಂದ, ಆಗಲೇ ಪುಷ್ಪ, ಫಲಗಳನ್ನೂ ಸಹ ಉಂಟು ಮಾಡಿದರು.

ಇತಿ ವಿವಿಧಗೋಧಾರಾವಾರ್ಯೈರಿವಿಶಾರದವಾರಿದೋ
ಹರಿಪದರತೋವಿದ್ಯಾವಿದ್ಯುತ್ಪ್ರದೀಪಿತದಗ್ಸ್ರುಖ : ।
ಭವಭಯಮಹಾಘರ್ಮೋತ್ತಪ್ತಂ ಸದಂಘ್ರಿಪಮಂಡಲಂ
ಸಫಲಸುಮನಃ ಸಾಂದ್ರಾನಂದಂ ವ್ಯಧಾದವಿಪಲ್ಲವಮ್ ॥

ಶ್ರೀಮಧ್ವರ ಚರಿತ್ರೆಯ ಪ್ರವಚನ ಕೇಳಿದ ಶಿಷ್ಯ–ಪ್ರಶಿಷ್ಯ, ಸಕಲ ಸಜ್ಜನರೂ ದು:ಖರಹಿತರಾಗಿಯೂ, ಜ್ಞಾನಾದಿಫಲಯುಕ್ತರಾಗಿಯೂ, ಆನಂದಭರಿತರಾಗಿಯೂ ಆದರು.

# ಏಕಾದಶ ಸರ್ಗ

**ಪ್ರಚುರಾಂತರಪ್ರವಚನಂ ಫಣಿರಾಡುಪಶುಶ್ರುವಾನ್ ಸಸನಕಾದಿಮುನಿಃ।**
**ಗಗನೇ ಲ್ಪದೃಷ್ಟವಪುರತ್ರ ಜನೈಸ್ತ್ವರಿತಂ ನಿಲೀನರುಚಿರಾಪ ಪದಂ।**

ಒಮ್ಮೆ ಬೆಳದಿಂಗಳು ಇಲ್ಲದಿದ್ದ ರಾತ್ರಿಯಲ್ಲಿ ಶ್ರೀಮದಾಚಾರ್ಯರು ಪ್ರವಚನ ಮಾಡುತ್ತಿದ್ದಾಗ, **ಮಧ್ವ ಭಾಷ್ಯ ಶ್ರವನಕ್ಕಾಗಿ ಶೇಷದೇವರು, ಸನಕಾದಿ ಮುನಿಗಳ ಸಮೇತ ಗಗನದಲ್ಲಿ ನಿಂತು, ಶ್ರೀಮಧ್ವರ ಬ್ರಹ್ಮಸೂತ್ರ ಭಾಷ್ಯ ಪ್ರವಚನವನ್ನು ಶ್ರವಣಮಾಡಿದರು, ನಂತರ ಅದೃಶ್ಯರಾದರು.**

- ಮಹಾಮತಿಗಳಾದ ಶೇಷದೇವರು ಶ್ರೀಮಧ್ವಶಾಸ್ತ್ರದ ಶ್ರವಣದ ಫಲವನ್ನು ವಿವರಿಸುತ್ತಾ, "ಪುಜ್ಯಪಾದರಾದ ಶ್ರೀಮಧ್ವಾಚಾರ್ಯರ ಷಾಸ್ತ್ರದ ಅತ್ಯಂತ ಮಾನ್ಯವಾದ ಫಲವನ್ನು ಆದರದಿಂದ ಶ್ರವಣ ಮಾಡಿರಿ. ಶ್ರೀಮಧ್ವಶಾಸ್ತ್ರದ ಶ್ರವಣಾದಿಗಳಿಂದ ಸ್ವರ್ಗಾದಿಫಲವು ಲಭಿಸುವುದಾದರೂ, ಇದರಿಂದ ಮೋಕ್ಷಫಲವೇ ಮುಖ್ಯ ಫಲ. ವೈಕುಂಠಪ್ರಾಪ್ತಿಯೇ ಮಧ್ವಶಾಸ್ತ್ರದ ಮುಖ್ಯಫಲ" ಎಂದರು.

- **<u>ವೈಕುಂಠ ವರ್ಣನೆ</u>** – ವೈಕುಂಠದಲ್ಲಿನ ಸೌಧಗಳು, ಗೃಹಗಳ ಸಾಲು, ಎಲ್ಲವನ್ನೂ ವರ್ಣಿಸಿರುವರು. ವೈಕುಂಠದ ಸಕಲವಸ್ತುಗಳೂ ಅಪ್ರಾಕೃತ. ಇಲ್ಲಿ ಅನಂತಮುಕ್ತ್ರರಿಂದ ಸದಾ ತುಂಬಿರುತ್ತದೆ. ಶ್ರೇಷ್ಠಮಂದಿರಗಳ ಸಮೂಹಗಳ ಮಧ್ಯದಲ್ಲಿ ಇರುವಂತಹ ಸಕಲ ಭುವನಗಳಿಗೂ ಮುಖ್ಯಸ್ವಾಮಿಯಾದ ಶ್ರೀ ಹರಿಯ ಮಂದಿರವು, ತ್ರಿಲೋಕಗಳಲ್ಲಿನ ಸಕಲ ಅಧ್ಭುತಗಳ ರಾಶಿಯನ್ನೆಲ್ಲಾ ಮೀರಿಸುವುದಾಗಿದ್ದು, ನಕ್ಷತ್ರಮಂಡಲ ಮಧ್ಯದಲ್ಲಿನ ಚಂದ್ರಮಂಡಲದಂತೆ ಅತಿಶಯವಾಗಿ ಪ್ರಕಾಶಿಸುವುದು. ಶ್ರೀಹರಿಯಂತಹ ಮತ್ತೊಬ್ಬ ದೇವನಿಲ್ಲ. ಅವನ ಮಂದಿರದಂತಹ ಮತ್ತೊಂದು ಮಂದಿರವೂ ಇಲ್ಲ ಎಂಬುದು ವಿಶೇಷ.

- ಇಲ್ಲಿ ಶ್ರೀಮಹಾಲಕ್ಷ್ಮಿಯು ಸ್ವತ: ತಾವೇ ಮನೆಯ ಸಕಲಕಾರ್ಯಗಳನ್ನೂ ಮಾಡುತ್ತ ಪತಿಯಾದ ಶ್ರೀಹರಿಯನ್ನು ಪೂಜಿಸುತ್ತಿರುವಳು. ಸರ್ವೋತ್ತಮನಾದ, ಕಮಲಾಪತಿಯಾದ ಶ್ರೀಹರಿಯು ಸ್ವರತನಾದರೂ ಸಹ, ಆ ಮಂದಿರದಲ್ಲಿ ಮುಕ್ತರಾದ ಶೇಷದೇವರ ಕೋಮಲ ಶರೀರದ ಮೇಲೆ ಮಲಗಿದ್ದು, ನಿರ್ದೋಷಳಾದ, ಮನೋಹರಳಾದ, ಕಮಲನೇತ್ರೆಯಾದ ಮಹಾಲಕ್ಷ್ಮಿಯೊಂದಿಗೆ ಕ್ರೀಡಿಸುವನು.

- **ವೈಕುಂಠದಲ್ಲಿ ಪೂರ್ಣಾನಂದಪ್ರಾಪ್ತಿ,** – ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ ಮತ್ತು ಸಾಯುಜ್ಯ ಎಂಬ ನಾಲ್ಕು ವಿಧಮುಕ್ತಿಯನ್ನು ಹೊಂದಿದವರಿಗೂ ಅವರವರ ಯೋಗ್ಯತೆಗೆ ತಕ್ಕಂತೆ ಪೂರ್ಣವಾದ ಆನಂದವೇ ಲಭಿಸುವುದು. ಇಲ್ಲಿ ಬ್ರಹ್ಮಾದಿಗಳು ಭಗವಂತನನ್ನು ಕಂಡು ಭಗವಧ್ಯಾನದಿಂದ ಉಂಟಾದ ಪೂರ್ಣಸುಖವನ್ನು ಅನುಭವಿಸುತ್ತ, ಆನಂದರಸವನ್ನು ಸವಿಯುತ್ತಾರೆ. ಇಲ್ಲಿ ಹುಟ್ಟುಸಾವುಗಳೇ ಇಲ್ಲ, ಮುಪ್ಪುಗಳಾಗಲಿ, ಇಲ್ಲ.

- **ವೈಕುಂಠದಲ್ಲಿ ಆನಂದಕ್ಕೂ ತಾರತಮ್ಯವಿದೆ**. ವೈಕುಂಠದಲ್ಲಿ ನಿತ್ಯತಾರುಣ್ಯವಿದೆ.
- ಮುಕ್ತಿಯಲ್ಲೂ ಸ್ತ್ರೀಭೋಗ, ವಿಮಾನ ಸಂಚಾರ ಎಲ್ಲವೂ ಇದೆ. ಸ್ತ್ರೀಯರಿಂದ ಅಂಗರಾಗಲೇಪನ, ಜಲಕ್ರೀಡೆಯ ವೈಭವ, ಸ್ತ್ರೀಯರ ಅಲಂಕಾರವೈಭವ, ರತಿವಿಲಾಸ, ಇತ್ಯಾದಿ.
- ವೈಕುಂಠದ ನೆಲ ಹವಳಗಳಿಂದ ನಿರ್ಮಿತವಾದದ್ದು.
- ಉದ್ಯಾನದಲ್ಲಿನ ಅಪೂರ್ವ ವೃಕ್ಷಗಳು – ಪಾರಿಜಾತ, ಕಲ್ಪವೃಕ್ಷ, ಹರಿಚಂದನ, ಇತ್ಯಾದಿ.
- ವೈಕುಂಠದಲ್ಲಿ ಎಲ್ಲ ಋತುಗಳನ್ನೂ ನಾರಾಯಣಪಂಡಿತಾಚಾರ್ಯರು ವರ್ಣಿಸಿರುವರು.

- ವೈಕುಂಠದಲ್ಲಿ ಶ್ರಮಾದಿ ಸಕಲದೋಷಗಳೂ ದೂರ, ಸ್ತ್ರೀಪುರುಷರ ಶರೀರಗಳೆಲ್ಲಾ ಜ್ಞಾನಾನಂದಮಯ.
- ಮುಕ್ತಲೋಕಗತ ಭಗವದ್ರೂಪದ ವರ್ಣನೆ, ಶ್ರೀಹರಿಯ ಮಕುಟ–ಕುಂತಲ, ತಿಲಕ, ಮಕರಕುಂಡಲ, ಶ್ರೀಹರಿಯ ಮುಖ, ತುಟಿ, ಮಂದಹಾಸ, ನೋಟಗಳ ವರ್ಣನೆ, ಕಂಠ, ಅಂಗುಲೀಯಕಾದಿಗಳು, ಚಕ್ರಶಂಖಾದಿ ಆಯುಧಗಳು, ಶ್ರೀಹರಿಯ ಹೆಗಲು, ವಕ್ಷಸ್ಥಳ, ಉದರ, ನಾಭಿಗಳು, ತೊಡೆ, ಜಂಘೆ, ಮುಂಗಾಲು ನಖಪಂಕ್ತಿ, ಪಾದದೂಳಿಗಳು, ಶ್ರೀಹರಿಯ ಗುಣರೂಪಗಳ ವೈಭವ, ಶ್ರೀ ಹರಿಯ ಅಪೂರ್ವ ದೇಹಕಾಂತಿ.
- **ಮಹಾನಂದತೀರ್ಥಸ್ಯ ಯೇ ಭಾಷ್ಯಭಾವಂ ಮನೋವಾಗ್ಭಿರಾವರ್ತಯಂತೇ ಸ್ವಶಕ್ತ್ಯಾ ।**
  **ಸುರಾದ್ಯಾ ನರಾಂತಾ ಮುಕುಂದಪ್ರಸಾದಾದಿಮಂ ಮೋಕ್ಷಮೇತೇ ಭಜಂತೇ ಸದೇತಿ ॥**
- ದೇವತೆಗಳನ್ನೂ ಸೇರಿ, ಯಾವ ಅಧಿಕಾರಿಗಳಿಗೆ, ಆಚಾರ್ಯ ಮಧ್ವರ ಬ್ರಹ್ಮಸೂತ್ರ ಭಾಷ್ಯದ ಅಭಿಪ್ರಾಯವನ್ನು, ಮನಸ್ಸು ಮತ್ತು ಮಾತುಗಳಿಂದ ಶಕ್ತಿಯಿದ್ದಷ್ಟು ಆವೃತ್ತಿಯನ್ನು ಅನುಗಾಲ ಮಾಡುವರೋ, ಅವರೆಲ್ಲರೂ ಶ್ರೀಹರಿಯ ಪರಮಾನುಗ್ರಹದಿಂದ ಇಂತಹ ಮೋಕ್ಷವನ್ನು ಹೊಂದುವರು. ಮಧ್ವಶಾಸ್ತ್ರವೇ ಮುಕ್ತಿಗೆ ಸಾಧನ.

## ದ್ವಾದಶ ಸರ್ಗ

**ತತ್ರಾನಂತಸ್ವಾಂತವೇದಾಂತಿಸಿಂಹೇ ಮುಖ್ಯವ್ಯಾಖ್ಯಾನಿಸ್ವನೇ ಜೃಂಭಮಾಣೇ ।**
**ಸದ್ಯೋ ಮಾದ್ಯದ್ವಾದಿದಂತೀಂದ್ರಭೀಮೇ ಭೇಜೇಕ್ಷೋಭೋ ಮಾಯಿಗೋಮಾಯುಯೂಥೈಃ ॥**

### ಮಾಯಾವಾದಿಗಳ ವಿಷಾದ –

- ಪಾಪಿಗಳೂ, ಕ್ರೂರಿಗಳೂ, ಆದ ಆ ಮಾಯಾವಾದಿಗಳು ಭುವನಭೂಷಣರಾದ ಶ್ರೀಮಧ್ವಾಚಾರ್ಯರ ಮೇಲೆ ಅಸೂಯೆಯಿಂದ ಕೂಡಿದ, ಚೋಳದೇಶದವನಾದ ಪದ್ಮತೀರ್ಥ ಮತ್ತು ಪುಂಡರೀಕಪುರಿ ಎಂಬುವರ ಬಳಿಯಲ್ಲಿ ಸೇರಿ, ಹಿಂದೆ ಅನೇಕ ಮೂರ್ಖ ಜನರು ದುರ್ಯೋಧನಾದಿಗಳ ಬಳಿಯಲ್ಲಿ ಹೇಗೋ ಹಾಗೆ ಆಲೋಚನೆ ಮಾಡತೊಡಗಿದರು. ಮಾಯಾವಾದಿಗಳು ವಿಶೇಷ ಸಭೆಯನ್ನು ನಡೆಸಿ ಪೂರ್ವಾಪರ ಚರ್ಚೆ ಮಾಡಿದರು.

• ಪಾಪಿಗಳಿಗೆ ಆಶ್ರಯನಾದ ಪದ್ಮತೀರ್ಥನಿಗೆ ಸಜ್ಜನರ ವಿಷಯದಲ್ಲಿ ಕೋಪ ಕಿಚ್ಚುಗಳನ್ನು ಸ್ಥಿರಪಡಿಸಲೆಂದು "ಜಗತ್ತೆಲ್ಲಾ ಮಾಯಾಕಲ್ಪಿತವೆಂದು ಪ್ರತಿಪಾದಿಸುವ ಪುರಾತನವಾದ, ಅಪೂರ್ವವಾದ, ದುರ್ಘಟತ್ವವೆಂಬ ಅಲಂಕಾರವನ್ನು ಹೊಂದಿದ ಮಾಯಾವಾದ್ ಪ್ರವರ್ತಕರ ಶಾಸ್ತ್ರವು, ಅತೀ ಆಶ್ಚರ್ಯಕರವಾದ ರೀತಿಯಲ್ಲಿ ಬ್ರಹ್ಮನೆಂಬ ವಸ್ತುವನ್ನು ಏಕವೆಂಬುದಾಗಿ ಹೇಳುತ್ತಿರುವುದು ಮತ್ತು ಪುರಾತನ ವಾಕ್ಯಗಳಿಂದಲೂ ಸಹ ಅದು ಅವಾಚ್ಯವೆಂಬುದಾಗಿ ಪ್ರತಿಪಾದಿಸುತ್ತಿರುವುದು.

• ಜಗತ್ಸತ್ಯತ್ವ ವ್ಯಾವಹಾರಿಕ, ಅಜ್ಞಾನಾವಸ್ಥೆಯಲ್ಲಿ ಸತ್ಯವೆಂಬುದಾಗಿ ತೋರುವ ಜಗತ್ತನ್ನು ವ್ಯಾವಹಾರಿಕ ಸತ್ಯವೆಂಬುದಾಗಿಯೂ, ಜ್ಞಾನವು ದಗ್ಧವಸ್ತ್ರದಂತೆ (ಸುಟ್ಟಬಟ್ಟೆಯಂತೆ) ತೋರುವುದು, ತಪ್ತಲೋಹಾತ್ತವಾರ್ವತ್ (ಕಾದ ಲೋಹದ ಮೇಲೆ ಬಿದ್ದ ನೀರು ಹೇಗೆ ಲೋಹದಿಂದ ಪ್ರತ್ಯೇಕವಾಗಿ ಕಾಣುವುದಿಲ್ಲವೋ ಹಾಗೆ) ಜೀವ ಜಡಾತ್ಮಕವಾದ ಪ್ರಪಂಚಮಿಥ್ಯಾತ್ವರೂಪ, ಬ್ರಹ್ಮಾತ್ಮೈಕಜ್ಞಾನವು ಪರಿಪಕ್ವವಾದಾಗ ಬ್ರಹ್ಮ ವ್ಯತಿರಿಕ್ತವಾದ ಯಾವುದೂ ತೋರದು ಎಂಬುದಾಗಿಯೂ ಹೇಳುತ್ತಾನೆ.

• ತತ್ತ್ವವಾದದಿಂದ ಕಂಗೆಟ್ಟ ಮಾಯಾವಾದ – ಮಾಯಾವಾದವೆಂಬ ದುರ್ಗಮವಾದ ವನದಿಂದ ಭಾಟ್ಟ-ಮೀಮಾಂಸಕರು, ಪ್ರಾಭಾಕರರು, ಬೌದ್ಧರೇ ಮೊದಲಾದವರು ಭಯಗೊಂಡರು. ಅಂತಹ ಮಾಯವಾದವನ್ನು ಶ್ರೀಮದಾಚಾರ್ಯರು ತಮ್ಮ ತತ್ತ್ವವಾದದಿಂದ ಕಂಗೆಡಿಸಿದ್ದಾರೆ. ಮಾಯಾವಾದ ಮತದ ಬುಡವನ್ನೇ ಕತ್ತರಿಸುತ್ತಾ ನಡೆದರು ಆಚಾರ್ಯರು. ಮಾಯಾವಾದಿಗಳಲ್ಲೇ ಕೆಲವರು "ಶ್ರೀಮದಾಚಾರ್ಯರ ಬ್ರಹ್ಮಸೂತ್ರಭಾಷ್ಯವು ಸರಳವಾದುದು, ಪ್ರಬಲವಾದ ಪ್ರಮಾಣಗಳಿಂದ ಕೂಡಿರುವುದು" ಎಂದರು.

• ಮಾಯಾವಾದಿಗಳು ಕೈಗೊಂಡ ಮಧ್ವದ್ರೋಹ – ಪದ್ಮತೀರ್ಥಾದಿಗಳು ಒಂದು ಉಪಾಯವನ್ನು ಮಾಡಿ, ಶ್ರೀಮದಾಚಾರ್ಯರು ಎಲ್ಲೆಲ್ಲಿ ಹೋಗುತ್ತಾರೋ ಅಲ್ಲಿಯೇ ಅವರನ್ನು ತಡೆಯುವುದು, ಮುಂದೆ ಹೋಗುವುದಕ್ಕೆ ಬಿಡದಿರುವುದು ಅವರ ಯೋಚನೆ. ಕುಮಾರ್ಗದಿಂದ ಮಧ್ವರನ್ನು ಜಯಿಸುವ ಯೋಜನೆ ಮಾಡಿದರು. ಶ್ರೀಮದಾಚಾರ್ಯರ ಭಾಷ್ಯೆಯಲ್ಲಿ ಅಪಪ್ರಚಾರ ಮಾಡುವುದು, ಇಲ್ಲದಿರುವ ದೋಷಗಳನ್ನು, ಬಣ್ಣಿಸಿ ಹೇಳುವುದು, ಮಧ್ವರು ಯಾವುದೇ ಗ್ರಾಮಕ್ಕೆ ಬರುವುದನ್ನು ತಡೆಯಬೇಕು, ಅವರ ಮಾನ ಕಳೆಯಬೇಕು ಎಂಬುದು ಅವರ ಯೋಜನೆ.

• **ಪುಂಡರೀಕಪುರಿಯ ನೇತೃತ್ವದಲ್ಲಿ ಉಡುಪಿಯಲ್ಲಿ ವಾದಸಿದ್ಧತೆ.,** ಆಚಾರ್ಯರನ್ನು ವಾದಕ್ಕೆ ಆಹ್ವಾನ. ಶ್ರೀಮದಾಚಾರ್ಯರಿಂದ ಆಹ್ವಾನಸ್ವೀಕಾರ. ಪುಂಡರೀಕಪುರಿಯೊಂದಿಗ ವಾದ

ನಡೆದು ಅವನ ವಾದವನ್ನು ವೇದಾದಿ ಪ್ರಬಲ ಪ್ರಮಣಗಳಿಂದ ನಿರಾಕರಿಸಿ ತಮ್ಮ ಸಿದ್ಧಾಂತವನ್ನು ಸಮರ್ಥನೆ ಮಾಡಿದಾಗ ಅವನು ಪರಾಜಿತನಾದ. ಅವರ ವೇದವ್ಯಾಖ್ಯಾನ ಶೈಲಿ ವೇದವ್ಯಾಸರನ್ನು ಜ್ಞಾಪಿಸುತಿತ್ತು. ಅವರ ವೇದೋಚ್ಚಾರಣೆ, ವೇದವ್ಯಾಖ್ಯಾನ, ಎಲ್ಲ ವಿದ್ವಾಂಸರ ಗಮನ ಸೆಳೆಯಿತು.

- ಪುಂಡರೀಕಪುರಿ ಐತರೇಯಶ್ರುತಿಯ ಸೂಕ್ತವಾದ **"ಅಗ್ನಿಮೀಳೇ ಪುರೋಹಿತಂ"** ಎಂಬ ಅಗ್ನಿಸೂಕ್ತದಲ್ಲಿ, **"ಅಗ್ನಿನಾ ರಯಿಮಶ್ನವತ್"** ಎಂಬ ಅರ್ಥ ಋಕ್ಕಿನಲ್ಲಿನ "ಅಗ್ನಿನಾ" ಎಂಬ ಶಬ್ದದ ಅನಂತರ ಇರುವ "ರಯಿ" ಎಂಬ ಶಬ್ದವನ್ನು, "ಅಗ್ನಿ–ನಾರ" ಎಂದು ತಪ್ಪಾಗಿ ಉಚ್ಚರಿಸಿದ. ಎಲ್ಲರ ಎದುರಿಗೆ "ಶಾರ್ದೂಲ" ಎನ್ನಿಸಿದ.

- ಇದೇ ವೇಳೆಗೆ "ಪದ್ಮತೀರ್ಥ" ಎಂಬವನು ಶ್ರೀಮದಾಚಾರ್ಯರ ಗ್ರಂಥಗಳನ್ನು ಅಪಹರಿಸಿದನು. ಶ್ರೀಮದಾಚಾರ್ಯರು ವೇಗದಿಂದ ಬಹುಯೋಜನ ದೂರಕ್ರಮಿಸಿ, ಏಕವಾಟವೆಂಬ ಗ್ರಾಮದಲ್ಲಿದ್ದ ಪದ್ಮತೀರ್ಥನ ಬಳಿಗೆ ಸಿಂಹದಂತೆ ಬಂದು, ತಮ್ಮ ವಾದದಿಂದ ಸೋಲಿಸಿ ದುಷ್ಟಬುದ್ಧಿಯ ಪದ್ಮತೀರ್ಥನನ್ನು ಕ್ಷಮಿಸದೆ ಶಿಕ್ಷಿಸಲು ನಿರ್ಧರಿಸಿದರು.

- ವಿಶ್ವದೆಲ್ಲೆಡೆ ಹರಡಿದ್ದ ಕತ್ತಲೆ (ಅಜ್ಞಾನ) ಸಹ ನಾಶವಾಗಿದೆ ಸೂರ್ಯನಂತೆ ಕಂಗೊಳಿಸಿದ ಪೂರ್ಣಪ್ರಜ್ಞರಿಂದ.

- **ಇತಿ ನಿಗದತಿ ಮಾಯಾವಾದಿವಿದ್ವೇಷವೇಷೇ**
**ಶುಭಜನನಿಕರೇ ಸ್ವಾರಾಮತೋಽಸ್ಮಾತ್ ಪ್ರಯಾತ: ।**
**ನ್ಯವಸದಮರಧಿಷ್ಣ್ಯೇ ಪ್ರಗ್ರ್ಯವಾಟಾಭಿಧಾನೇ**
**ಗುರುಮತಿರಭಿನಂದನ್ ದೇವಮಾನಂದಮೂರ್ತಿಮ್ ॥**

- ಶ್ರೀಮದಾಚಾರ್ಯರು ಮಾಯಾವಾದಿಗಳ ಕಾಟದಿಂದ ಸಜ್ಜನರನ್ನು ಕಾಪಾಡಿ, "ಕೊಡಪಾಡಿ (ಪ್ರಾಗ್ರ್ಯವಾಟ) ಎಂಬ ಹೆಸರಿನ ದೇವಾಲಯದಲ್ಲಿ ಆನಂದರೂಪಿಯಾದ ಜನಾರ್ಧನ ರೂಪದ ಶ್ರೀಹರಿಯನ್ನು ಅಭಿನಂದಿಸುತ್ತಾ ಚಾತುರ್ಮಾಸ್ಯವನ್ನು ಆಚರಿಸಿದರು.

## ತ್ರಯೋದಶ ಸರ್ಗ

**ಪೃಥುದರ್ಶನಮುತ್ಥಿತಂ ಕೃತಾರ್ಥಂ ಪೃಥಿವೀಭೃತ್ಪ್ರಣಾತಿಂ ಗೃಹೀತವಂತಮ್ ।**
**ನಿಜಶಿಷ್ಯಮುದೇSಥ ಸಹ್ಯಮಾಪ್ತಂ ಪುರುಷಃ ಕಶ್ಚಿದುಪಾಯಯೌ ಕದಾಚಿತ್ ॥**

ಸಹ್ಯಪ್ರಾಂತ್ಯದಲ್ಲಿ ಶ್ರೀಮದಾಚಾರ್ಯರು –

ಚಾತುರ್ಮಾಸ್ಯ ಪೂರೈಸಿ, ಪದ್ಮತೀರ್ಥನಿಂದ ಅಪಹೃತ ಗ್ರಂಥಗಳನ್ನು ಮರಳಿ ಪಡೆದ ಶ್ರೀಮದಾಚಾರ್ಯರು, ಸಹ್ಯ ಪ್ರಾಂತ್ಯಕ್ಕೆ ಆಗಮಿಸಿದಾಗ, ಜಯಸಿಂಹರಾಜನು ಆಮಂತ್ರಣಕ್ಕಾಗಿ ತನ್ನ ಭೃತ್ಯನೊಬ್ಬನನ್ನು ಕಳುಹಿಸಿದನು.

ಗಂಗಾಪ್ರವಾಹದಂತೆ ಸಂಚರಿಸತೊಡಗಿದ ಶ್ರೀಮದಾಚಾರ್ಯರು ಮಾಯಾವಾದಿಗಳಿಗೆ ವಶರಾಗಿದ್ದ ದುರ್ಜನರನ್ನು ಕ್ಷುದ್ರಪರ್ವತಗಳನ್ನೋ ಎಂಬಂತೆ ತೊರೆದರು. ಅವರ ಪ್ರಾಯಾಣಕಾಲದಲ್ಲಿ ನಾನಾ ಬಗೆಯ ಜನರು ಕ್ಲೇಶನಿವೃತ್ತಿಯನ್ನು ಬಯಸಿ ಧಾವಿಸುತ್ತಿದ್ದರು.

ಶ್ರೀಮದಾಚಾರ್ಯರು "ಕಬೇನಾಡು" ಎಂಬ ಪ್ರದೇಶದಲ್ಲಿ ತಲುಪಿ, "ಶ್ರೀಮದನೇಶ್ವರ" ಎಂಬ ದೇವರ ಮಂದಿರವನ್ನು ಪ್ರವೇಶಿಸಿದರು.

## ಶ್ರೀಮದಾಚಾರ್ಯರ ಸಂಚಾರದ ವ್ಯವಸ್ಥೆ

**ದೇವರಪೆಟ್ಟಿಗೆಯನ್ನು ಹೊತ್ತ ಶಿಷ್ಯ –**

ಶ್ರೀಮದಾಚಾರ್ಯರ ಶಿಷ್ಯರಾದ ಒಬ್ಬ ಯತಿಯು ಉಸಿರು ಮತ್ತು ಮಾತನ್ನು ನಿಯಂತ್ರಿಸಿಕೊಂಡು, ಹಸ್ತಗಳನ್ನು ಚೆನ್ನಾಗಿ ತೊಳೆದುಕೊಂಡು, ಸಾಲಿಗ್ರಾಮಶಿಲೆಗಳಿಂದ ತುಂಬಿದ, ಗುಣಕುಂಡಲಗಳಿಂದ ಅಲಂಕೃತವಾದ, ಹಗ್ಗದಿಂದ ಕಟ್ಟಲ್ಪಟ್ಟ, ವಸ್ತ್ರದಿಂದ ಆಚ್ಛಾದಿತವಾದ ಗುರುಗಳಾದ ಶ್ರೀಮಧ್ವಾಚಾರ್ಯರ ದೇವರ ಪೆಟ್ಟಿಗೆಯನ್ನು ತಲೆಯಮೇಲೆ ಹೊತ್ತರು.

ಕಮಂಡಲಗಳು, ಆಚಾರ್ಯರ ಗ್ರಂಥಗಳು, ಗಿಂಡಿ, ಮೊದಲಾದವನ್ನು ಯುವಶಿಷ್ಯರ ಗುಂಪುಹೊತ್ತಿತ್ತು.

ಒಬ್ಬ ಶಿಷ್ಯ ಶ್ರೀಮದಾಚಾರ್ಯರ ಮೇಲೆ ಶ್ವೇತಛತ್ರವೊಂದನ್ನು ಹಿಡಿದಾಗ, ಅವರಿಗೆ ಉದಿಸುವ ಸೂರ್ಯನ ಮೇಲೆ ಕಂಗೊಳಿಸುವ ಪೂರ್ಣಚಂದ್ರನ ಕಾಂತಿ ಉಂಟಾಯಿತು.

ಶ್ರೀಮದಾಚಾರ್ಯರನ್ನು, ಬಹುಸಂಖ್ಯಾತರಾದ ಯತಿಗಳು, ಗೃಹಸ್ಥರು, ಸನ್ಯಾಸಿಗಳು, ಹಿಂಬಾಲಿಸಿ ಬರುತ್ತಿದ್ದರು. ಇಡೀ ಪರಿವಾದದವರು ಶ್ರೀಹರಿಸ್ತೋತ್ರಗಳನ್ನು ಮಧುರಸ್ವರದಿಂದ ಹಾಡುತ್ತಾ, ನರ್ತಿಸುತ್ತ, ಶ್ರೀಮದಾಚಾರ್ಯರ ಅನುಗ್ರಹದಿಂದ ಅನಾಯಾಸವಾಗಿ ಪ್ರಯಾಣಿಸುತ್ತಿದ್ದರು.

ಶ್ರೀಮದನೇಶ್ವರ ದೇವಾಲಯದ ಪ್ರದೇಶದ ಬಳಿಯಲ್ಲಿ ಗುರುಗಳಾದ ಶ್ರೀಮಧ್ವಾಚಾರ್ಯರು ಆಗಮಿಸಿರುವುದನ್ನು ತಿಳಿದು, ಜಯಸಿಂಹರಾಜನು, ಅವರನ್ನು ಎದಿರುಗೊಳ್ಳಲು ತ್ವರೆಯಿಂದ

ಪಾದಚಾರಿಯಾಗಿಯೇ ಧಾವಿಸಿದ. ಆಚಾರ್ಯರು ಜಯಸಿಂಹರಾಜನ ಹಿಂಬಾಲಿಸಿ ವಿಷ್ಣುಮಂಗಲ ದೇವಾಲಯದ ಬಳಿಗೆ ಬಂದರು.

ಸಂಚಾರಕಾಲದ ಶ್ರೀಮಧ್ವರ ನಖ, ಮುಂಗಾಲು, ಪಾದ, ಜಂಘೆ, ತೊಡೆ, ಕಟಿ, ಉದರ, ಕಂಠ, ಹಣೆಗಳನ್ನು , ವಕ್ಷಸ್ಥಲ, ಭುಜ, ಬಾಹು, ಹಸ್ತಗಳು, ಮುಖಕಾಂತಿ, ನೋಟ, ಕರ್ಣ, ಕಪೋಲ, ಭ್ರೂವಿಲಾಸ, ಮಸ್ತಕವನ್ನು ವಿಸ್ತಾರವಾಗಿ ನಾರಾಯಣಪಂಡಿತಾಚಾರ್ಯರು ವಿವರಿಸಿದ್ದಾರೆ. ಅವರ ಸಕಲಾವಯವಳನ್ನು ಸ್ಫುಟವಾಗಿ ಅಳೆದುನೋಡಿದ ಜನರು, ಭಗವತ್ಪ್ರತಿಮೆಯಂತೆ ಭಾವಿಸಿದರು.

**ಸಭೆಯಲ್ಲಿ ಶ್ರೀಮದಾಚಾರ್ಯರ ಪ್ರವಚನ** – ಸಭೆಗೆ ಬಂದಿದ್ದ ಸಕಲ ಸದ್ಭಕ್ತರಿಗೂ ಕೂಡ ಶ್ರೀಮಧ್ವಾಚಾರ್ಯರು ಬಹುಜನರ ಮಧ್ಯದಲ್ಲಿದ್ದರೂ ತಮ್ಮ ವಕ್ಷ:ಸ್ಥಲವನ್ನು ಆರಂಭಿಸಿ ಚೆನ್ನಾಗಿ ಕಾಣುವಂತೆ ಅವರೆಲ್ಲರಿಗೂ ಕಾಣಿಸಿಕೊಂಡರು. ಜಯಸಿಂಹರಾಜನಿಗೆ ಶ್ರೀಮಧ್ವಾಚಾರ್ಯರು, ನಕ್ಷತ್ರಗಳ ಮಧ್ಯೆ ಮಂಗಳನೊಂದಿಗೆ ಹೊಳೆಯುವ ಪೂರ್ಣಚಂದ್ರನಂತೆ ಕಂಗೊಳಿಸಿದರು.

ಹೃಷೀಕೇಶತೀರ್ಥರು ಶ್ರೀಮದಾಚಾರ್ಯರ ಭಾಗವತ ಪ್ರವಚನಕ್ಕೆ ವಾಚನ ಮಾಡುತ್ತಿದ್ದರೆ, ಆಚಾರ್ಯರು ಸಂಸಾರವನ್ನೇ ಪರಿಹರಿಸುವಂತಹ ಚಕ್ರಪಾಣಿಯಾದ ಶ್ರೀಕೃಷ್ಣನ ಕಥೆಯನು ವರ್ಣಿಸತೊಡಗಿದರು. ಅವರ ಪ್ರವಚನವನ್ನು ಆಲಿಸುತ್ತಿದ್ದ ಪಂಡಿತ ಪಾಮರರೆಲ್ಲರೂ ಆನಂದಾಮೃತಸಾಗರದಲ್ಲಿ ಮುಳುಗಿದ್ದರು.

## ತ್ರಿವಿಕ್ರಮ ಪಂಡಿತಾಚಾರ್ಯರು –

ತ್ರಿವಿಕ್ರಮಪಂಡಿತರು ಆಂಗೀರಸ ಗೋತ್ರದ ಲಿಕುಚ ವಂಶದಲ್ಲಿ ಜನಿಸಿದ “ಸುಬ್ರಹ್ಮಣ್ಯ” ಒಬ್ಬ ಪಂಡಿತರ ಮಗ. ತ್ರಿವಿಕ್ರಮರು ಹರಿ–ಹರರ ಅನುಗ್ರಹದಿಂದ ಜನಿಸಿದವರು.

ತ್ರಿವಿಕ್ರಮಪಂಡಿತರು ತಮ್ಮ ತೊದಲ್ನುಡಿಯಲ್ಲೇ ನಿರ್ದುಷ್ಟವಾದ ಶ್ಲೋಕಗಳನ್ನು ರಚಿಸಬಲ್ಲ ಕವಿಯೆನ್ನಿಸಿದ್ದರು. ಇವರು “ಉಷಾಹರಣ”ವೆಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾರೆ. ಬಾಲ್ಯದಿಂದಲೇ ಮಾಯಾವಾದಾಧ್ಯಯನ ಮಾಡಿದರು. ಒಂದುಲಕ್ಷ ಇಪ್ಪತ್ತೈದು ಸಾವಿರ ಗ್ರಂಥಗಳನ್ನು ಹೊಂದಿದ

ಮಾಯಾವಾದ ಶಾಸ್ತ್ರದಲ್ಲಿ ತುಂಬಾ ನಿಪುಣರಾದ, ತ್ರಿವಿಕ್ರಮರ ತಮ್ಮ ತಂದೆ ಸುಬ್ರಹ್ಮಣ್ಯಪಂಡಿತರು “ಗುಣಪೂರ್ಣನಾದ ಭಗವಂತನ ವಿಷಯದಲ್ಲಿ ನಿರ್ಗುಣೋಪಾಸನೆಯು ಎಂದೂ ಸುಖಕ್ಕೆ ಸಾಧನವಾಗದು. ಆದ್ದರಿಂದ ಗುಣಯುಕ್ತವಾದ ಮುಕ್ತಿಗಾಗಿ ಕ್ರೀಡಾದಿಗುಣಗಳಿಂದ ತುಂಬಿದ ಶ್ರೀವಾಸುದೇವನನ್ನೇ ಸೇವಿಸು” ಎಂದರು.

**ವಿಚಾರ–ಮಂಥನ ತ್ರಿವಿಕ್ರಮರಿಂದ** – ತಂದೆಯ ಮಾತಿಂದ ಸ್ವಲ್ಪ ಗೊಂದಲಗೊಂಡರೂ, ತ್ರಿವಿಕ್ರಮರು ಶಾಸ್ತ್ರರಹಸ್ಯವನ್ನು ಚೆನ್ನಾಗಿ ಆಲೋಚಿಸಿಯೇ ಸಂಸಾರಸಾಗರದ ದಡವನ್ನು ಸೇರಬಯಸಿದವರಾಗಿ, ಇತರ ಜನರಿಂದ “ನಿರ್ಗುಣೋಪಾಸನೆ”ಯನ್ನು ಶ್ರವಣ ಮಾಡಿದರು. ವೇದವ್ಯಾಸರ ಸೂತ್ರಾರ್ಥಕ್ಕೆ ತಾಳೆ ಹೊಂದುವ ಒಂದು ಭಾಷ್ಯವನ್ನೂ ಕಾಣಲಾರೆವು. ಬ್ರಹ್ಮ ನಿರಾಕಾರನಲ್ಲ, ನಿರ್ಗುಣೋಪಾಸನೆಯಿಂದ ಸತ್ಫಲ ಲಭಿಸದು. ನಾವು ಸದಾಚಾರದಿಂದಲೇ ಪರಮಾತ್ಮನನ್ನು ತಿಳಿಯಲು ಸಾಧನ. ಈರೀತಿಯಾಗಿ ವಿವೇಕದಿಂದ ನಿಶ್ಚಯಿಸಿಕೊಂಡು ವೇದಾದಿಗಳ ವಿಚಾರವನ್ನು ಮಾಡಲು ಉಪಕ್ರಮಿಸಿದರು. ಆ ವೇಳೆಗೆ ಪೂರ್ಣಪ್ರಜ್ಞರ ಕೀರ್ತಿ ಅವರ ಕಿವಿಗೆ ಬಿದ್ದಿತು.

ಮಾಯಾವಾದಿಗಳು ತ್ರಿವಿಕ್ರಮರನ್ನು ಶ್ರೀಪೂರ್ಣಪ್ರಜ್ಞರೊಂದಿಗೆ ವಾದ ಮಾಡಿ ಸೋಲಿಸಲು ಕೋರಿದರು. ವಿವೇಕಿಗಳಾದ ತ್ರಿವಿಕ್ರಮರು ಅನೇಕ ರಾತ್ರಿಗಳಲ್ಲಿ ಇತರರಿಗೆ ತಿಳಿಯದಂತೆ (ಆಚಾರ್ಯರ ಗ್ರಂಥಗಳನ್ನು ಶಂಕರಪಂಡಿತರ ಮನುಯಲ್ಲಿ ಇಡಲಾಗಿತ್ತು. ಶಂಕರಪಂಡಿತರು ತ್ರಿವಿಕ್ರಮರ ಸಹೋದರರು. ಶಂಕರಪಂಡಿತರು ಆ ವೇಳೆಗಾಗಲೇ ಶ್ರೀಮಧ್ವಾಚಾರ್ಯರ ಶಿಷ್ಯರಾಗಿದ್ದರು). ಶ್ರೀಪೂರ್ಣಪ್ರಜ್ಞರ ಮನೋಹರವಾದ ಶಾಸ್ತ್ರದ ಸಾರವನ್ನು ಅವಲೋಕನ ಮಾಡುತ್ತ ಮನಸ್ಸಿನಲ್ಲಿ ಅಪಾರವಾದ ವಿಸ್ಮಯವನ್ನು ಹೊಂದಿದರು. ಆಚಾರ್ಯರ ಗ್ರಂಥಗಳನ್ನೆಲ್ಲಾ ವಿಮರ್ಶೆ ಮಾಡಿ, ಮಧ್ವಮತವೇ ಸರಿ ಎಂದು ಕಂಡುಬಂದರೂ ತಕ್ಷಣ ಸ್ವೀಕರಿಸಲಿಲ್ಲ.

**ತಂ ವಿಷ್ಣುಮಂಗಲಗತಂ ಬಹುಲಪ್ರಬೋಧಂ**
**ಪ್ರಾಪ್ಯಾಭ್ಯವಂದತ ತದಾಽಯುಗವಿಕ್ರಮಾರ್ಯ: ।**
**ಆನಂದದಂ ಸ ಚರುತಾನನಹಾಸಲಕ್ಷ್ಮ್ಯಾ**
**ತತ್ತ್ವಂ ಪ್ರವೇತ್ತುಮಮರೇಂದ್ರ ಇವಬ್ಜಯೋನಿಮ್ ॥**

ವಿಷ್ಣುಮಂಗಲದಲ್ಲಿದ್ದ ಶ್ರೀಮದಾಚಾರ್ಯರ ಬಳಿಗೆ ತ್ರಿವಿಕ್ರಮಪಂಡಿತರು ಬಂದರು.

## ಚತುರ್ದಶ ಸರ್ಗ

**ಪರಿವೃಡಘನಸಂಘೇ ರಾಜಸಿಂಹೋರ್ಜಶಕ್ತ್ಯಾ**

**ತ್ಯಜತಿ ಮಲಿನಭಾವಂ ನೀರಸತ್ತ್ವನಿಕಾಮಮ್।**
**ಸ್ಫುಟಮುದಯತಿ ತೇಜಸ್ಸ್ವಶ್ಯಜ್ಜ್ವಲೇ ಮಧ್ವಭಾನೌ**
**ಸುಜನಜಲಜಕಾಂತ್ಯೈ ವಿಶ್ವಮಾಸೀನ್ಮನೋಜ್ಞಮ್ ॥**

ಪದ್ಮತೀರ್ಥಾದಿ ಶತ್ರುಗಳು ಅಪಹರಿಸಿದ್ದ ಗ್ರಂಥಸಮೂಹವನ್ನು ಶ್ರೀಮದಾಚಾರ್ಯರ ಅಪ್ಪಣೆಯಂತೆ ಶಂಕರಪಂಡಿತಾಚಾರ್ಯರಿಂದ ಜಯಸಿಂಹರಾಜನ ಮೂಲಕವಾಗಿಯೇ ಸ್ವೀಕರಿಸಿದರು.

ಕವಿಕುಲತಿಲಕರಾದ ತ್ರಿವಿಕ್ರಮಪಂಡಿತರು ತಮ್ಮ ಸೋದರ ಶಂಕರಪಂಡಿತರ ವಿಜಯದಿಂದ ಸಂತುಷ್ಟರಾಗಿ, ವಿನೀತರಾದ ಗ್ರಾಮಾಧಿಪತಿಗಳು, ಗ್ರಾಮಸ್ಥರಾದ ಬ್ರಾಹ್ಮಣರೇ ಮೊದಲಾದ ಜನಗಳಿಂದ ಸುತ್ತುವರಿಯಲ್ಪಟ್ಟಿದ್ದ, ಶ್ರೀಪೂರ್ಣಪ್ರಜ್ಞಾಚಾರ್ಯರ ಚರಣಗಳ ಸನ್ನಿಧಿಯಲ್ಲಿ ವಿನಯದಿಂದ ಕುಳಿತಿದ್ದ ಜಯಸಿಂಹರಾಜನನ್ನು ಆಶೀರ್ವಚನದಿಂದ ಸಂತೋಷಪಡಿಸಿದರು.

## ಆಚಾರ್ಯರ ದಿನಚರಿ –

ಮಧ್ವಾಚಾರ್ಯರು ಬೆಳಿಗ್ಗೆ ಅರುಣೋದಯಕಾಲದಲ್ಲೇ ಸ್ನಾನಾದಿ ಆಹ್ನಿಕ ಮುಗಿಸಿ, ಪರಮಾತ್ಮನ ಧ್ಯಾನದಲ್ಲಿ ನಿರತರಾಗುತ್ತಿದ್ದರು. ನಿರ್ಮಾಲ್ಯ ವಿಸರ್ಜನೆ ಮಾಡುತ್ತಿದ್ದರು. ಅವರು ನಿರ್ಮಾಲ್ಯ ವಿಸರ್ಜನೆ ಮಾಡಿದ ಪುಷ್ಪಗಳಲ್ಲಿ ಸುರಿದ ಅಮೃತವನ್ನು ನೋಡಿದಾಗ ಶಿಷ್ಯರು “ಘೃತ”ವೆಂಬುದಾಗಿ ತಿಳಿದರು. ಆದರೆ ನಂತರ “ಅಮೃತ”ವೆಂದು ಸರಿಯಾಗಿ ತಿಳಿದರು.

ಪ್ರಾತ:ಕಾಲದಲ್ಲಿ ಪಾಠಪ್ರವಚನಗಳನ್ನು ಮಾಡುತ್ತಿದ್ದರು. ಸಭೆಗಳಲ್ಲಿ ಶ್ರೀಪೂರ್ಣಪ್ರಜ್ಞರು ಗಗನದಲ್ಲಿ ಸೂರ್ಯನಂತೆ ಶೋಭಿಸಿದರು. ಶ್ರೀಮಧ್ವಾಚಾರ್ಯರು ಸಭೆಯನಂತರ, ಸ್ನಾನವನ್ನು ಸರೋವರದಲ್ಲಿ ಮಾಡಿ, ಚಕ್ರಾಂಕಿತ (ಸಾಲಿಗ್ರಾಮ), ಶಿಲೆಗಳಿಗೆ ಶಂಖದಿಂದ ಅಭಿಷೇಕ, ನಂತರ ನಿರ್ಮಾಲ್ಯತೀರ್ಥಪ್ರಾಶನ, ಊರ್ಧ್ವಪುಂಡ್ರಧಾರಣ ಮಾಡುತ್ತಿದ್ದರು.

ಈವೇಳೆಗೆ ಒಬ್ಬ ಯತಿಯು ತನ್ನ ಉಸಿರು ತಾಗೀತು ಎಂಬ ಭಯದಿಂದ ಒಂದು ಪಕ್ಕದಲ್ಲಿ ಹಿಡಿದುಕೊಂಡು ತಾನೂ ರುಚಿನೋಡದೆ ಇದ್ದ, ತಂಪಾದ ಶುದ್ಧಜಲವನ್ನು ಕಮಂಡಲುವಿನಲ್ಲಿ ಅಲ್ಲಿಗೆ ತಂದರು. ಕಲಶೋಧಕದ ಪೂಜೆ ನಂತರ ಶಾಲಗ್ರಾಮಾದಿ ಪ್ರತಿಮೆಗಳನ್ನು ಪೂಜಿಸಿದ ಶ್ರೀಮಧ್ವಾಚಾರ್ಯರು, ತುಲಸೀದಳದಿಂದಲೂ, ಸಕಲ ಪುಷ್ಪರಾಶಿಗಳಿಂದಲೂ ಪೂಜಿಸಿದರು, ಷೋಡಶೋಪಚಾರಪೂಜಾ, ಗಂಧಾದಿಧಾರಣ, ಮಾಡಿದ ನಂತರ ಹರಿಪ್ರಸಾದ ಸ್ವೀಕಾರ.

ಮಧ್ಯಾಹ್ನ ಮತ್ತೆ ಪಾಠಪ್ರವಚನ, ಸಂಜೆ ಮತ್ತೆಆಹ್ನಿಕ, ಅಗ್ನಿಹೋತ್ರ ಅವರ ದಿನಚರಿಯಾಗಿತ್ತು.

# ಪಂಚದಶ ಸರ್ಗ

**ಭೂಯೋಬೋಧಸ್ತತೋ ಭೂಯೋ ವ್ಯಾಚಖ್ಯೌ ಭಾಷ್ಯಮದ್ಭುತಮ್ ।**
**ಗ್ರಾಮೇ ಗ್ರಾಮೀಣಸಾಮಾನ್ಯೇ ವಸಂಸ್ತತ್ರಾಮರಾಲಯೇ ॥**

- ಅಮರಾಲಯದಲ್ಲಿ ಶ್ರೀಮಧ್ವಾಚಾರ್ಯರಿಂದ ಅಪೂರ್ವ ಭಾಷ್ಯೋಪನ್ಯಾಸ –
- ತ್ರಿವಿಕ್ರಮಪಂಡಿತರಿಂದ ಉಪನ್ಯಾಸ ಶ್ರವಣ
- ಶ್ರೀಮದಾಚಾರ್ಯರ ಪ್ರವಚನದಲ್ಲಿ ನಾನವಿಧವಾದ ಸ್ಮೃತಿ (ಪೌರುಷೇಯಗ್ರಂಥ)ಗಳಿಂದ ಯುಕ್ತವಾಗಿತ್ತು, ಅವರ ಪ್ರವಚನ ಸಕಲಜನರನ್ನೂ ಪಾವನಗೊಳಿಸುವಂತಹ “ಗಂಗಾನದಿ”ಯಂತೆ ಇದ್ದಿತು.
- ಶ್ರೀಮದಾಚಾರ್ಯರ ಉಪನ್ಯಾಸದ ಸಾರ –
  - ಶ್ರೀಮನ್ನಾರಾಯಣನು ಅನಂತಗುಣಪರಿಪೂರ್ಣ – ಬ್ರಹ್ಮ ಎಂಬ ಹೆಸರಿನವನು. ವೇದ ಪ್ರತಿಪಾದಿತ, ಜಗತ್ಕರ್ತಾ.
  - ವಿಷ್ಣುವಿನ ಅನಂತಗುಣಪೂರ್ಣತ್ವ
  - ವಿಷ್ಣುವಿನ ಬ್ರಹ್ಮಶಬ್ದವಾಚ್ಯತ್ವ
  - ಸರ್ವವೇದಪ್ರತಿಪಾದ್ಯತ್ವ
  - ವಿಶ್ವಕರ್ತುತ್ವ
  - ಬ್ರಹ್ಮನ ಗುಣಪೂರ್ಣತ್ವವು ಸ್ವಾಭಾವಿಕ
  - ಬ್ರಹ್ಮನ ಗುಣಗಳು ಅನಂತ

- **ನಿರೀಶ್ವರ ಸಾಂಖ್ಯಮತ ಖಂಡನೆ** – “ಪ್ರಧಾನವೇ ಸ್ವತಂತ್ರ ಜಗತ್ಕಾರಣ” ಎಂಬ ನಿರೀಶ್ವರ ಸಾಂಖ್ಯಮತವನ್ನು ಅನುವಾದಿಸಿ ನಿರಾಕರಿಸಿರುವರು. ಹಾಲು ತಾನಾಗಿಯೇ ಮೊಸರಾಗುವಂತೆ ಪ್ರಧಾನವು ತಾನಾಗಿಯೇ ಜಗತ್ತಾಗಿ ಪರಿಣಮಿಸುತ್ತದ ಎಂಬುದು ನಿರೀಶ್ವರ ಸಾಂಖ್ಯರ ವಾದ. ಹಾಲು ಮೊಸರಾಗುವುದೂ ಸಹ ಮೂಲ ಕಾರಣ ಭಗವಂತನೇ ಎಂಬ ವೇದವಾಕ್ಯಗಳಿಗೆ ವಿರೋಧ ಬರುವುದರಿಂದ, ನಿದರ್ಶನಕ್ಕೆ ಸಾಧ್ಯವೈಕಲ್ಯವೆಂಬ ದೋಷವು ಬರುವುದರಿಂದ ಈ ಮತವು ಸರಿಯಲ್ಲ.
- ಸೇಶ್ವರ ಸಾಂಖ್ಯಮತ ಖಂಡನೆ

- ಭಾಸ್ಕರಾದಿಮತ ಖಂಡನೆ – ಬ್ರಹ್ಮನು ಚೇತನನಾಗಿರುವುದರಿಂದ ಎಂದೂ ಪರಿಣಾಮಿಕಾರಣನಾಗಲಾರನು, ಪರಿಣಾಮಕಾರಣವು ಎಂದೂ ಚೇತನವಾಗಿರುವುದಿಲ್ಲ, ಕ್ಷೀರಾದಿಗಳಂತೆ.
- ಪಾಶುಪತಾದಿಮತಗಳ ಖಂಡನೆ – ಪಶುಪತಿಯಾದ ಶಿವ ಜಗತ್ಕಾರಣನಾಗಲಾರ್. ಅವನಲ್ಲಿ ದೋಷಗಳು ಶ್ರುತವಾಗಿರುವುದರಿಂದ.

- ವೈಶೇಷಿಕಾದಿಮತಗಳ ಖಂಡನೆ – "ಸಂಸಾರಿಗಳಲ್ಲಿ ಸುಖವು ಹೇಗೆ ಇದೆಯೋ ಹಾಗೆ ದು:ಖವೂ ಇದೆ. ಅದೇ ರೀತಿ ಈಶ್ವರನಲ್ಲೂಸಹ" ಎಂಬುದು ವೈಶೇಷಿಕಾದಿಗಳ ಮತ – ಇದಕ್ಕೆ ಆಚಾರ್ಯರ ಉತ್ತರ – ಸಂಸಾರಿ ಜೀವನಲ್ಲಿ ಜ್ಞಾನವಿದೆ. ಆದರೆ ಭ್ರಾಂತಿಯೂ ಇದೆ. ಈಶ್ವರನಿಗ ಜ್ಞಾನ ಒಪ್ಪಿದಲ್ಲಿ ಭ್ರಾಂತಿಯನ್ನೂ ಒಪ್ಪಲೇಬೇಕಾಗುತ್ತದೆ. ಈಶ್ವರನಿಗೆ ಸುಖವನ್ನು ಒಪ್ಪದೆ, ಜ್ಞಾನವನ್ನು ಮಾತ್ರ ಒಪ್ಪುವ ವೈಶೇಶಿಕನಿಗೆ ಈ ಆಕ್ಷೇಪಕ್ಕೆ ಉತ್ತರಕೊಡಲಾಗುವುದಿಲ್ಲ.

- ಶೂನ್ಯವಾದ – ಮಾಯಾವಾದಗಳ ಖಂಡನೆ – ಆಗಮ ವಿರೋಧಿಯಾದ ಕೆಲವರು ಶೂನ್ಯವೊಂದನ್ನೇ ತತ್ತ್ವವೆಂದು ಭಾವಿಸುವರು. ಮಾಧ್ಯಮಿಕರೆನ್ನಿಸಿರುವ ಆ ಬೌದ್ಧೈಕದೇಶಿಗಳು ಸ್ಪಷ್ಟಶೂನ್ಯವದಿಗಳು ಮತ್ತು ಪ್ರಚ್ಛನ್ನಶೂನ್ಯವಾದಿಗಳು ಎಂಬುದಾಗಿ ಎರಡು ವಿಧ. – ಉತ್ತರ – ಶೂನ್ಯವು ಜಗತ್ಕಾರಣವಾಗದು, ಆಧಿಷ್ಠಾನವೆನ್ನಿಸದು.

- **ಮಾಯಾವಾದ ಖಂಡನ** – ಅತತ್ತ್ವಾವೇದಕವಾದುದು ಪ್ರಮಾಣವೆಂಬ ಮಾತೇ ವ್ಯಾಹತವಾದ್ದರಿಂದ, ವೇದಗಳನ್ನು ಅತತ್ತ್ವಾವೇದಕವೆಂದು ಕರೆಯುವ ಮಾಯಾವಾದಿಯು ಅವುಗಳಿಗೆ ಅಪ್ರಾಮಾಣ್ಯವನ್ನೇ ಒಪ್ಪಿದಂತಾಗುವುದು. ಮಾಯಾವಾದಿಯು ತನ್ನ 'ಬ್ರಹ್ಮ"ನಿಗೆ ಸತ್ವವನ್ನು ಒಪ್ಪುವುದಾದಲ್ಲಿ ಅವನು ವಿಶೇಷ ಉಳ್ಳವನಾಗುವನು.
- ಮಾಯಾವಾದಿಯು ಬ್ರಹ್ಮತತ್ತ್ವವು ಅವಾಚ್ಯವಾಗಿರುವುದರಿಂದ ಅವನು ತತ್ತ್ವಾವೇದಕನೆಂದು ತಿಳಿದಿರುವ ವೇದಭಾಗವು ಸಹ ಹೇಗೆ ತಾನೆ ತತ್ತ್ವಾವೇದಕವಾದೀತು?
- ಬ್ರಹ್ಮನು ನಿರ್ವಿಶೇಷನಲ್ಲ, ನಿರ್ವಿಶೇಷನಾದರೆ ಬ್ರಹ್ಮನು ಹೇಗೆ ಉಪಾಸ್ಯನಾಗುವನು?
- ಬ್ರಹ್ಮನು ನಿರ್ಗುಣನಲ್ಲ. ನಿರ್ಗುಣಬ್ರಹ್ಮ ಹೇಗೆ ಉಪಾಸ್ಯನಾಗುತ್ತಾನೆ?
- ಚಾರ್ವಾಕಮತ ಖಂಡನ

- **ಮೋಕ್ಷಸ್ವರೂಪದ ವಿವೇಚನೆ –**
- ಮುಕ್ತಿಯಲ್ಲಿ ಬುದ್ಧ್ಯಾದಿಗಳು ಇರುವುವು
- ಮುಕ್ತಿಯಲ್ಲಿ ಜ್ಞಾನಾನಂದಾದಿಗಳು ಇರುವುವು
- ಮುಕ್ತಿಯಲ್ಲಿ ಸುಖ ಇರುವುದು, ದು:ಖಸಂಪರ್ಕವಿರದು
- ಮುಕ್ತನಿಗೆ ಪ್ರಾಕೃತ ದೇಹವಿಲ್ಲ,
- ಮುಕ್ತನಿಗೆ ಕರಚರಣಾದಿ ಅವಯವಗಳು ಇರುವುವು
- ಮುಕ್ತನದು ಜ್ಞಾನಾನಂದಮಯದೇಹ
- ಸ್ವರೂಪಾನಂದಾನುಭವಸ್ವರೂಪವಾದ ಮುಕ್ತಿ ವೇದಸಮ್ಮತ
- ವಿಷ್ಣುವೇ ಮೋಕ್ಷದಾತಾ

ಈರೀತಿಯ ಪ್ರಮೇಯಗಳನ್ನು ಪ್ರತಿಪಾದಿಸುವಂತಹ ಸರ್ವಜ್ಞರಾದ ಶ್ರೀಪೂರ್ಣಪ್ರಜ್ಞಾಚಾರ್ಯರ ಪ್ರಮಾಣೋಪನ್ಯಾಸಗಳನ್ನು, ಶ್ರವಣ ಮಾಡಿದ ತ್ರಿವಿಕ್ರಮರು ವಾಗ್ಯುದ್ಧದಲ್ಲಿ ತೊಡಗಿದರು ಆಚಾರ್ಯರೊಂದಿಗೆ. ತ್ರಿವಿಕ್ರಮರಿಂದ ವೇದಾಸ್ತ್ರಪ್ರಯೋಗ – ಆಚಾರ್ಯರಿಂದ ಪ್ರತ್ಯಸ್ತ್ರ ಪ್ರಯೋಗ.

ಹೀಗೆ ೧೫ ದಿನಗಳವರೆಗೆ ಆಚಾರ್ಯರೊಂದಿಗೆ ವಾದಮಾಡಿದ ತ್ರಿವಿಕ್ರಮಪಂಡಿತರು ನಿರುತ್ತರರಾಗಿ, ಶರಣಾಗತರಾಗಿ, ಆಚಾರ್ಯರಲ್ಲಿ ಶಿಷ್ಯತ್ವ ವಹಿಸಿದರು.
ಆಚಾರ್ಯರು ತ್ರಿವಿಕ್ರಮರಿಗೆ “ತತ್ತ್ವಪ್ರದೀಪ” ಗ್ರಂಥ ರಚನೆಗೆ ಆದೇಶ ನೀಡಿದರು.

## ಆಚಾರ್ಯರ ಗ್ರಂಥಗಳು –

ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳನ್ನು ಸೂತ್ರಪ್ರಸ್ಥಾನ, ಗೀತಾಪ್ರಸ್ಥಾನ, ಉಪನಿಷ್ಪ್ರಸ್ಥಾನ, ಶ್ರುತಿಪ್ರಸ್ಥಾನ, ಪ್ರಕರಣಗ್ರಂಥಗಳು, ಇತಿಹಾಸ ಪ್ರಸ್ಥಾನ, ಪುರಾಣಪ್ರಸ್ಥಾನ, ಆಚಾರಗ್ರಂಥಗಳು, ಸ್ತೋತ್ರಗ್ರಂಥಗಳು ಎಂದು ವಿಂಗಡಿಸಲಾಗಿದೆ. ಶ್ರೀಮದಾಚಾರ್ಯರು ೩೭ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳ ಸಮಗ್ರ ಅಧ್ಯಯನದಿಂದ ಪರಮಾತ್ಮನ ಅರಿವು ಲಭಿಸುತ್ತದೆ.

ಆಚಾರ್ಯರ ಸರ್ವಮೂಲಗ್ರಂಥಗಳ ಸಂಖ್ಯೆ – 37

ಇದರ ವಿಶೇಷಗಳು –

1. 3 + 7 = 10 = ಪೂರ್ಣ – ದಶಪ್ರಮತಿ

2. 7 - 3 = 4 = ಚತುರ್ವಿದ ಪುರುಷಾರ್ಥಗಳು

3. 3 x 7 = 21 = ಏಕವಿಂಶತಿ ಋಗ್ಭಾಷ್ಯಗಳ ಖಂಡನೆ

4. 7 / 3 = ಶೇಷ (1) = ಒಬ್ಬನೇ ಪರಮಾತ್ಮ

ಸಕಲ ಕಾಲದಲ್ಲಿಯೂ ಪರಮಾತ್ಮನೊಬ್ಬನೇ ಇರುವನು.

**ಸೂತ್ರಪ್ರಸ್ತಾನ ಗ್ರಂಥಗಳು**

- ಬ್ರಹ್ಮಸೂತ್ರ ಭಾಷ್ಯ – ಇದು ಪ್ರಮೇಯರತ್ನಗಳ ಸಾಗರ
- ಅಣು ಭಾಷ್ಯ
- ಅನುವ್ಯಾಖ್ಯಾನ
- ನ್ಯಾಯ ವಿವರಣ

**ಗೀತಾ ಪ್ರಸ್ತಾನ ಗ್ರಂಥಗಳು –**

- ಗೀತಾ ಭಾಷ್ಯ
- ಗೀತಾತಾತ್ಪರ್ಯನಿರ್ಣಯ

**ಉಪನಿಷತ್ ಪ್ರಸ್ತಾನ ಗ್ರಂಥಗಳು – ಶ್ರೀಮದಾಚಾರ್ಯರು ರಚಿಸಿರುವ ಭಾಷ್ಯಗಳಿಂದ ದುರ್ಗಮವಾದ ಉಪನಿಷತ್ತುಗಳ ಅರ್ಥವು ಸುಗಮವಾಗಿ ತಿಳಿಯುವುದು.**

- ಈಶಾವಾಸ್ಯೋಪನಿಷದ್ಭಾಷ್ಯ
- ತಲವಕಾರೋಪನಿಷದ್ಭಾಷ್ಯ
- ಕಾಠಕೋಪನಿಷದ್ಭಾಷ್ಯ
- ಷಟ್ಪ್ರಶ್ನೋಪನಿಷದ್ಭಾಷ್ಯ
- ಅಥರ್ವಣೋಪನಿಷದ್ಭಾಷ್ಯ
- ಮಾಂಡೂಕೋಪನಿಷದ್ಭಾಷ್ಯ
- ತೈತ್ತಿರಿಯೋಪನಿಷದ್ಭಾಷ್ಯ
- ಮಹೈತರೇಯೋಪನಿಷದ್ಭಾಶ್ಯ
- ಛಾಂದೋಗ್ಯೋಪನಿಷದ್ಭಾಷ್ಯ
- ಬೃಹದಾರಣ್ಯಕೋಪನಿಷದ್ಭಾಶ್ಯ
- ಶ್ರುತಿಪ್ರಸ್ತಾನ ಗ್ರಂಥ
- ಋಗ್ಭಾಷ್ಯ

## ಪ್ರಕರಣ ಗ್ರಂಥಗಳು

- ತತ್ವಸಂಖ್ಯಾನ
- ತತ್ವವಿವೇಕ
- ಪ್ರಮಾಣಲಕ್ಷಣ
- ಕಥಾಲಕ್ಷಣ
- ಉಪಾಧಿಖಂಡನ
- ಮಾಯಾವಾದಖಂಡನ
- ಪ್ರಪಂಚಮಿಥ್ಯಾತ್ವಾನುಮಾನಖಂಡನ

- ತತ್ವೋದ್ಯೋತ
- ವಿಷ್ಣುತತ್ವನಿರ್ಣಯ
- ಕರ್ಮನಿರ್ಣಯ

## ಇತಿಹಾಸಪ್ರಸ್ಥಾನ ಗ್ರಂಥಗಳು

- ಮಹಾಭಾರತತಾತ್ಪರ್ಯನಿರ್ಣಯಃ
- ಯಮಕಭಾರತ

## ಪುರಾಣಪ್ರಸ್ಥಾನ ಗ್ರಂಥಗಳು

- ಭಾಗವತತಾತ್ಪರ್ಯನಿರ್ಣಯಃ
- ಸದಾಚಾರಸ್ಮೃತಿ
- ಕೃಷ್ಣಾಮೃತಮಹಾರ್ಣವ
- ತಂತ್ರಸಾರಸಂಗ್ರಹ
- ಯತಿಪ್ರಣವಕಲ್ಪ
- ಜಯಂತೀನಿರ್ಣಯ

## ಸ್ತೋತ್ರ ಗ್ರಂಥಗಳು

- ನರಸಿಂಹ ನಖಸ್ತುತಿ ಮತ್ತು ದ್ವಾದಶಸ್ತೋತ್ರ

### ಸೋದರನಿಗೆ ಸನ್ಯಾಸ –

ಇದೇ ವೇಳೆಗೆ ಶ್ರೀಮದಾಚಾರ್ಯರ ತಂದೆ ತಾಯಿಗಳು ವೈಕುಂಠಯಾತ್ರೆ ಮಾಡಿದರು. ವಿಷ್ಣುತೀರ್ಥರು ವೈರಾಗ್ಯ ಹೊಂದಿ ಆಚಾರ್ಯರಲ್ಲಿ ಬಂದು, ಸನ್ಯಾಸಕ್ಕಾಗಿ ಪ್ರಾರ್ಥನೆ. ಆದರೆ ಆಚಾರ್ಯರು “ಕಾಲ ಬರಲಿ ಮುಂದೆ ನೋಡೋಣ” ಎಂದು ಪಾಜಕಕ್ಕೆ ವಾಪಸ್ಸು ಕಳುಹಿಸಿದರು. ಕೆಲಕಾಲದ ನಂತರ ವಿಷ್ಣುತೀರ್ಥರು ಆಚಾರ್ಯರ ನಿರೀಕ್ಷೆಯಲ್ಲಿರುವಂತೆ, ಮಧ್ವರು ಬಂದು ಸನ್ಯಾಸ ಪ್ರಧಾನ ಮಾಡಿದರು.

**ವಿಷ್ಣುತೀರ್ಥರು** ತಮ್ಮಲ್ಲಿದ್ದ ಗುರುಗಳ ಕೃಪೆಯ ಅಂಕುರವನ್ನು, ಇಂದ್ರಿಯನಿಗ್ರಹ, ಹರಿಗುರುಭಕ್ತಿ, ಇವುಗಳಿಂದ ಅಗಮ್ಯಮಹಿಮರಾದರು, ತೀರ್ಥಯಾತ್ರೆ ಕೈಗೊಂಡರು. ಕ್ರಮೇಣ ಹರಿಶ್ಚಂದ್ರಪರ್ವತಕ್ಕೆ ಹೊರಟರು, ಅಧ್ಭುತ ತಪಸ್ಸನ್ನಾಚರಿಸಿದರು. ಅವರ ತಪಸ್ಸಿನ ತೀವ್ರತೆ ಹೇಗಿತ್ತೆಂದರೆ – ಅವರು ಐದೈದು ದಿನಗಳಿಗೊಮ್ಮೆ ಪಂಚಗವ್ಯ, ನಂತರ ಅದನ್ನೂ ಬಿಟ್ಟು ನೆಲದ ಮೇಲೆ ಉದುರಿದ ಬಿಲ್ವಪತ್ರಗಳಿಂದಲೂ, ತೃಪ್ತರಾಗಿ ತಪಸ್ಸನ್ನಾಚರಿಸಿದರು. ವಿಷ್ಣುತೀರ್ಥರು ರೇಚಕ, ಪೂರಕ, ಕುಂಭಕಗಳಿಂದ ಕೂಡಿದ ಪ್ರಾಣಾಯಾಮಗಳಿಂದ ಶ್ವಾಸವಾಯುವನ್ನೂ ಜಯಿಸಿ, ಮನಸ್ಸು ಎಂಬ ಸಾರಥಿಯ ಮೂಲಕ ಇಂದ್ರಿಯಗಳೆಂಬ ಅಷ್ವಗಳನ್ನು ವಶಪಡಿಸಿಕೊಂಡರು. ವಿಷ್ಣುತೀರ್ಥರಿಗೆ ಅನಿರುದ್ಧತೀರ್ಥರು (ಸುಬ್ರಹ್ಮಣ್ಯಮಠ) ಮತ್ತು ವ್ಯಾಸತೀರ್ಥರೆಂಬ ಶಿಷ್ಯರಿದ್ದರು. ವಿಷ್ಣುತೀರ್ಥರು ಸಂನ್ಯಾಸಪದ್ಧತಿ, ಪಂಚಸಂಸ್ಕಾರಸಂಗ್ರಹ, ಮತ್ತು ಶ್ರವಣದ್ವಾದಶಿನಿರ್ಣಯ ಎಂಬ ಗ್ರಂಥಗಳನ್ನು ರಚಿಸಿರುವರು. ನಂತರ ಕುಮಾರಪರ್ವತಕ್ಕೆ ತೆರಳಿದರು. ಅದ್ಯಾಪಿ ಕುಮಾರಪರ್ವತದಲ್ಲಿ ತಪೋನಿರತರಾಗಿರುವರೆಂದೂ, ಮುಂದೊಂದು ದಿನ ಶ್ರೀಮಧ್ವಸಿದ್ಧಾಂತವು ಖಿಲವಾದಗ ಅವರು ಆಗಮಿಸಿ "ಸೇತುತಿಲ" ಎಂಬಲ್ಲಿ ಶ್ರೀಮಧ್ವಾಚಾರ್ಯರಿಂದ ಸ್ಥಾಪಿತವಾಗಿರುವ ಮೂಲಗ್ರಂಥಗಳನ್ನು ಹೊರತೆಗೆದು ಸತ್ಸಿದ್ಧಾಂತವನ್ನು ಪುನ: ಸಜ್ಜನರಿಗೆ ಉಪದೇಶ ಮಾಡುವರು ಎಂದು ವಾದಿರಾಜರು ಬರೆದಿದ್ದಾರೆ.

**ಪದ್ಮನಾಭತೀರ್ಥರು –** ಶ್ರೀಮಧ್ವಾಚಾರ್ಯರ ಗುಣಗಳಿಂದ ಆಕರ್ಷಿತರಾಗಿ ಗೋದಾವರೀತೀರದಿಂದ ಆಗಮಿಸಿದ್ದ ಶೋಭನಭಟ್ಟರು ಶ್ರೀಮದಾಚಾರ್ಯರಿಂದ ಸನ್ಯಾಸ ಸ್ವೀಕರಿಸಿ ಅವರ ಶಿಷ್ಯರಾದರು.

**ಶ್ರುತ್ಯಾ ಮತ್ಯಾ ಸದಾ ಭಕ್ತ್ಯಾ ವಿರಕ್ತ್ಯಾ ನಿತ್ಯಸೇವಯಾ ।**
**ತಸ್ಮೈ ಪ್ರಸನ್ನ: ಪ್ರಜ್ಞೇಕ್ಷ: ಸದ್ಯೋ ವಿದ್ಯಾಂ ದದೌ ಶುಭಾಮ್ ॥**

ಶ್ರವಣ, ಮನನ, ಸಂತತವಾದ ಭಕ್ತಿ, ವಿರಕ್ತಿ ಮತ್ತು ನಿತ್ಯ ಸೇವೆಗಳಿಂದ ಪ್ರಸನ್ನರಾದ ಶ್ರೀಪೂರ್ಣಪ್ರಜ್ಞರು ಆ ಪದ್ಮನಾಭತೀರ್ಥರಿಗೆ ಆಗಲೇ ನಿರ್ಮಲವಾದ ಆಧ್ಯತ್ಮವಿದ್ಯೆಯನ್ನು ಉಪದೇಶಿಸಿದರು. ವಾದಿಸಿಂಹ ಶ್ರೀಪದ್ಮನಾಭತೀರ್ಥರು ತಮ್ಮ ಗುಂಪಿನಲ್ಲಿ ತಾವೇ ವೀರರೆಂದು

ಭಾವಿಸಿದ್ದ ಮಾಯಾವಾದಿಗಳೆಂಬ ಗ್ರಾಮಸಿಂಹಗಳನ್ನು ತಮ್ಮ ವ್ಯಾಖ್ಯಾನಧ್ವನಿಯೆಂಬ ಗರ್ಜನೆ ಮಾತ್ರದಿಂದಲೇ ಪರಾಭವಗೊಳಿಸಿದರು. ಅವರು ದುರ್ವಾದಿ ಗಜಕೇಸರಿಯಾಗಿದ್ದರು. ಶ್ರೀಮಧ್ವಾಚಾರ್ಯರ "ಅನುವ್ಯಾಖ್ಯಾನ"ವೆಂಬ ಗ್ರಂಥಕ್ಕೆ ಸನ್ನ್ಯಾಯರತ್ನಾವಲಿ ಎಂಬ ಮಂಗಲಕರವಾದ ಅಮೂಲ್ಯವಾದ ಟೀಕೆ ಉತ್ಪನ್ನವಾಯಿತು ಪದ್ಮನಾಭತೀರ್ಥರಿಂದ., ಜೊತೆಗೆ ಸತ್ತರ್ಕದೀಪಾವಲಿ, ಗೀತಾಭಾಷ್ಯಟೀಕಾ, ಗೀತಾತಾತ್ಪರ್ಯಟೀಕಾ, ದಶಪ್ರಕರಣಟೀಕಾ, ಮಧ್ವಾಷ್ಟಕ ಮೊದಲಾದ್ ಇನ್ನೂ ಅನೇಕ ಗ್ರಂಥಗಳನ್ನು ರಚಿಸಿರುವರು.

**ಪದ್ಮನಾಭತೀರ್ಥರು ಸರ್ವದರಲ್ಲೂ ಪ್ರಥಮರು –**

- ಶ್ರೀಮದಾಚಾರ್ಯರ ಪ್ರಥಮ ಶಿಷ್ಯರು,
- ಪ್ರಥಮ ಮಧ್ವಶಾಸ್ತ್ರ ಪ್ರಚಾರಕರು
- ಪ್ರಥಮ ವೃಂದಾವನಸ್ಥರು
- ಪ್ರಥಮ ಪೀಠಾಧಿಪತಿಗಳು.

**ಆಚಾರ್ಯರ ಇತರ ಸನ್ಯಾಸಿ ಶಿಷ್ಯರು –**

- ಹೃಷೀಕೇಶತೀರ್ಥರು ಫಲಿಮಾರುಮಠ
- ಜನಾರ್ದನತೀರ್ಥರು ಕೃಷ್ಣಾಪುರ ಮಠ
- ನರಸಿಂಹತೀರ್ಥರು ಅದಮಾರು ಮಠ
- ಉಪೇಂದ್ರತೀರ್ಥರು ಪುತ್ತಿಗೆಮಠ
- ವಾಮನತೀರ್ಥರು ಶಿರೂರು ಮಠ
- ರಾಮತೀರ್ಥರು ಕಾಣಿಯೂರು ಮಠ
- ಅಧೋಕ್ಷಜತೀರ್ಥರು ಪೇಜಾವರ ಮಠ
- ವಿಷ್ಣುತೀರ್ಥರು ಸೋದೆ ಮಠ

**ಶ್ರೀಮದಾಚಾರ್ಯರ ಗೃಹಸ್ಥಶಿಷ್ಯರು –**

- ಶಂಕರಪಂಡಿತಾಚಾರ್ಯರು
- ಶಂಕರಾಚಾರ್ಯರು (ಲಿಕುಚ ವಂಶ)
- ನಾರಾಯಣಪಂಡಿತಾಚಾರ್ಯರು
- ತ್ರೈವಿಕ್ರಮಾಯದಾಸರು,
- ತ್ರಿವಿಕ್ರಮಪಂಡಿತರು, ಇತ್ಯಾದಿ

ಹೀಗೆ ಶಿಷ್ಯ ಪ್ರಶಿಷ್ಯರಾದಿಗಳಿಂದ ಕೂಡಿದ ಶ್ರೀಮದಾಚಾರ್ಯರು "ಏಕವಾಟ"ದಲ್ಲಿ ಚಾತುರ್ಮಾಸ್ಯವನ್ನು ಆಚರಿಸಿದರು.

## ಷೋಡಶ ಸರ್ಗ

**ಸಾಧುಭ್ಯೋ ಮಧುಮಥನಾಂಘ್ರಿಭಕ್ತಿಭಾಗ್ಭ್ಯ:**
**ಶ್ರೌತೇಭ್ಯೋ ವಿತತಮತೇರ್ಮಹಾನುಭಾವಮ್ ।**
**ವೇದಾಂತಂ ಸ್ವಯಮಿವ ಬಂಧಮೋಕ್ಷಮೂಲಮ್**
**ವ್ಯಾಚಷ್ಟ ಸ್ಫುಟಮಥ ಕೋऽಪಿ ಕೋವಿದೋऽತ್ರ**

ಆಚಾರ್ಯರ ಶಿಷ್ಯವರ್ಗಕ್ಕೆ ಸೇರಿದ ಒಬ್ಬ ವಿದ್ವಾಂಸನು ಶ್ರೀಹರಿಯ ಚರಣಗಳಲ್ಲಿ ಭಕ್ತಿಯನ್ನು ಹೊಂದಿದ್ದ ವೇದಪಾಠಕರಾದ ಸಜ್ಜನರಿಗೆ ಪೂರ್ಣಪ್ರಜ್ಞರಾದ ಶ್ರೀಮಧ್ವಾಚಾರ್ಯರ ಮಹಾಮಹಿಮೆಯನ್ನು, ಸಂಸಾರಬಂಧನವನ್ನು ಬಿಡಿಸಿ ಮೋಕ್ಷಕ್ಕೆ ಸಾಧನವಾಗುವ ಸ್ವತ: ವೇದಾಂತಶಾಸ್ತ್ರದಂತೆ ಸ್ಫುಟವಾಗಿ ತಿಳಿಸತೊಡಗಿದನು

### ವೇದಪ್ರಾಮಾಣದ ಪ್ರಾತ್ಯಕ್ಷಿಕೆ –

ಶ್ರೀಮದಾಚಾರ್ಯರು ಗೋಮತೀ ನದೀತೀರದಲ್ಲಿ ಬಂದಿದ್ದಾಗ ಒಬ್ಬ ಶೂದ್ರರಾಜನು ವೇದಪ್ರಾಮಾಣ್ಯದ ಬಗ್ಗೆ ಶಂಕೆಯನ್ನು ವ್ಯಕ್ತಪಡಿಸಿದನು. ಆಗ ಶ್ರೀಮದಾಚಾರ್ಯರು ವೇದಪ್ರಾಮಾಣ್ಯವು ಅಭಾದಿತ – ಅರ್ಹತೆಯಿರುವವರಿಗೆ ವೇದೋಕ್ತವಾದ ಫಲವು ಖಚಿತವಾಗಿಯೂ ಲಭಿಸುವುದು ಎಂದರು. ಆಗ ಆ ಶೂದ್ರರಾಜನು "ವೇದೋಕ್ತಫಲವನ್ನು ಪಡೆಯುವವನು ಒಬ್ಬನೂ

ಕಾಣುವಿದಿಲ್ಲವೆಂದಾದಲ್ಲಿ ಅಂತಹ ಅಧಿಕಾರಿಯು ಕತ್ತೆಯ ಕೋಡಿನಂತೆ ಎಂದೂ ದೊರೆಯಲಾರನು" ಎಂದನು. ಶ್ರೀಮದಾಚಾರ್ಯರು ಅವನ ಆ ಆಕ್ಷೇಪವನ್ನು ಸಹಿಸದವರಾಗಿ ತಕ್ಷಣದಲ್ಲಿ ಓಷಧೀಸೂಕ್ತದಿಂದ ಹೆಸರುಧಾನ್ಯವನ್ನು ತರಿಸಿ – ಅಂಕುರ, ದಲ, ಪುಷ್ಪ ಮತ್ತು ಬೀಜಗಳನ್ನು ಹುಟ್ಟಿಸಿದರು.

**ಪಾದಾಂಗುಷ್ಠನಖದಿಂದ ಹೊರಹೊಮ್ಮಿದ ಪ್ರಕಾಶರಾಶಿ** - ಒಮ್ಮೆ ರಾತ್ರಿಕಾಲದಲ್ಲಿ ಪಾಠ ಹೇಳುತ್ತಿದ್ದಾಗ, ದೀಪವು ಶಂತವಾಗಲು, ಕರುಣಾಸಮುದ್ರರಾದ ಶ್ರೀಮಧ್ವಾಚಾರ್ಯರು ತಮ್ಮ ಪಾದದ ಹೆಬ್ಬೆರಳಿನ ಉಗುರಿನ ತುದಿಯಿಂದ ಹೊರಹೊಮ್ಮಿದ ಪ್ರಕಾಶದಿಂದಲೇ ತಮ್ಮ ಶಿಷ್ಯರಿಂದ ಗ್ರಂಥಗಳನ್ನು ಓದಿಸಿದರು.

**ಭದ್ರಾನದಿಯ ತೀರದಲ್ಲಿ** – ಒಮ್ಮೆ ಚಿಕ್ಕಮಗಳೂರು ಜಿಲ್ಲೆ ಕಳಸವೆಂಬ ಗ್ರಾಮದ ಬಳಿಯ ಭದ್ರಾನದಿಯ ತೀರದಲ್ಲಿ, ಸಾವಿರಾರು ಜನರು ತಂದು, ಅತ್ಯಂತ ಅಶಕ್ತಿಯಿಂದಾಗಿ ದಾರಿಯಲ್ಲೇ ಬಿಟ್ಟಿದ್ದ, ಉನ್ನತವಾದ ತೀರಪ್ರದೇಶದಿಂದ ಸುರಿಯುವ ನೀರಿನ ವೇಗವನ್ನು ತಡೆಯಲು ಸಮರ್ಥವಾಗಿದ್ದ, ಸುಮಾರು ೫೦ ಟನ್ ತೂಕದ, ದೊಡ್ಡ ಬಂಡೆಯೊಂದನ್ನು ನೋಡಿ, ಅದನ್ನು ಹನುಮದ್ರೂಪದಿಂದ ಅವತರಿಸಿದಾಗ ಲೀಲಾಜಾಲವಾಗಿ ಗಂಧಮಾದನಪರ್ವತವನ್ನು ಎತ್ತಿತಂದಿದ್ದ ರೀತಿಯಲ್ಲಿ, ಶ್ರೀಮದಾಚಾರ್ಯರು ಆ ಬಂಡೆಯನ್ನು ಎತ್ತಿ ಒಯ್ದು, ಅದನ್ನು ಬೇರೆ ಸ್ಥಳದಲ್ಲಿರಿಸಿದರು

**ಸೂರ್ಯಗ್ರಹಣಕಾಲದಲ್ಲಿ ನಡೆದ ಸಮುದ್ರ ಸ್ನಾನ ಪ್ರಸಂಗ** – ಸಮುದ್ರಸ್ನಾನಕ್ಕಿಂತ ಮೊದಲು ಬೇರೆ ತೀರ್ಥದಲ್ಲಿ ಸ್ನಾನಮಾಡಿ ಸಮುದ್ರದಲ್ಲಿ ಸ್ನಾನ ಮಾಡುವ ಸಂಪ್ರದಾಯವನ್ನು ಇಲ್ಲಿ ಕಾಣಬಹುದು. ಆಚಾರ್ಯರು ಕಣ್ವತೀರ್ಥದಲ್ಲಿ ಸ್ನಾನ ಮಾಡಿ ಸಮುದ್ರಕ್ಕೆ ಬಂದಾಗ, ಸಮುದ್ರರಾಜನು ಸಂತೋಷದಿಂದ, ರಭಸದಿಂದ ಮುನ್ನುಗ್ಗುತ್ತ, ಗಂಭೀರಧ್ವನಿಯೆಂಬ ಸ್ತುತಿಯಿಂದ ಕೂಡಿದ, ನಿರ್ಮಲ ನೊರೆಯೆಂಬ ನಗೆಯ ಸಮುದ್ರನು ತನ್ನ ಚಾಚಿದ ಅಲೆಗಳೆಂಬ ಅಂಗಗಳಿಂದ ತೀರದಲ್ಲಿದ್ದ ಶ್ರೀಮಧ್ವಾಚಾರ್ಯರಿಗೆ ನಮಸ್ಕರಿಸುವವನಂತೆ ಶೋಭಿಸಿದ. ಗ್ರಹಣ ಸ್ಪರ್ಶಕ್ಕೆ ಸ್ವಲ್ಪ ಸಮಯವಿದ್ದುದರಿಂದ ಆಚಾರ್ಯರು ಋಗ್ವೇದದ ಸೂಕ್ತಗಳನ್ನು ಪ್ರವಚನ ಮಾಡಿದರು. ಅವರ ಧ್ವನಿಯ ಗಾಂಭೀರ್ಯ ಸಮುದ್ರಘೋಷವನ್ನು ಮೀರಿಸುತ್ತಿರುವುದು, ಆದರೂ ತುಂಬಾ

ಮಧುರವಾಗಿತ್ತು. ಈ ಮಧ್ಯೆ ಗ್ರಹಣ ಸಮಯಬಂದು ಶ್ರೀಮಧ್ವಾಚಾರ್ಯರು ಸ್ನಾನಕ್ಕೆ ಇಳಿದಾಗ, ಸಮುದ್ರದ ದೊಡ್ಡ ಅಲೆಗಳಿಂದ ಶರೀರಮುಚ್ಚಿದ್ದ ಅವರನ್ನು ಕಂಡು ದುರ್ಜನರು "ಮಧ್ವಾಚಾರ್ಯರೂ ಸಹ ಅಲೆಗಳ ಹೊಡೆತಕ್ಕೆ ಬಿದ್ದುಬಿಡುವರೆಂದು" ಅಪಹಾಸ್ಯ ಮಾಡತೊಡಗಿದರು. ಆದರೆ ಶ್ರೀಮದಾಚಾರ್ಯರು ಇವರ ಮಾತನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ.

**ಗಂಡವಾಟನ ಪರಾಜಯ** – ಒಮ್ಮೆ ಗಂಡವಾಟ ಎಂಬ ದುಷ್ಟನು ಶ್ರೀಮದಾಚಾರ್ಯರನ್ನು ಪರೀಕ್ಷಿಸಲು ಬಂದಾಗ, ಆಚಾರ್ಯರು ಅವನಿಗ ಅವನ ಬಲವನ್ನು ಪ್ರದರ್ಶಿಸಲು ಆದೇಶಿಸಿದರು. ಈ ಗಂಡವಾಟನಾದರೋ ಶ್ರೀಕಾಂತೇಶ್ವರ ದೇವಾಲಯದಲ್ಲಿದ್ದ ಮೂವತ್ತು ಜನ ಸಮರ್ಥ ಜನರು ತಂದಿರಿಸಿದ್ದ ಒಂದು ಧ್ವಜಸ್ತಂಭವನ್ನು ತಾನೊಬ್ಬನೇ ಎತ್ತಿರಿಸಿದ್ದವನು. ಇಂತಹ ಗಂಡವಾಟ ಮತ್ತು ಅವನ ಅಣ್ಣ ಇಬ್ಬರೂ ಸೇರಿ ಒಮ್ಮೆಗೇ ಶ್ರೀಮದಾಚಾರ್ಯರ ಕಂಠ ಹಿಡಿದು ಅಮುಕಲೆಂದು ಪರಮ ಪ್ರಯತ್ನವನ್ನು ಮಾಡತೊಡಗಿದರು. ಆದರೆ ಅವರು ಅಮುಕಿದಂತೆ ಅವರ ಕಂಠ ಕ್ರಮವಾಗಿ ಮುಂಚಿಗಿಂತ ಹೆಚ್ಚು ಕಠಿಣವಾಗುತ್ತಿತ್ತು. ಕಡೆಗೆ ಅವರಿಬ್ಬರೂ ಹಿಡಿದುಕೊಳ್ಳಲೂ ಆಗದೆ ಬಿಟ್ಟು ನೆಲಕ್ಕುರುಳಿದರು. ಅವರಿಬ್ಬರೂ ಆಯಾಸ ಪರಿಹರಿಸಿಕೊಂಡ ಮೇಲೆ, ಆಚಾರ್ಯರು ತಾವು ನೆಲದ ಮೇಲೆ ಊರಿದ ಒಂದು ಬೆರಳನ್ನು ಮೇಲೆತ್ತಲು ತಿಳಿಸಿದರು. ಅವರಿಬ್ಬರೂ ಬಲವನ್ನೆಲ್ಲಾ ಪ್ರಯೋಗಿಸಿ, ಎಷ್ಟು ಪ್ರಯತ್ನಿಸಿದರೂ ಅದನ್ನು ಅಲುಗಾಡಿಸಲೂ ಸಹ ಆಗಲಿಲ್ಲ.

**ಅಣಿಮ ಗರಿಮಾ ಲಘಿಮಾ ಸಾಮರ್ಥ್ಯ** – ಗಂಡವಾಟನ ಜೊತೆಗೇ ಅಷ್ಟೊಂದು ಭಾರವನ್ನು ತೋರಿದ ಶ್ರೀಮದಾಚಾರ್ಯರು ಒಮ್ಮೆ ಒಬ್ಬ ಚಿಕ್ಕ ವಟುವಿನ ಮೇಲೆ ಕುಳಿತು ಕಿರುನಗೆ ಸೂಸುತ್ತಲೇ ನೃಸಿಂಹದೇವಾಲಯದ ಸುತ್ತಲೂ ಪ್ರದಕ್ಷಿಣೆ ಮಾಡಿದರು. ಈ ರೀತಿಯಾಗಿ ತಮಗೆ "ಲಘಿಮಾ" ಸಾಮರ್ಥ್ಯವಿರುವುದನ್ನೂ ತೋರಿಸಿದರು.

**ಪೂರ್ವವಾಟನ ಪರಾಜಯ** – ಐವತ್ತು ಜನ ರಾಜಭಟರು ಬಹುಶ್ರಮದಿಂದ ಹೊತ್ತುತಂದಿದ್ದ ಒಂದು ಮರದ ಏಣಿಯನ್ನು ತಾನೊಬ್ಬನೇ ಮನೆಗೆ ಹೊತ್ತು ತಂದಿದ್ದ ಮಹಾಬಲಶಾಲಿಯಾದ "ಪೂರ್ವವಾಟ" ಎಂಬ ಮತ್ತೊಬ್ಬನು ಅವರ ಪ್ರವಚನ ಧ್ವನಿಯನ್ನು ತಡೆಯುವ ಕಾರ್ಯದಲ್ಲಿ ನಿರತನಾಗಿ, ಅವರ ಕತ್ತನ್ನು ಹಿಸುಕಲು ತೊಡಗಿದನು. ಆದರೆ ಶ್ರೀಮದಾಚಾರ್ಯರ ಪ್ರವಚನ ಕಂಠವು ಹಿಂದಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಶೋಭಿಸಿತು.

**ಆಖನಾಶ್ಮಸಮ ಮಧ್ವರು** – ಹೀಗೆ ಪ್ರತಿಪಕ್ಷಗಳು ಎಷ್ಟು ಪ್ರಯತ್ನಿಸಿದರೂ, ಅತ್ಯಂತ ಬಲಿಷ್ಟರಾದ ಜನರು ಚಿಮ್ಮಟದಿಂದ ಮತ್ತೆ ಮತ್ತೆ ಹಿಡಿದು ಪ್ರಯತ್ನಿಸಿದರೂ, ಆಚಾರ್ಯರ ಒಂದು ರೋಮವನ್ನೂ ಸಹ ಕೀಳಲು ಶಕ್ತರಾಗಲಿಲ್ಲ. ಅವರೆಲ್ಲ ಸೇರಿ ಆಚಾರ್ಯರ ಮೂಗಿನ ತುದಿಯ ಮೇಲೆ ಬಲವಾಗಿ ಅಪ್ಪಳಿಸಿದರೂ, ಅವರ ಮುಖಚಂದ್ರನ ಕಾಂತಿ ಸ್ವಲ್ಪವೂ ಕುಂದಲಿಲ್ಲ.

- ♣ ಶ್ರೀಮದಾಚಾರ್ಯರು ಒಮ್ಮೆ ಬಹುಕಾಲದಿಂದ ನೈವೇದ್ಯಾದಿಗಳೇ ತಪ್ಪಿಹೋಗಿದ್ದ "ಪಾರಂತೀ" ಎಂಬ ದೇವಾಲಯವನ್ನು ತಲುಪಿ, ಅಲ್ಲಿ ಗ್ರಾಮಾಧಿಪತಿಗಳನ್ನೂ, ರಾಜನನ್ನೂ ಕರೆಸಿ, ಜೀರ್ಣೋದ್ಧಾರ ಮಾಡಿಸಿದರು. ಪಾರಂತಿಯಲ್ಲಿ ಹಿಂದೆ ಭೀಮಸೇನರಗಿದ್ದಾಗ ತಾವು ಐದು ರೂಪಗಳ ಶ್ರೀಹರಿಯನ್ನು ಅಲ್ಲಿ ಪ್ರತಿಷ್ಠೆ ಮಾಡಿದ್ದುದನ್ನೂ, ಸ್ಮರಿಸಿಕೊಂಡರು.
- ♣ ಶ್ರೀಮದಾಚಾರ್ಯರು "ಸರಿದಂತರ"ವೆಂಬ ಪ್ರದೇಶಕ್ಕೆ ಆಗಮಿಸಿ, ಆ ಊರಿನ ಕೆರೆಯು ಒಣಗಿರುವುದನ್ನು ಕಂಡು ಮೇಘಪಂಕ್ತಿಗಳಿಂದ ಆ ಕೆರೆ ತುಂಬುವಷ್ಟು ಮಳೆಯನ್ನು ಸುರಿಸಿ, ಜನರಿಗೆ ಅಪಾರವಿಸ್ಮಯವನ್ನುಂಟು ಮಾಡಿದರು.

- ♣ ವೈದ್ಯನಾಥೇಶ್ವರಕ್ಷೇತ್ರದಲ್ಲಿ ಕೃಷ್ಣಾಮೃತಮಹಾರ್ಣವವನ್ನು ರಚಿಸಿದರು

- ♣ ಕೆಲವು ಕುಹಕಿಗಳು ಇವರು ಸನ್ಯಾಸಿಗಳಾಗಿರುವುದರಿಂದ ಯಜ್ಞಾನುಷ್ಠಾನದ ಪ್ರಕಾರವನ್ನು ಹೆಚ್ಚಾಗಿ ತಿಳಿದಿರಲಾರರು ಎಂಬ ದೃಢನಿಶ್ಚಯದಿಂದ, ಸಭೆಯಲ್ಲಿ ಪ್ರಕಾಶಮಾನರಾಗಿದ್ದ ಆಚಾರ್ಯರನ್ನು ಕುರಿತು ಕರ್ಮವಿಷಯವಾದ ಶ್ರುತಿಗಳ ಗಹನಾರ್ಥವನ್ನು ಕೇಳಿದರು ಮಾತ್ಸರ್ಯದಿಂದ. ಆಚಾರ್ಯರು ಅವರು ಕೇಳಿದ ವೇದಭಾಗಕ್ಕೆ ಅರ್ಥವನ್ನು ವಿವರಿಸುತ್ತಾ, ಸೋರಿಹೋಗುವ ವೇದಗಳ ಸಾರವನ್ನು ಮತ್ತೆ ಸಂಗ್ರಹಿಸಿಕೊಡುವಲ್ಲಿ ನಿಪುಣನಾದ, ಪ್ರಜಾಪತಿಯಾದ ಬ್ರಹ್ಮದೇವರಿಂದ ಷಷ್ಠಕಾಲದಲ್ಲಿ ವಿನಿಯೋಗಿಸಲ್ಪಡುವ "ನಾರಾಶಂಸೀ" ಎಂದು ಆರಂಭವಾಗುವ ಮನೋಹರ ಮಂತ್ರಗಳ ಪ್ರಭೇದವನ್ನೆಲ್ಲಾ ತಿಳಿಸಿದರು. ಇದನ್ನು ಕೇಳಿದ ಪಂಡಿತರೆಲ್ಲಾ ಪಲಾಯನಗೈದರು
- ♣ ದೇವತೆಗಳಿಂದಲೂ ಸುಮಧ್ವವಿಜಯದ ಗಾನ – ದೇವತೆಗಳು, ಗಂಧರ್ವರೇ ಆದಿಯಾಗಿ ಎಲ್ಲರೂ ಶ್ರೀಮದಾಚಾರ್ಯರ ವಿಜಯವನ್ನು ಗಾನದಲ್ಲಿ ಪಾಡಿಮೈಮರೆತರು. ಆಚಾರ್ಯರ ಅನುವಾದವನ್ನೂ, ಮಂದಹಾಸದ ಅವರನ್ನು ದರ್ಶನ ಮಾಡಲು ವಿಸ್ಮಯಭರಿತರಾಗಿ, ಮುನಿಗಳ

ಸಮೂಹದಿಂದ, ಉಪದೇವತೆಗಳಾದ ಗಂಧರ್ವರೊಡಗೂಡಿ ಧಾವಿಸಿದರು. ಅನೇಕವಿಧವಾದ ವಿಶಿಷ್ಟಶಿಷ್ಯರ ಮಧ್ಯದಲ್ಲಿ ಐತರೇಯೋಪನಿಷತ್ತನ್ನು ವ್ಯಾಖ್ಯಾನ ಮಾಡುತ್ತಿದ್ದ ಶ್ರೀಮಧ್ವಾಚಾರ್ಯರಿ ಆ ಸುರಶ್ರೇಷ್ಟರು ಗಗನದಿಂದಲೇ ನಮಸ್ಕರಿಸಿದರು.

## ♣ ಮಧ್ವರ ಹಿರಿಮೆ –

- **ಶ್ರೀಮಂತಂ ಶಶಿವದನಂ ಕುಶೇಶಯಾಕ್ಷಂ ಗಂಭೀರಸ್ವರಮತಿದಿವ್ಯಲಕ್ಷಣಾಢ್ಯಮ್ ।**
  **ಪಶ್ಯಂತಃ ಸ್ವಗುರುಮಥಾರ್ಚಯನ್ ಕೃತಾರ್ಥಾವಾಣ್ಯಾ ತಂ ಹರಿರತಿಪೂರ್ಣಕಾಮಮೇತೇ ॥**
  ಕಾಂತಿಯುಕ್ತರಾದ, ಚಂದ್ರನಂತಹ ಮುಖವುಳ್ಳ, ಕಮಲದಂತಹ ಕಣ್ಣುಗಳ, ಗಂಭೀರಧ್ವನಿಯಿಂದ ಕೂಡಿದ, ಅತ್ಯಂತ ಅಲೌಕಿಕವಾದ ದೇಹ ಲಕ್ಷಣಗಳಿಂದ ಯುಕ್ತರಾದ, ಶ್ರೀಹರಿದರ್ಶನಾದಿ ಜನ್ಯ ಸುಖದಿಂದಾಗಿ ಪೂರ್ಣಕಾಮರಾದ, ತಮ್ಮೆಲ್ಲರ ಗುರುಗಳಾದ ಶ್ರೀಮದಾಚಾರ್ಯರನ್ನು ಕಾಣುತ್ತಾ ಕೃತಕೃತ್ಯರಾದ ಆ ದೇವತೆಗಳು ಅವರನ್ನು ತಮ್ಮ ವಚನಗಳಿಂದ ವಿಶೇಷವಾಗಿ ಪೂಜಿಸತೊಡಗಿದರು.

## ಮಧ್ವಾವತರದ ಫಲಶ್ರುತಿ –

**ಅಹರೋ ದುರಾಗಮತಮಃ ಸ್ವಗೋಗಣೈರಕರೋರ್ಮುಕುಂದಗುಣವೃಂದದರ್ಶನಮ್ ।**
**ಅಜಯಶ್ಚತುರ್ದಶ ಜಗಂತಿ ಸದ್ಗುಣೈಃ ಶರಣಂ ಗುರೋ ಕರುಣಯಾऽಪಿ ನೋ ಭವೇಃ ॥**

ಶ್ರೀಮದಾಚಾರ್ಯರಲ್ಲಿ ಬೇಡಿಕೆ – ತಮ್ಮ ವಚನಸಮೂಹಗಳಿಂದ ದುಃಶಾಸ್ತ್ರಗಳೆಂಬ ಕತ್ತಲೆಯನ್ನು ಪರಿಹರಿಸಿರುವಿರಿ. ಮುಕುಂದನಾದ್ ಶ್ರೀಹರಿಯ ಗುಣವೃಂದವನ್ನು ತೋರಿಸಿರುವಿರಿ. ಸದ್ಗುಣಗಳಿಂದ ಹದಿನಾಲ್ಕು ಲೋಕಗಳನ್ನು ಜಯಿಸಿರುವಿರಿ. ಅಂತಹ ತಾವು ಕರುಣೆಯಿಂದ ನಮಗೆ ಆಸರೆಯಾಗಿರಿ.

**ನಮಸ್ತೇ ಪ್ರಾಣೇಶ ಪ್ರಣತವಿಭವಾಯಾವನಿಮಗಾ**
**ನಮಃ ಸ್ವಾಮಿನ್ ರಾಮಪ್ರಯತಮ ಹನೂಮನ್ ಗುರುಗುಣ ।**
**ನಮಸ್ತುಭ್ಯಂ ಭೀಮ ಪ್ರಬಲತಮ ಕೃಷ್ಣೇಷ್ಟ ಭಗವನ್**
**ನಮಃ ಶ್ರೀಮನ್ಮಧ್ವ ಪ್ರದಿಶ ಸುದೃಶಂ ನೋ ಜಯ ಜಯ ॥**

ಸಕಲ ಇಂದ್ರಿಯಗಳಿಗೆ ನಿಯಾಮಕರಾದ ಶ್ರೀ ಮುಖ್ಯಪ್ರಾಣದೇವರೇ । ತಾವು ಭೂಮಿಯಲ್ಲಿ ಅವತಾರ ಮಾಡಿದ ಉದ್ದೇಶ ಸಜ್ಜನರಿಗೆ ತತ್ತ್ವಜ್ಞಾನಾದಿ ಐಶ್ವರ್ಯಾದಿಗಳನ್ನು ಕರುಣಿಸಲು. ಅಂತಹ ತಮಗೆ ನಮಸ್ಕಾರ. ಶ್ರೀರಾಮಚಂದ್ರದೇವರಿಗೆ ಅತ್ಯಂತ ಪ್ರೀತಿಪಾತ್ರರಾದ, ಮಹಾಗುಣಾಗಳನ್ನು ಹೊಂದಿರುವ

ಹನುಮಂತದೇವರೇ ನಿಮಗೆ ನಮಸ್ಕಾರ. ಅತ್ಯಂತ ಬಲಶಾಲಿಗಳಾದ, ಶ್ರೀಕೃಷ್ಣನಿಗೆ ಪರಮಪ್ರಿಯರಾದ, ಜ್ಞಾನಾದಿ ಐಶ್ವರ್ಯ ಪೂರ್ಣನಾದ ಶ್ರೀ ಭೀಮಸೇನದೇವರಿಗೂ ನಮಸ್ಕಾರ. ಶ್ರೀಮನ್ಮಧ್ವಾಚಾರ್ಯರೇ ನೀವು ದಯಪಾಲಿಸಿದ ಉತ್ತಮ ಜ್ಞಾನಕ್ಕಾಗಿ ನಿಮಗೆ ನಮಸ್ಕಾರ. ಈರೀತಿಯಾಗಿ ಶ್ರೀಮಧ್ವಾಚಾರ್ಯರನ್ನು ದೇವತಾವೃಂದ ಸ್ತುತಿಸಿ ಶ್ರೀಮದಾಚಾರ್ಯರ ಮೇಲೆ ಪುಷ್ಪವೃಷ್ಟಿ ಮಾಡಿತು.

**ಇತಿ ನಿಗದಿತವಂತಸ್ತತ್ರ ವೃಂದಾರಕೇಂದ್ರಾ**
**ಗುರುವಿಜಯಮಹಂ ತಂ ಲಾಲಯಂತೋ ಮಹಾಂತಮ್ ।**
**ವವೃಷುರಖಿಲದೃಶ್ಯಂ ಪುಷ್ಪವಾರಂ ಸುಗಂಧಂ**
**ಹರಿದಯಿತವರಿಷ್ಠೇ ಶ್ರೀಮದಾನಂದತೀರ್ಥೇ ॥**

ಅಂತರಿಕ್ಷದಲ್ಲಿ ನೆರೆದ ಇಂದ್ರಾದಿ ಶ್ರೇಷ್ಟದೇವತೆಗಳು ಪ್ರಾರ್ಥಿಸುತ್ತಾ, ಶ್ರೀ ಮಧ್ವರ ವಿಜಯಮಹೋತ್ಸವವನ್ನು ಆದರಿಸುತ್ತ, ಮಧ್ವರ ಮೇಲೆ ಅತ್ಯಂತ ಪರಿಮಳಭರಿತವಾದ ದೇವಲೋಕದ ಪುಷ್ಪರಾಶಿಯನ್ನು ಮಳೆಗರೆದರು. ಅಂತಹ ಪುಷ್ಪರಾಶಿಯಲ್ಲಿ ಶ್ರೀಮದಾಚಾರ್ಯರು ಅದೃಶ್ಯರಾಗಿ ಬದರಿಗೆ ತೆರಳಿದರೆಂದೂ, ತಮ್ಮ ವಿಯೋಗದಿಂದ ದು:ಖಿತರಾದ ಶಿಷ್ಯರಿಗೆ ತಾವು ಒಂದಂಶದಿಂದ ಆ ಸ್ಥಳದಲ್ಲಿ ಸದಾ ಸನ್ನಿಹಿತರಾಗಿರುವುದಾಗಿ ನುಡಿದು ಸಾಂತ್ವನಗೊಳಿಸಿದರು.

ಶ್ರೀಮಧ್ವರು ಅದೃಶ್ಯರಾಗಿ ರೂಪ್ಯಪೀಠದಲ್ಲೂ, ದೃಶ್ಯರಾಗಿ ಉತ್ತರಬದರೀಯಲ್ಲೂ ಅದ್ಯಾಪಿ ಇರುವರೆಂದು ಬಹುಪ್ರಮಾಣಗಳಿಂದ ಸಿದ್ದವಾಗಿದೆ. ಅವರು ಶ್ರೀವೇದವ್ಯಾಸರ ಸನ್ನಿಧಿಯಲ್ಲಿ ಒಟ್ಟು ದೇವಮಾನದ ನೂರು ವರ್ಷಗಳ ಕಾಲ ಸಾಕ್ಷಾತ್ ಸೇವೆ ಸಲ್ಲಿಸಿ ಅನಂತರ ತಮ್ಮ

ಮೂಲರೂಪದೊಂದಿಗೆ ಐಕ್ಯ ಹೊಂದುವರು ಎಂದೂ ಶ್ರೀ ವಾದಿರಾಜರು ಬರೆದಿರುವರು. ಶ್ರೀಮಧ್ವಾಚಾರ್ಯರು **79** ವರ್ಷಗಳ ಕಾಲ ನಮ್ಮ ಕಣ್ಣಿಗೆ ಕಾಣಿಸಿಕೊಂಡರು. **ಪಿಂಗಳ ನಾಮ ಸಂವತ್ಸರ ಮಾಘ ಶುದ್ಧ ನವಮಿ 1280ನೇ ಇಸವಿಯಲ್ಲಿ ಬದರಿಗೆ ಪ್ರಯಾಣಿಸಿದರು.**

**“ಶ್ರೀಕೃಷ್ಣಾರ್ಪಣಮಸ್ತು”**